ಕವಿ ಕಾವ್ಯ ಪರಂಪರೆ

3

# ಎರಡನೆಯ
# ನಾಗವರ್ಮ

ಸಂಪಾದಕರು
ವಿ. ಸೀತಾರಾಮಯ್ಯ

ಲೇಖಕರು
ಪ್ರೊ. ಎಚ್. ಎಂ. ಶಂಕರನಾರಾಯಣರಾವ್
ವಿದ್ವಾನ್ ಎಂ. ರಾಜಗೋಪಾಲಾಚಾರ್ಯ
ವಿದ್ವಾನ್ ಎನ್. ರಂಗನಾಥಶರ್ಮ

# ಎರಡನೆಯ ನಾಗವರ್ಮ

## ಭಾಗ : ಮೂರು

# ಕಾವ್ಯಾವಲೋಕನ

ಎನ್. ರಂಗನಾಥಶರ್ಮಾ

# III

## ಕಾವ್ಯಾವಲೋಕನ

### 1 ಕಾವ್ಯಮಲವ್ಯಾವೃತ್ತಿ

ಇಲ್ಲಿ ಕಾವ್ಯಸಂಬಂಧಿ ವಿಚಾರಗಳು ಆರಂಭವಾಗುತ್ತವೆ. ಸಾಂಪ್ರದಾಯಿಕವಾಗಿ ಕಾವ್ಯದ ಹೇತು, ಪ್ರಯೋಜನ, ಲಕ್ಷಣಗಳನ್ನು ನಾಗವರ್ಮನು ಹೇಳುತ್ತಾನೆ. ಪ್ರತಿಭಾನ, ಕಾವ್ಯವಿದ್ಯಾಪ್ರಚಯಪರಿಚಯ, ವೃದ್ಧಸೇವಾನುರಾಗ, ಸತತಾಭ್ಯಾಸ ಪ್ರಯತ್ನ – ಈ ನಾಲ್ಕು ಕಾವ್ಯೋತ್ಪತ್ತಿಗೆ ಕಾರಣ. ಇವುಗಳಲ್ಲಿ ಪ್ರತಿಭೆಯು ಒಂದು ಶಕ್ತಿವಿಶೇಷ. ವೃದ್ಧನೆಂದರೆ ಶಾಸ್ತ್ರಜ್ಞ. ನಾಗವರ್ಮನಿಗೆ ಉಪಜೀವ್ಯರಾದ ದಂಡಿ ಪ್ರಭೃತಿಗಳು ವೃದ್ಧಸೇವಾನುರಾಗವನ್ನು ಕಾವ್ಯಹೇತುಗಳಲ್ಲಿ ಸೇರಿಸಿಲ್ಲ. ಕವಿರಾಜಮಾರ್ಗಕಾರನಾದರೊ 'ಪರಮಬುಧೋಪಾಸನಮುಂ' ಎಂದು ಹೇಳಿ, ಇದನ್ನು ಕಾವ್ಯಹೇತುಗಳಲ್ಲಿ ಸೇರಿಸಿದ್ದಾನೆ. 'ಕಾವ್ಯಜ್ಞಶಿಕ್ಷಯಾಭ್ಯಾಸಃ' ಎಂದ ಮಮ್ಮಟನು ಅಭ್ಯಾಸವು ಕಾವ್ಯಜ್ಞರ ನೇತೃತ್ವದಲ್ಲಿ ನಡೆಯಬೇಕೆಂದು ಸೂಚಿಸಿದ್ದಾನೆ. ಪರಮಪ್ರೀತಿ, ಯಶಸ್ಸು, ಇಹಪರಗಳು – ಕಾವ್ಯನಿರ್ಮಾಣದಿಂದ ಲಭಿಸುತ್ತವೆಯಾದ್ದರಿಂದ 'ಬಂಧುರಕಾವ್ಯನಿಬಂಧದಿಂ ಹಿತಂ ಪೆಱತುಂಟೇ' ಎನ್ನುತ್ತಾನೆ ನಾಗವರ್ಮ. ಮಮ್ಮಟನು ಹೇಳಿದ ಧನಪ್ರಾಪ್ತಿ, ಶಿವೇತರಕ್ಷತಿ - ಮುಂತಾದ ಪ್ರಯೋಜನಗಳನ್ನು ಇಹಪರಗಳೆಂಬುದರಲ್ಲಿ ಅಂತರ್ಭಾವ ಮಾಡಬಹುದು.

ಕಾವ್ಯಲಕ್ಷಣವನ್ನೂ ಶಬ್ದಾರ್ಥಗಳ ಸ್ವರೂಪವನ್ನೂ ತಿಳಿಸುತ್ತ ಗ್ರಂಥಕಾರನು ಹೇಳುತ್ತಾನೆ :

> ಇರೆ ಶಬ್ದಾರ್ಥಂಗಳ್ ತ
> ತ್ಪರತೆಯಿನದು ಕಾವ್ಯ ಮದಱೊಳುಚಿತೈಕಾರ್ಥಾಂ
> ತರವಾಚಿ ಶಬ್ದಮವಭಾ
> ಸರೂಪಮಾಹ್ಲಾದಕಾರಿಯಪ್ಪುದದರ್ಥಂ — 430

'ಶಬ್ದಾರ್ಥಂಗಳ್ ತತ್ಪರತೆಯಿನ್ ಇರೆ ಅದು ಕಾವ್ಯಂ.' ತತ್ಪರತೆಯೆಂದರೇನು? ಶಬ್ದಾರ್ಥಗಳೆರಡೂ ತತ್ಪರತೆಯಿಂದಿರಬೇಕೆಂದು ಹೇಳಲಾಗಿದೆ. ಇಲ್ಲಿ ಶಬ್ದಾರ್ಥಗಳೆರಡರಿಂದ ಅತಿರಿಕ್ತವಾದ್ದನ್ನು 'ತತ್' ಪದದಿಂದ ತೆಗೆದುಕೊಳ್ಳಬೇಕಾಗುತ್ತದೆ.

'ಪರಮಪ್ರೀತಿ' ಎಂಬ ಪ್ರಯೋಜನವನ್ನು 'ತತ್' ಪದದಿಂದ ತೆಗೆದುಕೊಂಡರೆ, ಕಾವ್ಯಲಕ್ಷಣ ಸರಿಹೋಗುತ್ತದೆ. ಸಹೃದಯ ಸಂವೇದ್ಯವಾದ ಚಮತ್ಕಾರವೇ ಪರಮಪ್ರೀತಿ. ಅಂತಹ ಪರಮಪ್ರೀತಿಯನ್ನು ಕಾವ್ಯದಲ್ಲಿ ಶಬ್ದಾರ್ಥಗಳು ನಿಷ್ಠೆಯಿಂದ ಪ್ರತಿಪಾದಿಸುತ್ತಿರಬೇಕು. ಶಬ್ದಾರ್ಥಯುಗಳವು ಕಾವ್ಯಶಬ್ದದ ವಾಚ್ಯವೆಂದು ನಾಗವರ್ಮನ ಆಶಯವಾಗಿ ತೋರುತ್ತದೆ. 'ಶಬ್ದಾರ್ಥೌ ಸಹಿತೌ ಕಾವ್ಯಂ' ಎಂದು ಭಾಮಹನು ಹೇಳಿದ್ದಾನೆ. ಆಹ್ಲಾದಜನಕಗಳಾದ ಶಬ್ದಾರ್ಥಗಳು ಕಾವ್ಯವೆಂದು ಕಾವ್ಯಲಕ್ಷಣವು ಪರ್ಯವಸಿತವಾಗುತ್ತದೆ.

ಕಾವ್ಯದಲ್ಲಿ ಶಬ್ದಸ್ವರೂಪವೇನು ? 'ಉಚಿತೈಕಾರ್ಥಾಂತರವಾಚಿ ಶಬ್ದಂ'–ಈ ಲಕ್ಷಣದಲ್ಲಿ 'ಅರ್ಥಾಂತರವಾಚಿ' ಎಂಬ ಶಬ್ದದ ಕಡೆಗೆ ವಿದ್ವಜ್ಜನರ ಗಮನವನ್ನು ಸೆಳೆಯಬೇಕಾಗಿದೆ. 'ಅರ್ಥವಾಚಿ ಶಬ್ದಂ' ಎಂದು ಹೇಳದೆ, 'ಅರ್ಥಾಂತರವಾಚಿ ಶಬ್ದಂ' ಎಂದದ್ದೇಕೆ ? ಅರ್ಥಾಂತರವೆಂದರೆ ಪ್ರಕೃತಾರ್ಥಕ್ಕಿಂತ ಅನ್ಯವಾದ ಇನ್ನೊಂದು ಅರ್ಥ ಎಂದಲ್ಲವೆ ? ಆ ಇನ್ನೊಂದು ಅರ್ಥ ಯಾವುದು ? ಧ್ವನಿವಾದಿಗಳು ಹೇಳುವ ವ್ಯಂಗ್ಯಾರ್ಥವಾಗಿರಬಹುದೆ ? ಆ ಶಬ್ದವು ಪಾರಿಭಾಷಿಕವಾಗಿ ವ್ಯಂಗ್ಯದ 'ವಾಚಿ' ಯಲ್ಲ; ವ್ಯಂಜಕ. ಆದರೂ ವ್ಯಂಜನಾವೃತ್ತಿಯ ಸ್ಫುಟಪ್ರತಿಪಾದನೆಯಿಲ್ಲದ ಸಮಯದಲ್ಲಿ 'ವಾಚಿ'ಯೆಂಬ ಶಬ್ದವು ಬೋಧಕ, ಪ್ರತಿಪಾದಕ ಎಂಬರ್ಥದಲ್ಲಿ ಪ್ರಯುಕ್ತವಾಗಬಹುದು. ಆನಂದವರ್ಧನನ ತರುವಾಯ ವಾಚ್ಯವ್ಯಂಗ್ಯಗಳ ಭೇದವನ್ನು ಲಕ್ಷಿಸಿ, ಲಾಕ್ಷಣಿಕರು ವಾಚಕ, ವ್ಯಂಜಕ ಎಂಬ ಶಬ್ದಗಳನ್ನು ಬಳಸುತ್ತಿದ್ದಾರೆ. ಪ್ರಾಚೀನಸಾಹಿತ್ಯಗ್ರಂಥಗಳಲ್ಲಿಯೂ ವ್ಯಾಕರಣಾದಿ ಶಾಸ್ತ್ರಗ್ರಂಥಗಳಲ್ಲಿಯೂ ಈ ಭೇದವನ್ನು ಲಕ್ಷಿಸದೆ ಮಾಡಿರುವ ಸಮ್ಮಿಶ್ರ ವ್ಯವಹಾರವು ಬೇಕಾದಷ್ಟು ಕಂಡು ಬರುತ್ತದೆ. ಅರ್ಥಾಂತರವನ್ನು ವಾಚ್ಯವಾಗಿಯೇ ಬೋಧಿಸಿದರೆ, ಅದು ಶ್ಲೇಷಕಾವ್ಯವಾದೀತು. ಕಾವ್ಯ ಸಾಮಾನ್ಯಲಕ್ಷಣದಲ್ಲಿ ಶ್ಲೇಷಾರ್ಥಬೋಧಕವಾದ ಶಬ್ದವನ್ನು ಸೇರಿಸಲು ಶಕ್ಯವಿಲ್ಲ. ಆದ್ದರಿಂದ ಅರ್ಥಾಂತರವೆಂದರೆ ವ್ಯಂಗ್ಯಾರ್ಥವೆಂದೇ ನಾಗವರ್ಮನ ಆಶಯವಾಗಿದೆಯೆನಿಸುತ್ತದೆ.

ಇನ್ನು – 'ಅವಭಾಸರೂಪ' ಎಂದರೇನು ? 'ಪ್ರತೀತಿ' ಎಂದು ಶಬ್ದಾರ್ಥವಾಗುತ್ತದೆ. ಪ್ರತೀತಿಯೇ ಅರ್ಥವಲ್ಲ, ಪ್ರತೀತಿಗೆ ವಿಷಯವಾಗತಕ್ಕದ್ದು ಅರ್ಥ. ಆದ್ದರಿಂದ 'ಅವಭಾಸ್ಯತೇ ಇತಿ ಅವಭಾಸಃ' ಎಂಬ ವ್ಯುತ್ಪತ್ತಿಯಿಂದ ಕರ್ಮಾರ್ಥವನ್ನು ಹೇಳಬೇಕಾಗುತ್ತದೆ. 'ಅವಭಾಸೇನ ಜ್ಞಾನೇನ ರೂಪ್ಯತೇ ವಿಷಯೀಕ್ರಿಯತೇ ಇತ್ಯವಭಾಸರೂಪಂ' ಎಂದಾದರೂ ವ್ಯುತ್ಪತ್ತಿಯನ್ನು ಹೇಳಬಹುದು. ಒಟ್ಟಿನಲ್ಲಿ ಜ್ಞಾನಗೋಚರವಾದದ್ದು ಅವಭಾಸರೂಪ. ಅರ್ಥವು ಶಬ್ದದಿಂದ ಪ್ರತೀ

ಯುಮಾನವಾಗಿ ಆಹ್ಲಾದಕಾರಿಯಾಗಿರಬೇಕು ಎಂದು ಹೇಳಿದಂತಾಯಿತು. ಈ ಅರ್ಥವು ಪಾರಿಭಾಷಿಕವಾಗಿ ಅಭಿಧೆಯಿಂದಲೊ ಲಕ್ಷಣೆಯಿಂದಲೊ ವ್ಯಂಜನೆಯಿಂದಲೊ ಪ್ರತೀತವಾಗಬಹುದು.

ಕಾವ್ಯಪುರುಷನಿಗೆ ಪದರಚನಾತಿಶಯವಾದ ರೀತಿ ಶರೀರ. ರಸಭಾವಗಳು ಜೀವ:

> ರೀತಿ ವಿನೂತ್ನ ವಸ್ತುಕೃತಿಗೊಪ್ಪುವ ಮೆಯ್; ರಸಭಾವವೃತ್ತಿನಿ–
> ರ್ಣೀತಿಯೆ ಜೀವಂ........
>
> — ಕಾವ್ಯಾ. ಪ. 780

ವಾಮನನು 'ರೀತಿರಾತ್ಮಾಕಾವ್ಯಸ್ಯ' ಎಂದು ಹೇಳಿದರೆ, ನಾಗವರ್ಮನು ಕಾವ್ಯಕ್ಕೆ ರೀತಿ ಮೆಯ್ ಎಂದಿದ್ದಾನೆ. 'ರಸಭಾವವೃತ್ತಿನಿರ್ಣೀತಿಯೆ ಜೀವಂ' ಎಂದರೆ, ನಿರ್ಣೀತವಾಗುವ ರಸಭಾವಗಳು ಜೀವ ಎಂಬ ಅಭಿಪ್ರಾಯ ಹೊಮ್ಮುವುದು. ನಿರ್ಣೀತವಾಗುವುದು ಅಭಿಧಾವೃತ್ತಿಯಿಂದಲೊ ? ವ್ಯಂಜನಾವೃತ್ತಿಯಿಂದಲೊ ? ನಾಗವರ್ಮನ ಆಶಯವೇನೆಂಬುದನ್ನು ಮುಂದೆ ವಿಮರ್ಶಿಸಲಾಗುತ್ತದೆ. ಪ್ರಕೃತದಲ್ಲಿ ರಸಭಾವಗಳು ಜೀವ ಎಂಬ ಅಭಿಪ್ರಾಯವು ನಾಗವರ್ಮನ ಸ್ವಕೀಯ ವಿಮರ್ಶೆಯ ಫಲವೊ ಇತರ ಆಲಂಕಾರಿಕ ಸಿದ್ಧಾಂತದ ಅನುಕರಣವೊ ಎಂಬ ಶಂಕೆ ಮೂಡುತ್ತದೆ. ಇವನ ಉಪಜೀವ್ಯರಾದ ಭಾಮಹಾದಿಗಳು 'ರಸಭಾವಗಳು ಕಾವ್ಯದ ಜೀವ' ಎಂದು ಹೇಳಿದಂತೆ ಕಂಡು ಬರುವುದಿಲ್ಲ. 'ಇತಿ ವೈದರ್ಭಮಾರ್ಗಸ್ಯ ಪ್ರಾಣಾ ದಶಗುಣಾಃ ಸ್ಮೃತಾಃ' ಎಂದು ದಂಡಿಯು ಗುಣಗಳನ್ನು ಪ್ರಾಣವೆಂದು ಕರೆದಿದ್ದಾನೆ. ಆದರೆ ಪ್ರತೀಹಾರೇಂದು ರಾಜನು ಕಾವ್ಯಾಲಂಕಾರಸಾರಲಘುವೃತ್ತಿಯಲ್ಲಿ ಕೆಳಗಿನ ಪ್ರಾಚೀನ ಶ್ಲೋಕವನ್ನು ಉದಾಹರಿಸಿದ್ದಾನೆ :

> ರಸಾದ್ಯಧಿಷ್ಠಿತಂ ಕಾವ್ಯಂ ಜೀವದ್ರೂಪತಯಾ ಯತಃ
> ಕಥ್ಯತೇ ತದ್ರಸಾದೀನಾಂ ಕಾವ್ಯಾತ್ಮತ್ವಂ ವ್ಯವಸ್ಥಿತಮ್

ಈ ಶ್ಲೋಕದ ಪ್ರಕಾರ ರಸಾದಿಗಳು ಕಾವ್ಯದ ಜೀವವೆಂದು ಹಿಂದೆಯೇ ನಿರ್ಣೀತವಾಗಿತ್ತೆಂದು ತಿಳಿದು ಬರುತ್ತದೆ. ಆದ್ದರಿಂದ 'ರಸಭಾವವೃತ್ತಿ ನಿರ್ಣೀತಿಯೆ ಜೀವಂ' ಎಂಬುದು ಪೂರ್ವಸಿದ್ಧಾಂತದ ಅನುಮೋದನೆಯೆಂದೇ ಹೇಳಬೇಕಾಗುತ್ತದೆ.

ವಿಶಿಷ್ಟ ಪದರಚನೆ ರೀತಿ. ರಚನಾವಿಶಿಷ್ಟವಾದ ಶಬ್ದವು ಕಾವ್ಯದ ಮೆಯ್, ರಸಭಾವಗಳು ಜೀವ – ಎಂದಾದಮೇಲೆ, ಅರ್ಥದ ಸ್ಥಾನಯಾವುದು ? ಎಂಬ ಪ್ರಶ್ನೆ ಏಳಬಹುದು. ಇದಕ್ಕೆ ಉತ್ತರವನ್ನು ನಾಗವರ್ಮನು ಸ್ಫುಟವಾಗಿ ಹೇಳ

ಲಿಲ್ಲವಾದರೂ ಅರ್ಥವನ್ನು ಅವನು ಜೀವಸ್ಥಾನೀಯುವಾಗಿ ಪರಿಗಣಿಸಿದ್ದನೆಂದು ಹೇಳಬಹುದು. 'ರಸಭಾವವೃತ್ತಿನಿರ್ಣೀತಿಯೆ ಜೀವಂ' ಎಂಬಲ್ಲಿ ರಸಭಾವಗಳೂ ಶಬ್ದಪ್ರತಿಪಾದ್ಯಗಳಾದ್ದರಿಂದ ಅರ್ಥಕೋಟಿಯಲ್ಲಿ ಸೇರುತ್ತವೆಯೆಂಬುದು ಸ್ಪಷ್ಟ. ವಾಚ್ಯಾರ್ಥವನ್ನು ಸಹ 'ರಸಭಾವವೃತ್ತಿ' ಯಲ್ಲಿ ಅಂತರ್ಭಾವಮಾಡುವುದು ಉತ್ತಮ. ಇಲ್ಲದಿದ್ದರೆ ವಾಚ್ಯಾರ್ಥದ ಸ್ಥಾನ ಅನಿರ್ಣೀತವಾಗಿ ಉಳಿಯುತ್ತದೆ. 'ರಸಾದೀನಾಂ ಕಾವ್ಯಾತ್ಮತ್ವಂ ವ್ಯವಸ್ಥಿತಂ' ಎಂಬುದಾಗಿ ಪ್ರತೀಹಾರೇಂದು ವಿನಿಂದ ಉದಾಹೃತವಾದ ಪ್ರಾಚೀನ ಪದ್ಯದಲ್ಲಿ 'ರಸಾದೀನಾಂ'ಎಂದು ಬಹುವಚನ ವಿದೆ. ಬಹುವಚನ ಸ್ವಾರಸ್ಯದಿಂದ ವಾಚ್ಯಾರ್ಥವನ್ನು ಸಂಗ್ರಹಿಸುವುದು ಅನುಚಿತ ವಾಗಲಾರದು. ಈ ರೀತಿಯಲ್ಲಿ ನಾಗವರ್ಮನ ಮತದಂತೆ 'ಕಾವ್ಯದ ಶರೀರ ಶಬ್ದ. ಅರ್ಥಗಳು ಆತ್ಮ. ಶಬ್ದವು ಅರ್ಥಾಂತರವಾಚಿಯಾಗಿರಬೇಕು. ಅರ್ಥವು ಆಹ್ಲಾದ ಕಾರಿಯಾಗಿರಬೇಕು' ಎಂಬ ಆಶಯ ಏರ್ಪಡುತ್ತದೆ.

'ಕೃತಿಸತಿಯು ಮೆಯ್ಯೊಳೆಳ್ಳನಿತು ದೋಷಮಾಗೆ ತದಾವರ್ಜಿತ ಕೀರ್ತಿ ನಿಂದಿತ ಮಕ್ಕುಂ' ಎನ್ನುತ್ತಾನೆ ನಾಗವರ್ಮ. ದೋಷಯುಕ್ತವಾದ ಕಾವ್ಯವು ಮಾಸಿದ ಕನ್ನಡಿಯ ಹಾಗೆ. ಕಾವ್ಯವು ಸುಂದರವಾದರೂ ದೋಷವಿದ್ದರೆ ಅರೋಚಕ. ಅದು ತೊನ್ನು ಹಿಡಿದ ದೇಹವಿದ್ದಂತೆ. 'ಸ್ಯಾದ್ವಪುಃ ಸುಂದರಮಪಿ ಶ್ವಿತ್ರೇಣೈಕೇನ ದುರ್ಭಗಂ'

— ಕಾವ್ಯಾದರ್ಶ I – 7

ಪದ – ಪದಾರ್ಥದೋಷ, ವಾಕ್ಯ–ವಾಕ್ಯಾರ್ಥದೋಷ ಎಂದು ಎರಡು ವಿಭಾಗಗಳನ್ನು ಮಾಡಿರುವ ನಾಗವರ್ಮನು ಪದದೋಷ ಯಾವುದು, ಪದಾರ್ಥ ದೋಷ ಯಾವುದು, ವಾಕ್ಯದೋಷ ಯಾವುದು, ವಾಕ್ಯಾರ್ಥದೋಷ ಯಾವುದು ಎಂದು ಸ್ಪಷ್ಟವಾಗಿ ವಿಂಗಡಿಸಿಲ್ಲ. ಈಚಿನ ಅಲಂಕಾರಿಕರು ಹೇಳಿದ ರಸದೋಷಗ ಳನ್ನು ಕೈಬಿಟ್ಟಿದ್ದಾನೆ. ಮಾಡಿರುವ ವಿಭಾಗವೂ ಅಷ್ಟು ತರ್ಕಶುದ್ಧವಾಗಿದೆಯೆಂದು ಹೇಳಲಾಗದು. ದೋಷಗಳ ಪರಿಗಣನೆಯಲ್ಲಿಯೂ ಸಾಕಲ್ಯವಿಲ್ಲ. ಪ್ರಧಾನವಾದ ಕೆಲವು ದೋಷಗಳನ್ನು ನಿರೂಪಿಸಿದ್ದಾನೆ.

ಅಸಮರ್ಥವೇ ಮೊದಲಾದ ಆರು ಪದದೋಷಗಳನ್ನೂ ವ್ಯವಹಿತವೇ ಮೊದಲಾದ ಏಳು ವಾಕ್ಯದೋಷಗಳನ್ನೂ ಲಕ್ಷಿಸಿ ಉದಾಹರಣೆಗಳೊಡನೆ ನಾಗ ವರ್ಮನು ವಿವರಿಸಿದ್ದಾನೆ. ಇದು ಅಸಮರ್ಥವೆಂಬ ಪದದೋಷದ ಲಕ್ಷಣ :

ತೆಱದಿರೆ ತದ್ವಾಚಕತೆಯು
ನೞಿಪಲ್ ನೆಱೆಯದುದೆ ಕೃತಿಯೊಳಸಮರ್ಥಪದಂ — 436

**ಉದಾಹರಣೆ :**

ಉರಗಾಳಿ ನಂದನಾವಳಿ
ತರತರದಿಂದೆೞಗಿ ಜಳಭೃದಂತಿಕದೊಳ್ ಮಾ
ಣ್ದಿರದೆ ಕುಡಿದುಪ್ಪುನೀರಂ
ಧರೆಗಿನಿದಂ ಕಱೆವುದಿಂತಿದೇಂ ವಿಸ್ಮಯಮೋ — 437

ಇಲ್ಲಿ 'ಉರಗಾಳಿ ನಂದನಾವಳಿ' 'ಜಳಭೃತ್' – ಈ ಪದಗಳು ವಿವಕ್ಷಿತಾರ್ಥವನ್ನು ಬೋಧಿಸಲು ಅಸಮರ್ಥವಾಗಿವೆಯೆಂದು ಅಭಿಪ್ರಾಯ. ಉರಗಾಳಿ = ಸರ್ಪಸಂಘಕ್ಕೆ, ನಂದನಾವಳಿ = ಆನಂದವನ್ನು ಕೊಡತಕ್ಕ ವಾಯುಸಂಘಾತ, ಜಳಭೃತ್ = ಸಮುದ್ರ – ಎಂಬುದು ವಿವಕ್ಷಿತಾರ್ಥ. ಈ ಶಬ್ದಗಳು ವಾಯು, ಸಮುದ್ರ ಎಂಬ ಅರ್ಥದಲ್ಲಿ ಅಪ್ರಸಿದ್ಧವಾದ್ದರಿಂದ ಅಸಮರ್ಥಪದಗಳು.

ಕೆಲವು ದೋಷಗಳಿಗೆ ಅಪವಾದಗಳುಂಟು. ಕರಿಕಳಭ, ಶಿರಶ್ಶೇಖರ, ನವಪುಷ್ಪಮಾಲೆ, ಮೌಕ್ತಿಕ ಭಾಸುರಹಾರಯಷ್ಟಿ ಮೊದಲಾದವುಗಳಲ್ಲಿ ಪುನರುಕ್ತಿದೋಷವಿಲ್ಲ. ಏಕೆಂದರೆ, ಇವು ಪರಂಪರೆಯಿಂದ ಪ್ರಯುಕ್ತವಾದ ಶಬ್ದಗಳು.

## ಗು ಣ ವಿ ವೇ ಕ

### 1 ಗುಣಗಳು

ಕಾವ್ಯವಧುವಿನಲ್ಲಿ ನಿರ್ದೋಷತೆಯು ಪ್ರಥಮಾಪೇಕ್ಷಿತ. ಇಷ್ಟರಿಂದಲೇ ಸಹೃದಯನಿಗೆ ಪರಮಾನಂದ ಉಂಟಾಗದು. ಅವಳಲ್ಲಿ ಸದ್ಗುಣಗಳೂ ಅಪೇಕ್ಷಿತ. ಗುಣಗಳಿಂದ ಕಾವ್ಯದ ಶೋಭೆ ಹೆಚ್ಚುತ್ತದೆ.

ನಿರತಿಶಯ ಕಾವ್ಯಶೋಭಾ
ಕರಂಗಳಾಗಿರ್ಪ ಧರ್ಮಮವು ಗುಣಮಕ್ಕುಂ
ಪರಮಪುರಾಣ ಕವೀಶ್ವರ
ನಿರೂಪಿತಂಗಳ್ ವಿಚಿತ್ರಮಾರ್ಗಯುತಂಗಳ್ — 499

ಸಮತೆ, ಶ್ಲೇಷ, ಅರ್ಥವ್ಯಕ್ತಿ, ಮಾಧುರ್ಯ, ಕಾಂತಿ, ಪ್ರಸನ್ನತೆ, ಸೌಕುಮಾರ್ಯ, ಓಜಸ್ಸು, ಔದಾರ್ಯ, ಸಮಾಧಿ – ಎಂಬ ಹತ್ತು ಗುಣಗಳನ್ನು ನಾಗವರ್ಮನು ಹೇಳುತ್ತಾನೆ. ಇವೆಲ್ಲವೂ ವಾಮನ, ದಂಡಿ – ಮುಂತಾದ ಪ್ರಾಚೀನಾಲಂಕಾರಿಕರು ಪರಿಗ್ರಹಿಸಿದವೇ.

ಉದಾಹರಣಪದ್ಯಗಳನ್ನು ಪರಿಶೀಲಿಸಿದಲ್ಲಿ ಕೆಲವು ಶಬ್ದನಿಷ್ಠಗಳಾಗಿಯೂ ಕೆಲವು ಅರ್ಥನಿಷ್ಠಗಳಾಗಿಯೂ ತೋರುತ್ತವೆ. ದೃಷ್ಟಾಂತವಾಗಿ ಸಮಾಧಿಯೆಂಬ ಗುಣವನ್ನು ಪರಿಶೀಲಿಸಬಹುದು.

ಪೆಱವಱ ಧರ್ಮಂಗಳನೇ
ತೆಱದಿಂದಂ ತಂದು ಪೆಱವಱೊಳ್ ಪತ್ತಿಸಿ ಕ
ಣ್ಬೆಱೆಯೆ ಚತುರೋಕ್ತಿ ಕೃತಿಯೊಳ್
ನೆಱೆದಿರೆ ಪೇಟ್ದುದು ಸಮಾಧಿಯೆನೆ ಪೆಸರ್ವಡೆಗುಂ — 519

ಅನ್ಯವಸ್ತುಗಳಲ್ಲಿರುವ ಧರ್ಮವನ್ನು ಮತ್ತೊಂದು ವಸ್ತುವಿನಲ್ಲಿ ಆರೋಪಿಸುವುದು ಸಮಾಧಿಯೆಂದು ಇದರ ತಾತ್ಪರ್ಯ. ಇದಕ್ಕೆ ಉದಾಹರಣೆ:

ವಿನಿಮೀಲಿತ ನೀಲಾಂಬುಜ
ವನಮುನ್ಮೀಲಿತ ನವೀನಕಮಲವನಂ ತ
ದ್ದಿನಮುಖದೊಳ್ ಮಧುಪಾಳಿಗೆ
ಜನಿಯಿಸಿದವು ಪಱೆಯ ಸುಸಿಲ ಪೊಸ ಸುಸಿಲಿಂಪಂ — 520

ವಿನಿಮೀಲನ=ಮುಚ್ಚುವುದು, ಉನ್ಮೀಲನ=ತೆರೆಯುವುದು – ಈ ಎರಡು ಧರ್ಮಗಳು ನೇತ್ರಗಳಿಗೆ ಸಂಬಂಧಿಸಿದವು. ಇವನ್ನು ನೀಲೋತ್ಪಲ ಮತ್ತು ಕಮಲಗಳಲ್ಲಿ ಆರೋಪಿಸಿರುವುದರಿಂದ ಸಮಾಧಿ ಎಂಬ ಗುಣವಾಗುತ್ತದೆಯೆಂದು ಗ್ರಂಥಕಾರನ ಆಶಯ. ಪ್ರಕೃತಾರ್ಥದಲ್ಲಿ ಅಪ್ರಕೃತಾರ್ಥ ಧರ್ಮವನ್ನು ಆರೋಪಿಸಿದ್ದರಿಂದ ಇದು ಅರ್ಥಗುಣವೇ ಹೊರತು ಶಬ್ದಗುಣವಲ್ಲ. ದಂಡಿಯೂ ಇದನ್ನು ಸಮಾಧಿಯೆಂದು ಕರೆದಿದ್ದಾನೆ. ಆತನ ಲಕ್ಷಣ ಹೀಗಿದೆ:

ಅನ್ಯಧರ್ಮಸ್ತತೋಽನ್ಯತ್ರ ಲೋಕಸೀಮಾನುರೋಧಿನಾ
ಸಮ್ಯಗಾಧೀಯತೇ ಯತ್ರ ಸ ಸಮಾಧಿಃ ಸ್ಮೃತೋ ಯಥಾ
— ಕಾವ್ಯಾದರ್ಶ I – 93

ಆದರೆ ದಂಡಿಯಾಗಲಿ ನಾಗವರ್ಮನಾಗಲಿ ಇದನ್ನು ಶಬ್ದಗುಣವೆಂದಾಗಲಿ ಅರ್ಥಗುಣವೆಂದಾಗಲಿ ತಿಳಿಸಿಲ್ಲ.

## 2. ಶಬ್ದಾಲಂಕಾರ

ಹೀಗೆ ದೋಷರಹಿತಳೂ ಗುಣವತಿಯೂ ಆದ ಕಾವ್ಯವಧು ಅಲಂಕಾರಗಳಿಂದ ಅತಿಶಯಶೋಭಾವತಿಯಾಗುತ್ತಾಳೆ. 'ತದತಿಶಯಹೇತವಸ್ತ್ವಲಂಕಾರಾಃ' ಎಂದಿ

ದ್ದಾನೆ ವಾಮನ. ಗುಣವಿವೇಕಾಧಿಕರಣದಲ್ಲಿಯೇ ಶಬ್ದಾಲಂಕಾರಗಳನ್ನೂ ಅರ್ಥಾಲಂಕಾರಗಳನ್ನೂ ನಾಗವರ್ಮನು ವಿವೇಚಿಸುತ್ತಾನೆ. ಅಲಂಕಾರಗಳಿಗಾಗಿ ಪ್ರತ್ಯೇಕವಾದ ಅಧಿಕರಣವನ್ನಾರಂಭಿಸಿಲ್ಲ. ಗುಣಗಳೂ ಅಲಂಕಾರಗಳೂ ಕಾವ್ಯಶೋಭಾಕರಗಳಾದ್ದರಿಂದ ಇವೆಲ್ಲವೂ ಒಂದು ಗುಂಪಿಗೆ ಸೇರತಕ್ಕವೆಂದು ಆತನು ಭಾವಿಸಿರಬೇಕು.

ನಿಜದಿಂದಂ ಚೆಲ್ವಿಗೆ ವಿಬು
ಧಜನಪ್ರಿಯೆಗಖಿಳಲೋಕ ವಿನುತ ಪ್ರಮದಾ
ಗ್ರಜೆಗೆ ಕೃತಿಸತಿಗೆ ಶಬ್ದಾ
ರ್ಥಜಾತಮಂತೆರಡು ತೆರದಲಂಕೃತಿಯಕ್ಕುಂ — 523

ನಾಗವರ್ಮನ ಮತದಂತೆ ಶಬ್ದಾಲಂಕಾರಗಳು ನಾಲ್ಕು : ಯಮಕ, ಅನುಪ್ರಾಸ, ಚಿತ್ರ ಮತ್ತು ವಕ್ರೋಕ್ತಿ. ಯಮಕದಲ್ಲಿ ಪಾದಾದಿ, ಪಾದಮಧ್ಯ, ಪಾದಾಂತ, ಪರಿವೃತ್ತ, ಸಂದಷ್ಟಗಳೇ ಮೊದಲಾಗಿ ಅನೇಕ ಭೇದಗಳು. ಯಮಕದಲ್ಲಿ ಬ – ವ ಕಾರಗಳಿಗೂ ಪ–ಹ ಕಾರಗಳಿಗೂ ಭೇದವನ್ನು ಗಣಿಸತಕ್ಕದ್ದಲ್ಲ. ಅನುಪ್ರಾಸದಲ್ಲಿ ಶಷಸಹಗಳಿಗೆ ರೇಫಸಂಯೋಗವಾದಲ್ಲಿ ಪರುಷವೃತ್ತಿಯೆಂದೂ ವರ್ಗಾಕ್ಷರಗಳು ಆಯಾವರ್ಗದ ಅನುನಾಸಿಕಗಳೊಡನೆ ಸಂಯುಕ್ತವಾದಲ್ಲಿ ಮಧುರವೃತ್ತಿಯೆಂದೂ ಇತರ ಅಸಂಯುಕ್ತವರ್ಣಗಳ ಪುನರಾವೃತ್ತಿಯಾದಲ್ಲಿ ಲಲಿತವೃತ್ತಿಯೆಂದೂ ಹೆಸರು. ಬರ್ಹ, ಸರ್ಷಪ, ನಿರ್ಮೋಕ, ದುರ್ಮುಖ – ಮುಂತಾದವು ಪರುಷವೃತ್ತಿಗಳು. ಕೊಂಡಾಡು, ಕಾಂತೆ, ರಂಜಿಸು, ಮಂಜೀರ – ಮುಂತಾದವು ಮಧುರವೃತ್ತಿಗಳು. ಒದವಿದುದು, ಮದಕಲ, ಕಲಕಂಠ – ಮುಂತಾದವು ಲಲಿತವೃತ್ತಿಗಳು. ಲಲಿತವೃತ್ತಿಗೆ ಗ್ರಾಮ್ಯವೃತ್ತಿಯೆಂಬ ನಾಮಾಂತರ ಉಂಟು.

ಚಿತ್ರಗಳಲ್ಲಿ ಶರಬಂಧ, ಶೂಲಬಂಧ, ಗೋಮೂತ್ರಿಕಾಬಂಧ, ಮುರಜಬಂಧ, ಸರ್ವತೋಭದ್ರ – ಮೊದಲಾದ ಹಲವು ಭೇದಗಳಿವೆ. ಪದ್ಯದಲ್ಲಿರುವ ಅಕ್ಷರಗಳನ್ನು ಒಂದು ವಿಶಿಷ್ಟರೀತಿಯಲ್ಲಿ ವಿನ್ಯಾಸಮಾಡುವುದರಿಂದ ಶರಾದ್ಯಾಕೃತಿಗಳು ಏರ್ಪಡುತ್ತವೆಯಾದ್ದರಿಂದ ಈ ಹೆಸರುಗಳನ್ನಿಡಲಾಗಿದೆ. ಇಂತಹ ಬಂಧಗಳನ್ನು ರಚಿಸುವುದು ಕಠಿಣ. ಯಥೇಷ್ಟವಾಗಿ ಸಂಸ್ಕೃತಪದಗಳನ್ನು ಬಳಸದೆ ಈ ಚಿತ್ರಬಂಧಗಳ ರಚನೆ ಸಾಧ್ಯವಲ್ಲ. ಕ್ಲಿಷ್ಟವಾದ ಈ ಚಿತ್ರಬಂಧಗಳನ್ನು ಮನೋವಿನೋದಕ್ಕಾಗಿ ರಚಿಸುತ್ತಿದ್ದಂತೆ ಕಾಣುತ್ತದೆ. ಈ ಬಗೆಯ ಪದ್ಯಗಳಲ್ಲಿ ಕಾವ್ಯಾಂಶವು ಅತಿವಿರಳ.

ಮಾದರಿಗಾಗಿ ಇಲ್ಲಿ ಎರಡು ಬಂಧಗಳನ್ನು ಉದಾಹರಿಸಲಾಗಿದೆ :

**ಚಾಪಬಂಧ**

ಸಂಸಾರವಿಷಮವಾರಿಧಿ
ಸಂಸರ್ಪಣ ದುಃಖವೀಚಿಯೊಂದು (ದ) ಲ್ಲಾಸಂ
ಸಂಸಕ್ತಮಾಗದಂತು ಜಿ
ನಂ ಸುವ್ರತನಾಮನೆಮಗೆ ಕರುಣಿಸುಗಿನಿಸಂ

— 573

ಈ ಪದ್ಯವನ್ನು ಒಂದು ವಿಶಿಷ್ಟ ರೀತಿಯ ಸಂನಿವೇಶದಿಂದ ಧನುಸ್ಸಿನ ಆಕಾರಕ್ಕೆ ತಿರುಗಿಸಬಹುದು. ಪದ್ಯದ ಪೂರ್ವಾರ್ಧವನ್ನು ವಕ್ರವಾದ ಧನುಷ್ಕಾಂಡದ ಸ್ಥಾನದಲ್ಲಿಯೂ ದ್ವಿತೀಯಾರ್ಧವನ್ನು ಹೆದೆಯ ಸ್ಥಾನದಲ್ಲಿಯೂ ಜೋಡಿಸಬೇಕು. ಬಂಧದಲ್ಲಿ ಪ್ರಥಮಾರ್ಧದ ಕಡೆಯ ಅಕ್ಷರವನ್ನೂ ಮೊದಲನೆಯ ಅಕ್ಷರವನ್ನೂ ಎರಡು ಸಲ ಓದಿಕೊಳ್ಳಬೇಕು. ಪದ್ಯದ ಮೊದಲನೆಯ ಅಕ್ಷರವೇ ಅದರ ಕಡೆಯಲ್ಲಿ ಬರುವುದೂ ಪೂರ್ವಾರ್ಧದ ಕಡೆಯ ಅಕ್ಷರವೇ ದ್ವಿತೀಯಾರ್ಧದ ಆದಿಯಲ್ಲಿ ಬರುವುದೂ ಈ ಬಂಧದಲ್ಲಿರುವ ಚಮತ್ಕಾರ. ಹೇಗೆಂದರೆ,




(ಬಿಲ್ಲ ಮೇಲೆ : ಯೊ – ೦ – ದು – ಲ್ಲಾ – ಸಂ ಎಂದೋದಿ.)

**ಗೋಮೂತ್ರಿಕಾಬಂಧ :**

ಉರುತರ ಸಿತಕೀರ್ತಿ ಗುಣಾ
ಕರಂ ಪದಾನತವಿರೋಧಿವರ್ಗಂ ನೆಗಟ್ದಂ
ಸುರುಚಿರನುತಮೂರ್ತಿ ಘೃಣಾ
ಪರಂ ಸದಾಹಿತಕರೋಕ್ತಿದುರ್ಗಂ ಜಗದೊಳ್ — 578

ಈ ಬಂಧದ ಲಕ್ಷಣವೇನೆಂದರೆ:

ವರ್ಣಾನಾಮೇಕರೂಪತ್ವಂ ಯದ್ಯೇಕಾಂತರಮರ್ಧಯೋಃ
ಗೋಮೂತ್ರಿಕೇತಿ ತತ್ಪ್ರಾಹುರ್ದುಷ್ಕರಂ ತದ್ವಿದೋ ವಿದುಃ

"ಪೂರ್ವಾರ್ಧ ಮತ್ತು ಉತ್ತರಾರ್ಧಗಳಲ್ಲಿ ಒಂದೊಂದಕ್ಷರವನ್ನು ಬಿಟ್ಟು 2,4,6 – ಮುಂತಾದ ಅಕ್ಷರಗಳು ಏಕರೂಪವಾಗಿದ್ದರೆ ಗೋಮೂತ್ರಿಕಾಬಂಧವೆನಿಸಿಕೊಳ್ಳುತ್ತದೆ. ಇದನ್ನು ರಚಿಸುವುದು ಕಠಿಣವೆಂದು ಬಲ್ಲವರು ಹೇಳುತ್ತಾರೆ"

ಉ ದು ತ ರ ಸಿ ತ ಕೀ ರ್ತಿ ಗು ಣಾ ಕ ರಂ ಪ ದಾ ನ ತ ವಿ ರೋ ಧಿ ವ ರ್ಗಂ ನೆ ಗ ಟ್ಟಿಂ



ಶು ರು ಚಿ ರ ನು ತ ಮೂ ರ್ತಿ ಷ್ಣ ಣಾ ಪ ರಂ ಸ ದಾ ಹಿ ತ ಕ ರೋ ಕ್ತಿ ದು ರ್ಗಂ ಜ ಗ ದೊಳ್

ಗೆರೆಯೆಳೆದ ಕ್ರಮದಂತೆ ಓದಿದರೆ ಉಭಯಾರ್ಧಗಳ ನಿಸ್ತಾರವಾಗುತ್ತದೆ. ಉದಾಹರಣೆಯಲ್ಲಿ ಒಂದು ನ್ಯೂನತೆಯುಂಟು. 'ವರ್ಗಂ ನೆಗಟ್ಟಿಂ' 'ದುರ್ಗಂ ಜಗದೊಳ್' ಎಂಬ ಪದ್ಯಾಂಶಗಳು ವ್ಯತ್ಯಸ್ತವಾಗುತ್ತವೆ. ಪೂರ್ವಾರ್ಧದ ಅಂಶವು ಉತ್ತರಾರ್ಧಕ್ಕೂ ಉತ್ತರಾರ್ಧದ ಅಂಶವು ಪೂರ್ವಾರ್ಧಕ್ಕೂ ಸೇರಿಕೊಳ್ಳುತ್ತವೆ. ಆದರೂ ಅರ್ಥದಲ್ಲಿ ಕೊರತೆ ಸಂಭವಿಸುವುದಿಲ್ಲ.

ಈಗ ಪ್ರಕಟವಾಗಿರುವ ಕಾವ್ಯಾವಲೋಕನ ಗ್ರಂಥದಲ್ಲಿ ಅಶುದ್ಧ ಪಾಠಗಳಿರುವುದು ನಿಶ್ಚಿತ. ಶುದ್ಧಪಾಠಗಳು ದೊರಕಿದ ಹೊರತು ನಾಗವರ್ಮನು ಉದಾಹರಿಸುವ ಗೂಢಚತುರ್ಥ, ಗತಪ್ರತ್ಯಾಗತ – ಮುಂತಾದ ಚಿತ್ರಬಂಧಗಳನ್ನು ಉದ್ಧರಿಸುವುದು ಶಕ್ಯವಲ್ಲ.

ಇವಲ್ಲದೆ ನುಸುಳ್, ಒರ್ನುಡಿ, ಭಾಮೆ, ಅಸ್ಪಷ್ಟಾರ್ಥ, ಉಳಿವು, ನಾಮಾಂತರಿತ – ಎಂಬ ಚಿತ್ರಬಂಧಗಳಿಗೆ ಲಕ್ಷಣವನ್ನು ಕೊಡದೆಯೇ ನಾಗವರ್ಮನು ಉದಾಹರಿಸಿದ್ದಾನೆ. ಕುಸುರಿ ಮೊದಲಾದ ಪ್ರಶ್ನೋತ್ತರ ಪ್ರಕಾರಗಳೂ ಉಂಟು ಎನ್ನುತ್ತಾನೆ. ಇವುಗಳ ಲಕ್ಷಣಗಳೇನು ? ಲಕ್ಷ್ಯಗಳಲ್ಲಿ ಸಮನ್ವಯ ಹೇಗೆ ? – ಎಂಬುದನ್ನು ವಿದ್ವಾಂಸರು ಪರಿಶೀಲಿಸಬೇಕಾಗಿದೆ. ಇವು ಪ್ರಹೇಲಿಕಾ ಸಮಸ್ಯಾದಿ ಭೇದಗಳು. ಇವುಗಳಿಂದ ಕಾವ್ಯಶೋಭೆ ಇಲ್ಲವಾದ್ದರಿಂದ ಇವು ಅಲಂಕಾರಗಳಲ್ಲವೆಂದೂ ಕೇವಲ ಕ್ರೀಡಾಮಾತ್ರೋಪಯೋಗಿಗಳೆಂದೂ ರುದ್ರಟನು ಹೇಳುತ್ತಾನೆ :

ಮಾತ್ರಾಬಿಂದುಚ್ಯುತಕೇ ಪ್ರಹೇಲಿಕಾ ಕ್ರಿಯಾಗೂಢೇ
ಪ್ರಶ್ನೋತ್ತರಾದಿ ಚಾನ್ಯತ್ ಕ್ರೀಡಾಮಾತ್ರೋಪಯೋಗಮಿದಂ

— ಕಾವ್ಯಾಲಂಕಾರ V – 24

ಒಬ್ಬನು ಒಂದು ಮಾತನ್ನು ಹೇಳಿದಾಗ ಆ ಮಾತಿಗೆ ಇನ್ನೊಬ್ಬನು ಶ್ಲೇಷದಿಂದಲೊ ಕಾಕುವಿನಿಂದಲೊ ಅರ್ಥಾಂತರವನ್ನು ಕಲ್ಪಿಸಿದರೆ ಅದು ವಕ್ರೋಕ್ತಿಯೆನಿಸುತ್ತದೆ. ಶ್ಲೇಷಮೂಲಕ ವಕ್ರೋಕ್ತಿಗೆ ಒಂದು ಉದಾಹರಣೆ :

ಮುತ್ತಯ್ಯ ಚದುರಿದೇನೆನೆ
ಮುತ್ತಲ್ಲದುದುಂಟೆ ವಸ್ತು ಪೇೞತೆನೆ ಸತಿ ನೀ
ಮಿತ್ತಿರಿಮೆನೆ ಕರವೊಳ್ಳಿ
ತ್ತಿತ್ತಾಗಡೆ ನಿಮ್ಮೊಳಿರ್ಪವೆನೆ ವೃದ್ಧವಿಟಂ

— 603

ಇಲ್ಲಿ ಮುತ್ತು ಎಂಬ ಶಬ್ದಕ್ಕೆ ಚುಂಬನ, ಮೌಕ್ತಿಕ ಎಂಬ ಶ್ಲೇಷಾರ್ಥಗಳುಂಟು. ಮುತ್ತಯ್ಯ ಎಂಬಲ್ಲಿ ಮುತ್ತಯ್ಯ=ವೃದ್ಧ ಎಂಬ ಅರ್ಥವೂ ಮುತ್ತು ಅಯ್ಯ ಎಂಬ ಅರ್ಥಾಂತರವೂ ಸ್ಪಷ್ಟವಾಗಿದೆ.

### ಅರ್ಥಾಲಂಕಾರ

ಯಮಕಾದಿ ಶಬ್ದಾಲಂಕಾರಗಳು ಕಿವಿಗೆ ಮಾತ್ರ ಸೊಗಸು; ಬುದ್ಧಿಗಲ್ಲ. ಜಗನ್ನಾಥನು ಅವು ಪಾಮರಶ್ಲಾಘ್ಯಗಳೆನ್ನುತ್ತಾನೆ. ಅರ್ಥಾಲಂಕಾರಗಳಿಂದಾಗಲಿ ಕಾವ್ಯಜೀವಿತಗಳಾದ ರಸಭಾವಾದಿಗಳಿಂದಾಗಲಿ ಪುರಿಪುಷ್ಟವಾಗದ ಕಾವ್ಯದಲ್ಲಿ ಕೇವಲ ಶಬ್ದಾಲಂಕಾರಗಳಿದ್ದರೆ, ಪಾಮರಶ್ಲಾಘ್ಯವೆಂಬ ಮಾತು ಒಪ್ಪುತ್ತದೆ. ಉತ್ತಮ ಕಾವ್ಯವು ಅನುಪ್ರಾಸಾದಿ ಶಬ್ದಾಲಂಕಾರಯುಕ್ತವಾದರೆ ಒಂದು ಅಪೂರ್ವ ರಮಣೀಯತೆ ಯುಂಟಾಗುವುದೆಂಬುದರಲ್ಲಿ ಸಂದೇಹವಿಲ್ಲ. ಜಗನ್ನಾಥನ ಸೌಭಾಗ್ಯ ಲಹರಿ–ಮೊದಲಾದ ಕಾವ್ಯಪ್ರಬಂಧವು ಅನುಪ್ರಾಸಾದಿಶಬ್ದಾಲಂಕಾರ ಯುಕ್ತವಾಗಿ ಮನೋಜ್ಞವಾಗಿರುವುದನ್ನು ನಾವು ಕಾಣಬಹುದು. ಇವಕ್ಕಿಂತ ಅರ್ಥಾಲಂಕಾರ ಗಳು ಶ್ರೇಷ್ಠವಾದವು. ನಾಗವರ್ಮನು ಈ ಪ್ರಕರಣವನ್ನು 'ಪ್ರವರಾರ್ಥಾಲಂ ಕಾರಂ' ಎಂದು ಆರಂಭಿಸುತ್ತಾನೆ. 'ಪ್ರವರ' ಎಂಬ ವಿಶೇಷಣದಿಂದಲೇ ಇವು ಶಬ್ದಾಲಂಕಾರಗಳಿಗಿಂತ ಪ್ರಶಸ್ತವಾದವು ಎಂದು ಸೂಚಿಸುತ್ತಾನೆ.

ಅರ್ಥಾಲಂಕಾರಗಳು ಸ್ಥೂಲವಾಗಿ ನಾಲ್ಕು ಪ್ರಕಾರವಾಗಿವೆ. ವಾಸ್ತವ, ಉಪಮೆ, ಅತಿಶಯ, ಶ್ಲೇಷ – ಎಂಬ ನಾಲ್ಕು ಧರ್ಮಗಳು ಇವುಗಳಿಗೆ ಮೂಲ. ವಸ್ತುಸ್ವಭಾವ ಕಥನವೇ ವಾಸ್ತವ. ಇದರಿಂದ ಸುಮಾರು 21 ಅಲಂಕಾರಗಳು ಏರ್ಪಡುತ್ತವೆ. ಉಪಮೆಯಿಂದ 18, ಅತಿಶಯದಿಂದ 10, ಶ್ಲೇಷದಿಂದ 8 ಅಲಂಕಾರಗಳಾಗುತ್ತವೆ. ಶ್ಲೇಷದಲ್ಲಿ ಶಬ್ದಶ್ಲೇಷ, ಅರ್ಥಶ್ಲೇಷ ಎಂದು ಎರಡು ವಿಧ. ಅಲಂಕಾರಸಂಸೃಷ್ಟಿಯನ್ನು ಸಂಶ್ಲೇಷವೆಂದು ನಾಗವರ್ಮನು ಕರೆದಿದ್ದಾನೆ. ಪ್ರೇಯ, ಊರ್ಜಸ್ವಿ ಎಂಬೆರಡು ಅಲಂಕಾರಗಳನ್ನು ನಾಗವರ್ಮನು ಒಪ್ಪುತ್ತಾನೆ. ದಂಡಿಯು –

ಪ್ರೇಯಃ ಪ್ರಿಯತರಾಖ್ಯಾನಂ ರಸವದ್ರಸಪೇಶಲಮ್
ಊರ್ಜಸ್ವಿ ರೂಢಾಹಂಕಾರಂ ಯುಕ್ತೋತ್ಕರ್ಷಂ ಚ ತತ್ತ್ರಯಮ್
— ಕಾವ್ಯಾದರ್ಶ II – 275

ಎಂದಿದ್ದಾನೆ. ದಂಡಿಯು ಹೇಳಿದ ರಸವದಲಂಕಾರವನ್ನು ನಾಗವರ್ಮನು ಕೈಬಿಟ್ಟಿರುವುದು ಗಮನಾರ್ಹ. ನಾಗವರ್ಮನು ರಸಕ್ಕೆ ಅಲಂಕಾರತ್ವವನ್ನು ಒಪ್ಪಿಲ್ಲವೆಂದು ಇದರಿಂದ ಸ್ಪಷ್ಟವಾಗುತ್ತದೆ. 'ರಸಭಾವವೃತ್ತಿ ನಿರ್ಣೀತಿಯೆ ಜೀವಂ' ಎನ್ನುವ ಈತನಿಗೆ ರಸವು ಅಲಂಕಾರ್ಯವೆಂಬ ಮತವೇ ಸಂಮತವೆಂದು ತೋರುತ್ತದೆ. ದಂಡಿಯು ಆಶಿಯೆಂಬ ಅಲಂಕಾರವನ್ನಂಗೀಕರಿಸಿ –

ಆಶೀರ್ನಾಮಾಭಿಲಷಿತೇ ವಸ್ತುನ್ಯಾಶಂಸನಂ ಯಥಾ

ಎಂದು ಲಕ್ಷಿಸಿ,

ಪಾತು ವಃ ಪರಮಂ ಜ್ಯೋತಿರವಾಙ್ಮನಸಗೋಚರಮ್
— ಕಾವ್ಯಾದರ್ಶ 357

ಎಂದು ಉದಾಹರಿಸಿದ್ದಾನೆ. ನಾಗವರ್ಮನೂ ಇದನ್ನು ಅಲಂಕಾರವೆಂದು ಒಪ್ಪುತ್ತಾನೆ.

ನೆಲೆಗೊಳ್ಗೆ ನಿಜಭುಜಾಸಿಯೊ
ಳೊಲಿದು ಜಯಾಂಗನೆ ವಿರೋಧಿವಂಶಾವಳಿಯುಂ
ನೆಲೆಗಿಡಿಸಿ ನಿನ್ನ ತೇಜೋ
ಜ್ವಲನಂ ತಳ್ತಟ್ಟಿಕೊಳ್ಗೆ ವಿಕ್ರಮತುಂಗಾ
— 775

ಎಂಬುದು ಆಶಿಗೆ ಉದಾಹರಣೆ.

ವಸ್ತುತಃ ಇದು ಅಲಂಕಾರವೆ ಎಂಬುದು ಚಿಂತನೀಯ. ಇದರಲ್ಲಿ ಚಮತ್ಕಾರ ಜನಕವಾದ ಯಾವ ವೈಚಿತ್ರ್ಯವೂ ಕಾಣದು; ವೈಚಿತ್ರ್ಯವಿರುವುದಾದರೆ ಪ್ರೇಯೋಲಂಕಾರದಲ್ಲಿ ಇದನ್ನು ಸೇರಿಸಬಹುದು.

ನಾಗವರ್ಮನ ಅಲಂಕಾರಲಕ್ಷಣವೂ ನಾಮಕರಣವೂ ಭಾಮಹ, ದಂಡಿ ಮೊದಲಾದ ಪ್ರಾಚೀನಾಲಂಕಾರಿಕರ ಗ್ರಂಥಗಳಿಗೆ ಅನುಗುಣವಾಗಿದೆ. ಮಮ್ಮಟ, ಅಪ್ಪಯ್ಯದೀಕ್ಷಿತ, ಜಗನ್ನಾಥ – ಮೊದಲಾದವರ ಲಕ್ಷಣಗಳೂ ನಾಮಕರಣಗಳೂ ಅನೇಕ ಸ್ಥಳಗಳಲ್ಲಿ ವಿಭಿನ್ನಗಳಾಗುತ್ತವೆ. ನಾಗವರ್ಮನದು ಪರಿಷ್ಕಾರಯುಗವಲ್ಲ. ನವೀನರು ಹೇಳುವ ಅವ್ಯಾಪ್ತಿ, ಅತಿವ್ಯಾಪ್ತ್ಯಾದಿ ದೋಷಗಳು ಅವನ ಲಕ್ಷಣಗಳಲ್ಲಿ ಕೆಲವೆಡೆ ಸಂಭವಿಸಬಹುದು.

## 4. ರೀತಿಕ್ರಮರಸನಿರೂಪಣ

'ರೀತಿ ವಿನೂತಕೃತಿಗೊಪ್ಪುವ ಮೆಯ್' ಎನ್ನುತ್ತಾನಲ್ಲವೆ ನಾಗವರ್ಮ. 'ರೀತಿರಾತ್ಮಾ ಕಾವ್ಯಸ್ಯ' ಎಂಬುದು ವಾಮನನ ಅಭಿಸಂಧಿ. ಗುಣವಿಶಿಷ್ಟಪದರಚನೆಯೇ ರೀತಿ. ದಂಡಿಯಾದರೊ ರೀತಿ ಕಾವ್ಯದ ದೇಹವೆ? ಆತ್ಮವೆ? – ಎಂಬುದನ್ನು ಹೇಳದೆ ಅದನ್ನು 'ಗಿರಾಂ ಮಾರ್ಗಃ' ಎಂದು ತಿಳಿಸಿ ತೃಪ್ತನಾದನು. ಮುಂದೆ 'ಇತಿ ವೈದರ್ಭಮಾರ್ಗಸ್ಯ ಪ್ರಾಣಾದಶಗುಣಾಃ ಸ್ಮೃತಾಃ' ಎಂದು ಹೇಳಿ ಗುಣಗಳಿಗೆ ಪ್ರಾಣದ ಸ್ಥಾನವನ್ನಿತ್ತಿದ್ದಾನೆ ದಂಡಿ. ಗುಣಗಳು ವೈದರ್ಭಮಾರ್ಗದ ಪ್ರಾಣ. ವಾಮನನಾದರೊ ಗುಣದ ಸ್ಥಾನವನ್ನು ಹೇಳದೆ 'ವಿಶಿಷ್ಟಾ ಪದರಚನಾ ರೀತಿಃ' 'ವಿಶೇಷೋ ಗುಣಾತ್ಮಾ' ಎಂದನು. ಶಬ್ದಾರ್ಥರೂಪವಾದ ಕಾವ್ಯದಲ್ಲಿ 'ಪದರಚನೆ' ಆತ್ಮ ಎಂದರೆ, ಶಬ್ದವು ಆತ್ಮಸ್ಥಾನೀಯವೆಂದು ಅರ್ಥವಾಗುತ್ತದೆ. ಆತ್ಮನಲ್ಲಿರುವ ಶೌರ್ಯಧೈರ್ಯಾದಿಗುಣಗಳಂತೆ ಕಾವ್ಯಗುಣಗಳು ಎಂದು ಅವನ ಆಶಯವನ್ನು ಊಹಿಸಬೇಕಾಗುತ್ತದೆ. 'ರೀತಿರಾತ್ಮಾ ಕಾವ್ಯಸ್ಯ' ಎಂಬ ವಾಮನ ಸೂತ್ರದಲ್ಲಿ ಆತ್ಮವೆಂದರೆ ದೇಹವೆಂದು ನಾಗವರ್ಮನು ಅರ್ಥಮಾಡಿಕೊಂಡಿರಬಹುದೆ ? ವಾಮನನನ್ನು ಅನುಸರಿಸಿದ್ದೇನೆಂದು ಹೇಳುವ ಆತನು ರೀತಿಯನ್ನು ಕಾವ್ಯದ 'ಮೆಯ್' ಎಂದು ಕರೆದಿರುವುದು ಗಮನಾರ್ಹವಾಗಿದೆ. ಆತ್ಮ ಶಬ್ದಕ್ಕೆ ದೇಹವೆಂಬ ಅರ್ಥವೇನೊ ಉಂಟು.

ಆತ್ಮಾಯತ್ನೋ ಧೃತಿರ್ಬುದ್ಧಿಃ ಸ್ವಭಾವೋ ಬ್ರಹ್ಮವರ್ಷ್ಮಚ
— ಅಮರಕೋಶ

ಆತ್ಮಾ ಕಲೇವರೇ ಯತ್ನೇ ಸ್ವಭಾವೇ ಪರಮಾತ್ಮನಿ
— ಧರಣಿಕೋಶ

ಶ್ಲೇಷಾದಿ ಕಾವ್ಯಗುಣಗಳು ದೇಹದ ಸೌಂದರ್ಯಲಾವಣ್ಯಾದಿಗಳಂತೆ ಎಂದು ನಾಗವರ್ಮನ ಆಶಯವಿರಬಹುದೆ ? – ಎಂಬುದು ಪರಿಶೀಲನಾರ್ಹ. ನಾಗವರ್ಮನ ಮತದಂತೆ 'ರಸಭಾವವೃತ್ತಿನಿರ್ಣೀತಿಯೆ ಜೀವಂ'.

ವೈದರ್ಭಿ, ಗೌಡಿ, ಪಾಂಚಾಲಿ ಎಂದು ಮೂರು ರೀತಿಭೇದಗಳನ್ನು ನಾಗವರ್ಮನು ಅಂಗೀಕರಿಸುತ್ತಾನೆ. ದಶಗುಣಗಳ ಸಂಕರದಿಂದ ರೀತಿಗಳನ್ನು ಅನೇಕ ವಿಧದಲ್ಲಿ ವಿಂಗಡಿಸಬಹುದು. ದಂಡಿಯು ವೈದರ್ಭಿ, ಗೌಡಿಗಳೆರಡೇ ಮುಖ್ಯವೆಂದನು. ಸಾಹಿತ್ಯದರ್ಪಣಕಾರನು ಮೇಲಿನ ಮೂರು ರೀತಿಗಳೊಡನೆ ಲಾಟಿಯನ್ನು ಸೇರಿಸಿದನು. ಭೋಜರಾಜನು ಸರಸ್ವತೀಕಂಠಾಭರಣದಲ್ಲಿ ಆವಂತಿಕಾ,

ಮಾಗಧೀ – ಎಂಬ ಇನ್ನೆರಡನ್ನು ಸೇರಿಸಿ ರೀತಿಗಳು ಆರೆಂದನು. ಇವನ್ನೆಲ್ಲ ಕಾವ್ಯ ಮರ್ಮವನ್ನಳೆಯುವ ಅಳತೆಗೋಲುಗಳೆಂದು ಭಾವಿಸಲು ಶಕ್ಯವೆ? ದಂಡಿಯು ಹೇಳುವಂತೆ ವೈದರ್ಭಿ ಗೌಡಿಗಳೆರಡೇ ಪ್ರಸ್ಫುಟಾಂತರಗಳು. ರಸಭಾವಗಳ ಅಭಿ ವ್ಯಕ್ತಿಗೆ ಇವು ಅತ್ಯಾವಶ್ಯಕಗಳು. ಎಲ್ಲಿ ರಸಭಾವಗಳ ಸ್ಫುಟಾಭಿವ್ಯಕ್ತಿ ಇಲ್ಲವೋ ಅಂತಹ ಸ್ಥಳದಲ್ಲಿ–ಉದಾಹರಣೆಗೆ, ಪರ್ವತ ಅರಣ್ಯ ನಗರಾದಿಗಳ ವರ್ಣನೆಯಲ್ಲಿ ಪಾಂಚಾಲಿ ರೀತಿಯು ಉಪಯುಕ್ತವಾಗಬಹುದು. ನಾಗವರ್ಮನು ಈ ಮೂರು ವೃತ್ತಿಗಳನ್ನೇ ಲಕ್ಷಿಸಿ ಉದಾಹರಿಸಿದ್ದಾನೆ. ಕರುಣ ಹಾಸ್ಯ ಶೃಂಗಾರಗಳಲ್ಲಿ ವೈದ ರ್ಭಿಯೂ ವೀರಾದ್ಭುತಗಳಲ್ಲಿ ಪಾಂಚಾಲಿಯೂ ರೌದ್ರಭಯಾನಕ ಬೀಭತ್ಸಗಳಲ್ಲಿ ಗೌಡಿಯೂ ಉತ್ತಮವೆಂದು ನಾಗವರ್ಮನ ಮತ. ಆದರೆ ಗುಣವಿವೇಕದ ಕಡೆ ಯಲ್ಲಿ –

ವೈದರ್ಭ ಗೌಡಮಾರ್ಗವಿ
ಭೇದಂ ಬಗೆವೊಡೆ ಗತಾನುಗತಿಕಮಿದೆಂದೊ
ಲ್ದಾದರಿಪರ್ ಕೆಲಬರ್ ಸಂ
ವಾದದೊಳೆರಡುಂ ಸಮರ್ಥಮಪ್ಪುದಱಿಂದಂ — 522

ಎಂದು ಉಪಸಂಹರಿಸಿದ್ದಾನೆ. ಕೆಲಬರ್ ಎಂದರೆ ಭಾಮಹಾದಿಗಳು. ಈ ರೀತಿ ವಿಭಾಗವು ಗತಾನುಗತಿಕ ಎಂದು ತಳ್ಳಿಹಾಕಿದ್ದಾನೆ ಭಾಮುಹ.

ಗೌಡೀಯ ಮಿದಮೇತತ್ತು ವೈದರ್ಭಮಿತಿ ಕಿಂ ಪೃಥಕ್
ಗತಾನುಗತಿಕನ್ಯಾಯಾತ್ ನಾನಾಖ್ಯೇಯಮೇಧಸಾಮ್
— ಕಾವ್ಯಾ 1 – 37

## ರಸಪ್ರಕರಣ

'ರಸಭಾವನಿರ್ಣೀತಿಯೆ ಜೀವಂ' ಎಂದ ನಾಗವರ್ಮನು ರಸಭಾವಗಳು ಕಾವ್ಯ ದಲ್ಲಿ ಶ್ರೇಷ್ಠವೆಂದು ಒಪ್ಪಿದ್ದಾನೆ. ಇವನು ಸ್ಮರಿಸಿರುವ ಪ್ರಾಚೀನರಾದ ದಂಡಿ ಭಾಮಹಾದಿಗಳು ಕಾವ್ಯದಲ್ಲಿ ರಸಭಾವಗಳು ಮುಖ್ಯವೆಂದು ಸ್ಪಷ್ಟೋಕ್ತಿಯಿಂದ ತಿಳಿಸಿಲ್ಲ. ಗದ್ಯಪದ್ಯಗಳೇ ಕಾವ್ಯಶರೀರವೆಂದೂ ಅಲಂಕಾರಗಳೇ ಕಾವ್ಯಪುರುಷನಿಗೆ ಶೋಭಾಕರಗಳಾದ ಒಡವೆಗಳೆಂದೂ ನೃಪತುಂಗನು ಹೇಳಿದನು.

ನರಲೋಕಚಂದ್ರ ಮತದಿಂ
ಪರಮಾಲಂಕಾರಮುಂ ಶರೀರಮುಮೆಂದಿಂ
ತೆರಡಕ್ಕುಂ ಭೇದಂ ಬಹು
ಪರಿಕರಮಾ ಕಾವ್ಯವಸ್ತುಪುರುಷಂಗೆಂದುಂ

ಅವಱೊಳ್ ಶರೀರಮೆಂಬುದು
ಕವಿಪ್ರಧಾನಪ್ರಯೋಗ ಪದ ಪದ್ಧತಿಯೊಳ್
ದ್ವಿವಿಧಮೆನಿಕ್ಕುಮದತಿಶಯ
ಧವಳೋಕ್ತಕ್ರಮದೆ ಗದ್ಯಪದ್ಯಾಖ್ಯಾತಂ
— ಕ. ರಾ. ಮಾರ್ಗ. I. 23 – 24

ಹೀಗೆ ನಾಗವರ್ಮನಿಗಿಂತ ಪೂರ್ವದ ಆಲಂಕಾರಿಕರು ಕಾವ್ಯಪುರುಷನಲ್ಲಿ ಆತ್ಮಸ್ಥಾನೀಯವಾದದ್ದು ಯಾವುದು ಎಂದು ಪೃಥಕ್ಕರಿಸಿ ನೋಡಲು ಯತ್ನಿಸಲಿಲ್ಲ. ರಸಭಾವಗಳು ಕಾವ್ಯದ ಜೀವಾಳವೆಂದು ಗುರುತಿಸಿರುವುದು ನಾಗವರ್ಮನ ಮರ್ಮಜ್ಞತೆಗೆ ಸಾಕ್ಷಿ.

ಶೃಂಗಾರಾದಿರಸಗಳು ಎಂಟು ಎನ್ನುತ್ತಾನೆ ನಾಗವರ್ಮ:

ಶೃಂಗಾರಾದಿಗಳಪ್ಪ ರ
ಸಂಗಳ್ ವರ್ತಿಸುಗುಮಂತವೆಂಟೆ ವಲಂ ಕಾ
ವ್ಯಾಂಗಕ್ಕೆ ಸತ್ಕ್ರಿಯಾ ರೂ
ಪಂಗಳ್ ರತ್ಯಾದಿಭಾವಸಂಪನ್ನಂಗಳ್
— 793

ಸಂಪ್ರದಾಯದಂತೆ ಇವುಗಳ ಸ್ಥಾಯಿಭಾವಗಳಾದ ರತ್ಯಾದಿಗಳನ್ನೂ ಮತ್ಯಾದಿ ಸಂಚಾರಿಭಾವಗಳನ್ನೂ ಸ್ವೇದಾದಿಸಾತ್ತ್ವಿಕಭಾವಗಳನ್ನೂ ತಿಳಿಸಿದ್ದಾನೆ. 'ವಿಭಾವಾನುಭಾವವ್ಯಭಿಚಾರಿ ಸಂಯೋಗಾದ್ರಸನಿಷ್ಪತ್ತಿಃ' ಎಂಬ ಭರತಸೂತ್ರವನ್ನು ಹೀಗೆ ಅನುವಾದಿಸಿದ್ದಾನೆ:

ಭಾವಂ ವಿಭಾವಮೆಸೆವನು
ಭಾವಂ ಸಂಚಾರಿಭಾವಮೆಂದಿಂತಿವಱಿಂ
ದಾವಿಷ್ಕೃತಮಕ್ಕುಂ ರಸ
ಮಾವುದುಮೆಂದಱಿಗೆ ಭರತಶಾಸ್ತ್ರಕ್ರಮದಿಂ — 798

ವಿಭಾವಾದಿಗಳಿಂದ ಅಭಿವ್ಯಕ್ತವಾದ ಸ್ಥಾಯಿಭಾವವೇ ರಸವೆಂದು ಸಿದ್ಧಾಂತ ಸರಣಿ. ಭಾವವು ಕಾರ್ಯಕೋಟಿಯಲ್ಲಿ ಸೇರಬೇಕಾದ್ದು. ನಾಗವರ್ಮನು ಅದನ್ನು ಕಾರಣಕೋಟಿಯಲ್ಲಿ ಸೇರಿಸಿದ್ದಾನೆ. ಭಾವವು ಉಪಾದಾನ ಕಾರಣವಿದ್ದಂತೆ ಎಂದು ಆತನ ಆಶಯವಿರಬಹುದು. ಮಣ್ಣಿನಿಂದ ಮಡಿಕೆ, ಚಿನ್ನದಿಂದ ಉಂಗುರ ಎನ್ನು

ವುದೂ ಸರಿ. ಮಣ್ಣೇ ಮಡಿಕೆ, ಚಿನ್ನವೇ ಉಂಗುರ ಎನ್ನುವುದೂ ಸರಿ. ಹೀಗೆಯೇ ಭಾವದಿಂದ ರಸ, ಭಾವವೇ ರಸ – ಎಂಬೆರಡು ಉಕ್ತಿಗಳನ್ನು ಸಮನ್ವಯಮಾಡ ಬಹುದು. ಅವಿಷ್ಕೃತ ಎಂಬ ಪದ ಅಭಿವ್ಯಕ್ತ ಎಂಬುದಕ್ಕೆ ಸಮಾನಾರ್ಥಕವಾಗ ಬಹುದು. ಎಲ್ಲ ಅಲಂಕಾರಗ್ರಂಥಗಳಲ್ಲಿಯೂ ಇರುವಂತೆ ಇವುಗಳ ಉದಾಹರಣೆ ಗಳೂ ಸಾಂಪ್ರದಾಯಿಕವಾಗಿವೆ.

ಆದಿಯಲ್ಲಿ ಶಾಂತರಸವನ್ನು ಗಣಿಸದೆ ರಸಗಳು ಎಂಟು ಎಂದ ನಾಗವರ್ಮ ಕಡೆಯಲ್ಲಿ 'ಸಮಭಾವಪ್ರಭವಂ ಶಾಂತಮಕ್ಕುಂ' ಎಂದು ನುಡಿದು, ಒಂಬತ್ತನೆಯ ದಾದ ಶಾಂತರಸವನ್ನು ಅಂಗೀಕರಿಸಿದ್ದಾನೆ. ಶಾಂತವು ಪಾಕ್ಷಿಕವೆಂದು ನಾಗವರ್ಮನ ಆಶಯವಿದ್ದುದರಿಂದ ಅಂತ್ಯದಲ್ಲಿ ಅದನ್ನು ಲಕ್ಷಿಸಿರಬಹುದು. ಶಾಂತರಸಕ್ಕೆ ನಿರ್ವೇ ದವು ಸ್ಥಾಯಿಯೆಂದೂ ಶಮವು ಸ್ಥಾಯಿಯೆಂದು ಲಾಕ್ಷಣಿಕರಲ್ಲಿ ಭಿನ್ನಾಭಿಪ್ರಾಯ ವುಂಟು. ಸಮಭಾವವು ಸ್ಥಾಯಿಯೆಂದೂ ನಾಗವರ್ಮನ ಹೇಳಿಕೆ. 'ಸಮ್ಯಗ್‌ಜ್ಞಾನ ಪ್ರಕೃತಿಃ ಶಾಂತಃ' ಎಂದು ರುದ್ರಟನ ಅಭಿಮತ. ಶಾಂತರಸದ ವಿಷಯದಲ್ಲಿ ಭರತಾ ಚಾರ್ಯನ ನಿರ್ಣಾಯಕ ವಚನವಿಲ್ಲದ್ದೇ ಲಾಕ್ಷಣಿಕರ ಈ ಮತಭೇದಕ್ಕೆ ನಿಮಿತ್ತ ವಾಗಿದೆ.

ಅನಂತರ ಪರಸ್ಪರ ನಿರೋಧಕರಸಗಳನ್ನು ಪ್ರತಿಪಾದಿಸುತ್ತಾನೆ ನಾಗವರ್ಮ. ಕಡೆಯಲ್ಲಿ ಭಾರತಿ, ಸಾತ್ತ್ವತಿ, ಕೈಶಿಕಿ, ಆರಭಟಿಗಳೆಂಬ ನಾಲ್ಕು ವೃತ್ತಿಗಳ ನಿರೂ ಪಣೆಯೊಡನೆ ಈ ಪ್ರಕರಣ ಮುಗಿಯುತ್ತದೆ. ವೃತ್ತಿಗಳು ಮುಖ್ಯವಾಗಿ ದೃಶ್ಯ ಕಾವ್ಯಕ್ಕೆ ಸಂಬಂಧಿಸಿದವು. ನಾಯಕ ಮತ್ತು ನಾಯಿಕೆಯರ ಸ್ವಭಾವಾನುಗುಣವಾದ ಪ್ರವೃತ್ತಿಯೇ ವೃತ್ತಿ. 'ಪ್ರವೃತ್ತಿರೂಪೋ ನೇತೃವ್ಯಾಪಾರಸ್ವಭಾವೋ ವೃತ್ತಿಃ' (ದಶರೂಪಕ II – 42) ಇವುಗಳಲ್ಲಿ ಭಾರತಿಯು ಶಬ್ದವೃತ್ತಿಯೆಂದೂ ಉಳಿದ ಮೂರು ಅರ್ಥವೃತ್ತಿಗಳೆಂದೂ ಲಾಕ್ಷಣಿಕರ ಅಭಿಮತ. ರಸೋಚಿತವಾಗಿ ವೃತ್ತಿ ಭೇದಗಳನ್ನು ಆಶ್ರಯಿಸಬೇಕೆಂದು ನಟರಿಗೂ ಕವಿಗಳಿಗೂ ಉಪದೇಶವನ್ನೀಯುವು ದರಲ್ಲಿ ಲಾಕ್ಷಣಿಕರ ಸಂರಂಭ ಎದ್ದು ಕಾಣುತ್ತದೆ. ಇವುಗಳ ಸೂಕ್ಷ್ಮಭೇದಗಳನ್ನರಿ ಯುವುದರಿಂದ ಕಾವ್ಯರಚನೆಯಲ್ಲಿ ಕವಿಗಳಿಗಾಗಲಿ, ಕಾವ್ಯಾಸ್ವಾದನೆಯಲ್ಲಿ ಸಹೃದ ಯರಿಗಾಗಲಿ ಯಾವ ಉಪಯೋಗವಾಗುತ್ತದೆಯೆಂಬುದು ಚಿಂತನೀಯ.

## 5 ಕವಿಸಮಯ

ಅಲಂಕಾರಶಾಸ್ತ್ರದಲ್ಲಿ 'ಕವಿಸಮಯ' ಎಂಬ ಅಧಿಕರಣಕ್ಕೆ ಅವಕಾಶವನ್ನಿ ಟ್ಟವರಲ್ಲಿ ಕಾವ್ಯಮೀಮಾಂಸಾಕರ್ತನಾದ ರಾಜಶೇಖರನೇ ಮೊದಲಿಗನೆಂದು ತೋರು ತ್ತದೆ. 'ಕವಿಸಮಯ' ಎಂದರೆ ಕವಿಗಳ ಒಂದು ಸಂಕೇತ – ಪದ್ಧತಿ ಎಂದು ಅರ್ಥ.

ಇದು ರೂಢಶಬ್ದವೆಂದು ರಾಜಶೇಖರನ ಹೇಳಿಕೆ. ‘ಅಶಾಸ್ತ್ರೀಯಮಲೌಕಿಕಂ ಚ ಪರಂಪರಾಯಾತಂ ಯಮರ್ಥಮುಪನಿಬಧ್ನಂತಿ ಕವಯಃ ಸ ಕವಿಸಮಯಃ ........ ಕವಿಸಮಯ ಶಬ್ದಶ್ಚಾಯಂ ಮೂಲಮಪಶ್ಯದ್ಭಿಃ ಪ್ರಯೋಗಮಾತ್ರದರ್ಶಿಭಿಃ ಪ್ರಯುಕ್ತೋ ರೂಢಶ್ಚ (ಕಾವ್ಯಮೀಮಾಂಸಾ – 14 ನೆಯ ಅಧ್ಯಾಯ).

ಸತ್ಕೀರ್ತಿ ಬೆಳ್ಳಗಿರುತ್ತದೆ – ಅಪಕೀರ್ತಿ ಕಪ್ಪಾಗಿರುತ್ತದೆ, ಸರ್ಪದ ಶಿರಸ್ಸಿನಲ್ಲಿ ರತ್ನವಿರುತ್ತದೆ, ಚಾತಕವು ಮಳೆಯ ನೀರನ್ನು ಮಾತ್ರ ಕುಡಿಯುತ್ತದೆ, ಚಕೋರವು ಬೆಳದಿಂಗಳನ್ನು ಕುಡಿಯುತ್ತದೆ – ಎಂಬಿವು ಕವಿಸಮಯನಿಬದ್ಧಗಳು. ಇವು ಸತ್ಯವೆ – ಎಂದು ಸಹೃದಯನು ಕೇಳಬಾರದು. ಕಾವ್ಯದ ಮಟ್ಟಿಗೆ ಇವು ಸತ್ಯವೇ. ಇಲ್ಲದಿದ್ದರೆ ಕಾವ್ಯಾಸ್ವಾದನೆಗೆ ಭಂಗ ಉಂಟಾಗುತ್ತದೆ.

ಅನಂತರ ದೃಶ್ಯಕಾವ್ಯಗಳಿಗೆ ಸಂಬಂಧಿಸಿದ ಮುಖಾದಿಸಂಧಿಗಳನ್ನೂ ಸಂಧ್ಯಂಗಗಳನ್ನೂ ನಾಮಮಾತ್ರದಿಂದ ನಿರ್ದೇಶಿಸಿ ಗ್ರಂಥವನ್ನು ಉಪಸಂಹರಿಸುತ್ತಾನೆ ನಾಗವರ್ಮ.

# III

## ಕಾವ್ಯಾವಲೋಕನ

## 2. ಭಾರತೀಯ ಕಾವ್ಯಮೀಮಾಂಸೆಯ ಹಿನ್ನೆಲೆ

ಸೃಷ್ಟಿಯ ಸಕಲವಸ್ತುಗಳೂ ಮನುಷ್ಯನ ಸಮೀಕ್ಷಣಕ್ಕೆ ಒಳಪಡುತ್ತವೆ. ಹೀಗೆ ನಿಸರ್ಗದ ಪದಾರ್ಥಗಳನ್ನು ನೋಡಿ ಅನುಭವಿಸುವಾಗ, ಅವುಗಳ ಪ್ರಕೃತಿ ವಿಕೃತಿ, ಸೌಂದರ್ಯ ಅಸೌಂದರ್ಯ,ಸತ್ ಅಸತ್‌ಸ್ವರೂಪ,ಔಚಿತ್ಯ ಅನೌಚಿತ್ಯಗಳು ಹೃದಯ ಭಿತ್ತಿಕೆಯಲ್ಲಿ ಚಿತ್ರಿತವಾಗುತ್ತವೆ. ಅಲ್ಲಿಯೇ ವಾಸನಾರೂಪದಲ್ಲಿ ದೃಢವಾಗಿ ನಿಲ್ಲುತ್ತವೆ. ವಾಸನೆಗಳೇ ಸಂಸ್ಕಾರಗಳು. ಇವು ಮನುಷ್ಯನ ಚಿತ್ತವನ್ನು ಸಂಸ್ಕರಿಸುತ್ತವೆ; ಪರಿಷ್ಕರಿಸುತ್ತವೆ; ವಿವಿಧ ಪರಿಣಾಮಗಳನ್ನು ಚಿತ್ತದಲ್ಲುಂಟುಮಾಡುತ್ತವೆ. ಪುನರ್ಜನ್ಮವನ್ನೊಪ್ಪುವ ಭಾರತೀಯ ತತ್ತ್ವಜ್ಞರ ಮತದಂತೆ ಈ ಸಂಸ್ಕಾರಗಳು ಜನ್ಮಾಂತರದಿಂದ ಬಂದವು ಆಗಿರಬಹುದು. ಸಂಸ್ಕಾರವಶದಿಂದ ಚಿತ್ತದಲ್ಲಾಗುವ ಸ್ಪಂದನ 'ಚಿತ್ತವೃತ್ತಿ'. ಈ ಚಿತ್ತವೃತ್ತಿಯೇ ಕಾವ್ಯದ ಪರಿಭಾಷೆಯಲ್ಲಿ ಭಾವ. ಭಾವಗಳು ಹಲವಾರು. ಕಾಮ, ಕ್ರೋಧ, ದೈನ್ಯ, ಚಿಂತೆ, ಲಜ್ಜೆ, ಅಸೂಯೆ, ಆವೇಗ, ಸಂಭ್ರಮ, ಸಂತೋಷ, ತೃಪ್ತಿ – ಇವೆಲ್ಲವೂ ಭಾವವಿಶೇಷಗಳು.

ಈ ಬಗೆಯ ಚಿತ್ತವೃತ್ತಿಗಳನ್ನು ಪ್ರಕಟಿಸುವುದು ಪ್ರಾಣಿಗಳ ನೈಸರ್ಗಿಕಪ್ರವೃತ್ತಿ. ಯಾವಪ್ರಾಣಿಯೂ ಮಾನವನಂತೆ ಸಕಲಚಿತ್ತವೃತ್ತಿಗಳನ್ನೂ ಸ್ಫುಟವಾಗಿ ಅಭಿವ್ಯಂಜಿಸಲಾರದು. ಮಾನವನಾದರೊ ತನಗಿರುವ ಜ್ಞಾನಾತಿಶಯದಿಂದಲೂ ಸಾಧನವೈಪುಲ್ಯದಿಂದಲೂ ಚಿತ್ತವೃತ್ತಿಗಳನ್ನೂ ಅವುಗಳ ತುಮುಲವನ್ನೂ ವಿವಿಧರೀತಿಯಲ್ಲಿ ಪ್ರಕಟಿಸಬಲ್ಲ. ಮನೋಜ್ಞ ರೀತಿಯಲ್ಲಾದ ಚಿತ್ತವೃತ್ತಿಯ ಅಭಿವ್ಯಂಜನೆಯನ್ನು ಕಲೆ ಎನ್ನಬಹುದು. ಚಿತ್ರ, ಸಂಗೀತ, ಶಿಲ್ಪ, ನಾಟ್ಯ ಕಲೆಗಳು. ಅಂತೆಯೇ ಕಾವ್ಯನಿರ್ಮಾಣವೂ ಒಂದು ಕಲೆ. ಇದು ಪ್ರಧಾನವಾದ ಕಲೆ. ಏಕೆಂದರೆ, ಕಾವ್ಯವು ಶಬ್ದಮಯವಾದದ್ದು. ಶಬ್ದ ಸಮಷ್ಟಿಯೇ ಭಾಷೆ. ಭಾಷೆ ಭಾವಾಭಿವ್ಯಂಜನೆಗೆ ಪ್ರಮುಖವಾದ ಸಾಧನ. ಇದು ವಕ್ತೃವಿನ ಗೂಢಾಶಯವನ್ನು ಸಹ ಸ್ಪಷ್ಟವಾಗಿ ಪ್ರಕಟಿಸಬಲ್ಲುದು. ಚಿತ್ರಶಿಲ್ಪಾದಿಗಳು ಭಾಷೆಯಷ್ಟು ಸುಗಮವಾಗಿ ಸ್ಫುಟವಾಗಿ ಸಾಕಲ್ಯದಿಂದ ಭಾವಗಳನ್ನು ಅಭಿವ್ಯಂಜಿಸಲು ಅಸಮರ್ಥಗಳೇ. ಅಲ್ಲದೆ ಶ್ರವ್ಯಕಾವ್ಯದಲ್ಲಿ ಸಂಗೀತವನ್ನು, ದೃಶ್ಯಕಾವ್ಯದಲ್ಲಿ ಸಂಗೀತದೊಡನೆ ನಾಟ್ಯಾಭಿನಯಗಳನ್ನು ಅಳವಡಿಸಲು ಸಾಧ್ಯ. ನಾಟಕದಲ್ಲಿ ಚಿತ್ರ,ಶಿಲ್ಪ, ನೃತ್ಯಕಲೆಗಳ ಅಂಶವೂ ಸೇರಿಕೊಳ್ಳುತ್ತದೆ. ಹೀಗೆ ಭಾವಾಭಿವ್ಯಂಜನೆಯ ಸಾಧನಗಳು ಶ್ರವ್ಯಕಾವ್ಯದಲ್ಲಿ ಇತರ ಕಲೆಗಳಿಗಿಂತ ಹೆಚ್ಚಾಗಿಯೂ ದೃಶ್ಯಕಾವ್ಯದಲ್ಲಿ ಅದಕ್ಕಿಂತ ಅತಿಶಯವಾಗಿಯೂ

ಸಂಮಿಳಿತವಾಗುವುದು ಸ್ಪಷ್ಟ. ಆದ್ದರಿಂದಲೇ ಕಾಳಿದಾಸನು 'ನಾಟ್ಯಂ ಭಿನ್ನರುಚೇ ರ್ಜನಸ್ಯ ಬಹಾಧಾಪ್ಯೇಕಂ ಸಮಾರಾಧನಂ' ಎಂದು ಸಾರಿದ್ದಾನೆ.

ಸಂಸ್ಕಾರಸಂಪನ್ನನಾದ ಮಹಾಕವಿಯ ಸೂಕ್ಷ್ಮೇಕ್ಷಣಕ್ಕೆ ನಿಲುಕದ ಯಾವ ಬಾಹ್ಯವಸ್ತುವಾಗಲಿ ಅಂತಃಕರಣವೃತ್ತಿಯಾಗಲಿ ಈ ಜಗತ್ತಿನಲ್ಲಿಲ್ಲ. ಮಹಾಕಾವ್ಯ ವೆಂಬುದು ವಿವಿದ ದೇಶಕಾಲಗಳಿಗೆ ಸಂಬಂಧಿಸಿದ ಮಾನವಜನಾಂಗದ ಆಚಾರ, ವ್ಯವಹಾರ, ಸಂಸ್ಕೃತಿ, ಅಂತಃಕರಣ ವ್ಯಾಪಾರಗಳನ್ನು ಅಂತರ್ದೃಷ್ಟಿಯಿಂದ ಸಮೀ ಕ್ಷಿಸಿ ಭಟ್ಟಿಯಿಳಿಸಿದ ಸಮಷ್ಟಿಯಾದ ಒಂದು ರಸಪಾಕ. ಮಾನವಜಾತಿಯ ಅನು ಭವ, ಭಾವನಾ, ಕಲ್ಪನಾ, ವಿಚಾರ, ಜ್ಞಾನಗಳನ್ನು ಸಂಗ್ರಹಿಸಿ ರಕ್ಷಿಸುವ ಒಂದು ಭಂಡಾರವೇ ಕಾವ್ಯ.

ಭಾರತೀಯ ಕಾವ್ಯಮೀಮಾಂಸಕರಲ್ಲಿ ವಾಮನನು 'ಕಾವ್ಯಂ ಗ್ರಾಹ್ಯಮಲಂಕಾ ರಾತ್' 'ಸೌಂದರ್ಯಮಲಂಕಾರಃ' ಎಂದು ಸೂತ್ರಿಸಿ, ಸೌಂದರ್ಯವು ಕಾವ್ಯಗಳಿಗೂ ಕಾವ್ಯೇತರಗ್ರಂಥಗಳಿಗೂ ಇರುವ ಭೇದಕ ವಿಶೇಷವೆಂದು ನಿರ್ಣಯಿಸಿದ್ದಾನೆ. 'ಅಲಂಕಾರವಿರುವುದರಿಂದ ಕಾವ್ಯವು ಗ್ರಾಹ್ಯವಾಗುತ್ತದೆ. ಅಲಂಕಾರವೆಂದರೆ ಸೌಂದರ್ಯ' ಎಂದು ಆತನ ಆಶಯ. ಒಟ್ಟಿನಲ್ಲಿ ಸೌಂದರ್ಯ ಉಳ್ಳದ್ದು ಕಾವ್ಯ, ಸೌಂದರ್ಯವಿಲ್ಲದ್ದು ಕಾವ್ಯೇತರ ಎಂದಂತಾಯಿತು. ಸೌಂದರ್ಯವೆಂದರೇನೆಂಬ ಪ್ರಶ್ನೆಯನ್ನು ಅವನು ಎತ್ತಲಿಲ್ಲ.

ಸುಂದರ ಶಬ್ದಕ್ಕೆ ಎರಡು ಬಗೆಯಲ್ಲಿ ವ್ಯುತ್ಪತ್ತಿಯುಂಟು. 'ಸು ದ್ರಿಯತ ಇತಿ ಸುಂದರಮ್; ದೃಙ್ ಆದರೆ' ಚೆನ್ನಾಗಿ ಆದರಿಸಲ್ಪಡತಕ್ಕದ್ದು* ಸುಂದರ. ಅಥವಾ 'ಸು ಉನತ್ತಿ ಚಿತ್ತಂ ದ್ರವೀಕರೋತೀತಿ ಸುಂದರಮ್; ಉಂದೀ ಕ್ಲೇದನೇ' – ಚಿತ್ತ ವನ್ನು ಸಮೀಚೀನವಾಗಿ ದ್ರವೀಕರಿಸುತ್ತದೆ. ಕರಗಿಸುತ್ತದೆ, ಆದ್ದರಿಂದ ಸುಂದರ. ಸುಂದರವಸ್ತುವಿನಲ್ಲಿರುವ ಅಸಾಧಾರಣಧರ್ಮವೇ ಸೌಂದರ್ಯ. 'ಸುಂದರಸ್ಯ ಭಾವಃ ಸೌಂದರ್ಯಂ.' ಯಾವುದರ ಸದ್ಭಾವದಿಂದ ಜನರಿಗೆ ಆದರ ಉಂಟಾಗುತ್ತ ದೆಯೋ ಅದು ಸೌಂದರ್ಯ, ಯಾವುದು ಜನರ ಚಿತ್ತವೃತ್ತಿಯನ್ನು ಆರ್ದ್ರಗೊಳಿ ಸುವುದೊ – ಕರಗಿಸುವುದೊ ಅದು ಸೌಂದರ್ಯ ಎಂದಾಯಿತು.

---

* To Kalon ಎಂಬ ಗ್ರಿಕ್ ಮಾತಿಗಿರುವ Desirable ಎಂಬ ಅರ್ಥವುಳ್ಳ ಪದ ವನ್ನು ಹೋಲಿಸುವುದು. ಅಲ್ಲಿ Beauty ಎಂಬ ಪದಕ್ಕೆ ಅದು ಸಮಾನವಂತೆ. ART ಎಂಬುದಕ್ಕೆ ಸಮನಾಗಿ Techne ಎಂಬುದನ್ನು ಬಳಸುತ್ತಾರೆ. ಕೃತಿಕರ್ಮಕ್ಕೆ ಸಂಬಂಧಿ ಸಿದ ಮಾತಾಗುತ್ತದೆ ಅದು. — ಸಂ.

ರುಚಿರ, ಕಾಂತ, ಮನೋರಮ, ಮನೋಹರ, ಮನೋಜ್ಞ – ಇವು ಸುಂದರ ಶಬ್ದದ ಪರ್ಯಾಯಪದಗಳು. ರುಚಿರ = ದೀಪ್ತಿಯುಕ್ತ; ಪ್ರೀತಿಜನಕ (ರುಚ = ದೀಪ್ತಾವಭಿಪ್ರೀತೌ ಚ), ಕಾಂತ = ಕಾಮನಾವಿಷಯ, ಮನೋರಮ = ಮನಸ್ಸಿಗೆ ಆನಂದಕರ, ಮನೋಹರ = ಮನಸ್ಸನ್ನು ಅಪಹರಿಸತಕ್ಕದ್ದು, ಮನೋಜ್ಞ = ಮನಸ್ಸಿಗೆ ಗೋಚರ, ಮನಸ್ಸಿಗೆ ಮಾತ್ರ ಗೋಚರ.

ಎಂದರೆ – ಸೌಂದರ್ಯವು ವಸ್ತುನಿಷ್ಠವಾದ ಒಂದು ಗುಣ. ತನ್ನಲ್ಲಿರುವ ಒಂದಾನೊಂದು ದೀಪ್ತಿಯಿಂದ ಅದು ಮನುಷ್ಯನ ಚಿತ್ತವೃತ್ತಿಯನ್ನು ಆಕರ್ಷಿಸಿ ದ್ರವೀಕರಿಸಬಲ್ಲುದು; ತಲ್ಲೀನವಾಗುವಂತೆ ಮಾಡಬಲ್ಲುದು. ಮನಸ್ಸಿಗೆ ಆನಂದವನ್ನು ಕೊಡುತ್ತದೆ. ಮನಸ್ಸನ್ನು ತನ್ನೆಡೆಗೆ ಸೆಳೆಯುತ್ತದೆ. ಮನಸ್ಸಿಗೆ ಮಾತ್ರ ಗೋಚರ. ಆ ಸೌಂದರ್ಯವು ಕಮನೀಯ, ಸರ್ವರ ಕಾಮನೆಗೂ ಪಾತ್ರವಾದದ್ದು.

ಜಗನ್ನಾಥನು ಉಪಮಾಲಂಕಾರಪ್ರಕರಣದಲ್ಲಿ 'ಸೌಂದರ್ಯಂ ಚ ಚಮತ್ಕೃತ್ಯಾಧಾಯಕತ್ವಂ ಚಮತ್ಕೃತಿಃ ಆನಂದವಿಶೇಷಃ ಸಹೃದಯಹೃದಯಪ್ರಮಾಣಕಃ' ಎಂದಿದ್ದಾನೆ. – 'ಸೌಂದರ್ಯವೆಂದರೆ ಚಮತ್ಕಾರಜನಕವಾದ ಒಂದು ಗುಣ. ಚಮತ್ಕಾರವೆಂದರೆ ಆನಂದ ವಿಶೇಷ. ಇದಕ್ಕೆ ಸಹೃದಯರ ಹೃದಯವೇ ಪ್ರಮಾಣ.' ಸೌಂದರ್ಯ, ರಮಣೀಯತೆ – ಇವೆರಡೂ ಪರ್ಯಾಯಪದಗಳು. ಜಗನ್ನಾಥನು ಕಾವ್ಯಲಕ್ಷಣವನ್ನು ವಿವರಿಸುವ ಸಂದರ್ಭದಲ್ಲಿಯೂ 'ರಮಣೀಯತಾ ಚ ಲೋಕೋತ್ತರಾಹ್ಲಾದಜನಕಜ್ಞಾನಗೋಚರತಾ' ಎಂದು ಹೇಳಿ, ರಮಣೀಯತೆ ಲೋಕೋತ್ತರಾಹ್ಲಾದಜನಕವೆಂದು ತಿಳಿಸಿದ್ದಾನೆ. ಆನಂದವಿಶೇಷವೇ ಲೋಕೋತ್ತರಾಹ್ಲಾದ. ಆನಂದವು ಸ್ವಸ್ವರೂಪದಿಂದ ಒಂದೇ ಆದರೂ ನಿಮಿತ್ತಭೇದದಿಂದ ಅವರಲ್ಲಿ ವಿವಿಧ ಪ್ರಕಾರಗಳು ತೋರಬಹುದು. ಕಾವ್ಯದಿಂದಾಗುವ ಆನಂದವಿಶೇಷವನ್ನು ಕಾವ್ಯಮೀಮಾಂಸೆಯಲ್ಲಿ ಚಮತ್ಕಾರ – ಚಮತ್ಕೃತಿ ಎಂದು ವ್ಯವಹರಿಸುತ್ತಾರೆ. ಶಬ್ದಪ್ರತಿಪಾದ್ಯವಾದ ಯಾವ ಅರ್ಥಸೌಂದರ್ಯ ಉಂಟೊ ಅದರಿಂದಾಗುವ ಆನಂದ ಲೋಕೋತ್ತರ. ಅದು ಅಲೌಕಿಕ. ಅದಕ್ಕೆ ಕಾವ್ಯರಸಿಕರ ಅನುಭವವೇ ಆಧಾರ.

ಒಟ್ಟಿನಲ್ಲಿ ಸೌಂದರ್ಯವೆಂದರೇನೆಂಬುದನ್ನು ಸಹೃದಯರ ಅನುಭವಕ್ಕೆ ಬಿಡತಕ್ಕದ್ದು. ಶೃಂಗಗ್ರಾಹಿಕೆಯಿಂದ 'ಇದೇ ಅದು' ಎಂದು ಬೆರಳುಮಾಡಿ ತೋರಿಸಲು ಶಕ್ಯವಲ್ಲ. ಸೌಂದರ್ಯವು ಕಾವ್ಯೇತರಗ್ರಂಥಗಳಿಂದ ಕಾವ್ಯವನ್ನು ಬೇರ್ಪಡಿಸುತ್ತದೆಯೆಂಬುದು ಸರ್ವಲಾಕ್ಷಣಿಕರಿಗೂ ಸಂಮತ. ಕಾವ್ಯದ ಸೌಂದರ್ಯಕ್ಕೆ ವಿವಿಧಸಾಮಗ್ರಿಗಳು ನಿಮಿತ್ತವಾಗಿರಬಹುದು. ಅವುಗಳಲ್ಲಿ ಯಾವುದು ಮುಖ್ಯ ? ಎಂಬುದರಲ್ಲಿ ಮತಭೇದ ಉಂಟು. ಗುಲಾಬಿ ಹೂವಿನಿಂದ ಸಂತೋಷವಾಗುತ್ತದೆ. ಅದಕ್ಕೆ

ನಿಮಿತ್ತ ಯಾವುದು' – ಬಣ್ಣವೆ ? ಸುಗಂಧವೆ ? ಆಕೃತಿಯೆ ? ಮೂರೂ ನಿಮಿತ್ತವಾದರೆ ಯಾವುದು ಮುಖ್ಯ ?

ಈ ತೊಡಕಿನ ಜಿಜ್ಞಾಸೆ ಕಾವ್ಯವಿಷಯದಲ್ಲಿಯೂ ಕಾವ್ಯಮೀಮಾಂಸಕರಿಗೆ ಸಂಭವಿಸಿತು. ರೀತಿ, ಗುಣ, ಅಲಂಕಾರ, ವಕ್ರೋಕ್ತಿ, ಔಚಿತ್ಯ, ಧ್ವನಿ – ಇವೆಲ್ಲವೂ ಕಾವ್ಯಸೌಂದರ್ಯಾಧಾಯಕಗಳೇ. ಒಬ್ಬೊಬ್ಬರು ಒಂದೊಂದು ಪಕ್ಷವನ್ನು ವಹಿಸಿ ತಮ್ಮ ನಿರ್ಧಾರವನ್ನು ತಿಳಿಸಿದರು. ಇವರೆಲ್ಲರಿಗೂ ಆಲಂಕಾರಿಕರೆಂಬ ಹೆಸರು ರೂಢಿಗೆಬಂದಿದೆ. ಆಲಂಕಾರಿಕರೆಂದರೆ ಸೌಂದರ್ಯ ಮೀಮಾಂಸಕರು ಎಂದರ್ಥ. ಕಡೆಯಲ್ಲಿ ಧ್ವನಿಯೇ ಸರ್ವೋತ್ತಮ ಎಂಬ ನಿರ್ಣಯ ಉಳಿದುಕೊಂಡಿತು. ರೀತ್ಯಾದಿಗಳನ್ನು ಪರಿಶೀಲಿಸುವುದರ ಮೊದಲು ಕಾವ್ಯವೆಂದರೇನೆಂಬುದನ್ನು ಪರಿಶೀಲಿಸುವುದು ಉತ್ತಮ. ಕಾವ್ಯಲಕ್ಷಣವನ್ನು ಹೇಳಿದವರಲ್ಲಿ ಮುಖ್ಯವಾಗಿ ಎರಡು ಪಕ್ಷಗಳುಂಟು: 'ಶಬ್ದಾರ್ಥಗಳೆರಡೂ ಸೇರಿ ಕಾವ್ಯ' ಎಂಬ ಪಕ್ಷ ಒಂದು. 'ಎರಡೂ ಸೇರಿ ಅಲ್ಲ, ಅರ್ಥಪ್ರತಿಪಾದಕವಾದ ಶಬ್ದಮಾತ್ರವೇ ಕಾವ್ಯ' ಎಂಬ ಪಕ್ಷ ಇನ್ನೊಂದು. ಶಬ್ದಾರ್ಥಗಳೆರಡೂ ಅವಿನಾಭಾವಸಂಬಂಧದಿಂದ ಸೇರಿಕೊಂಡಿರುತ್ತವೆ. ಶಬ್ದದೊಡನೆ ಅರ್ಥ, ಅರ್ಥದೊಡನೆ ಶಬ್ದ. ಆದ್ದರಿಂದ ಯಾವ ಪಕ್ಷ ಸರಿಯೆಂದು ನಿರ್ಧರಿಸುವುದು ಅಷ್ಟು ಸುಲಭವಲ್ಲ.

ಶಬ್ದವು ಕಾವ್ಯ ಎಂದವರು ನಮಗೆ ತಿಳಿದಮಟ್ಟಿಗೆ ಮೂವರು: ದಂಡಿ, ರಾಜಶೇಖರ ಮತ್ತು ಪಂಡಿತರಾಜ ಜಗನ್ನಾಥ. ಉಳಿದವರೆಲ್ಲರೂ ಶಬ್ದಾರ್ಥಗಳೆರಡೂ ಸೇರಿ ಕಾವ್ಯ ಎಂಬ ಪಕ್ಷದವರು. ಆಲಂಕಾರಿಕರಲ್ಲಿ ಆದ್ಯನಾದ ಭರತನು ಕಾವ್ಯಲಕ್ಷಣವನ್ನು ಹೇಳಲಿಲ್ಲ. ದಂಡಿಯು 'ಶರೀರಂ ತಾವದಿಷ್ಟಾರ್ಥವ್ಯವಚ್ಛಿನ್ನಾ ಪದಾವಲೀ' (ಕಾವ್ಯ. 10) – 'ಕಾವ್ಯದ ಶರೀರವೆಂದರೆ ಇಷ್ಟವಾದ ಅರ್ಥವನ್ನು ಪ್ರತಿಪಾದಿಸುವ ಶಬ್ದಸಮೂಹ' ಎಂದು ಹೇಳಿದನು. ಇಷ್ಟವೆಂದರೆ ಸುಂದರ, ರಮಣೀಯ. ಜಗನ್ನಾಥನು ದಂಡಿಯ ಲಕ್ಷಣವನ್ನೇ ಅನುಸರಿಸಿ 'ರಮಣೀಯಾರ್ಥಪ್ರತಿಪಾದಕಃ ಶಬ್ದಃಕಾವ್ಯಂ' ಎಂದು ರಸಗಂಗಾಧರದಲ್ಲಿ ಸೂತ್ರಿಸಿದನು. ರಾಜಶೇಖರನು 'ಗುಣವದಲಂಕೃತಂ ಚ ವಾಕ್ಯಮೇವ ಕಾವ್ಯಂ' ಎಂದು ಕಾವ್ಯಮೀಮಾಂಸೆಯಲ್ಲಿ ಹೇಳಿದ್ದಾನೆ. 'ಗುಣದಿಂದಲೂ ಅಲಂಕಾರದಿಂದಲೂ ಕೂಡಿದ ವಾಕ್ಯವೇ ಕಾವ್ಯ.' ವಾಕ್ಯವೆಂದರೆ ಅರ್ಥ ಪ್ರತಿಪಾದಕ ಪದಸಮೂಹವಷ್ಟೆ. ವಿಶ್ವನಾಥನು 'ವಾಕ್ಯಂ ರಸಾತ್ಮಕಂ ಕಾವ್ಯಂ' ಎಂದು ಹೇಳಿದ್ದರೂ 'ತಯೋಃ ಕಾವ್ಯಸ್ವರೂಪತ್ವೇನ ಅಭಿಮತಯೋಃ ಶಬ್ದಾರ್ಥಯೋಃ' (ಸಾ. ದ. I – 2 ವೃತ್ತಿ) ಎಂದು ಆತನೇ ಇನ್ನೊಂದೆಡೆ ಬರೆದಿದ್ದಾನೆ. ಆದ್ದರಿಂದ ಶಬ್ದಾರ್ಥಗಳೆರಡೂ ಸೇರಿ ಕಾವ್ಯ ಎಂಬುದು ವಿಶ್ವ

ನಾಥನ ಆಶಯವೆಂದು ತೋರುತ್ತದೆ. ಇನ್ನು ಭಾಮಹನು 'ಶಬ್ದಾರ್ಥೌ ಸಹಿತೌ ಕಾವ್ಯಂ' – ಶಬ್ದಾರ್ಥಗಳೆರಡೂ ಸೇರಿ ಕಾವ್ಯ ಎಂದಿದ್ದಾನೆ. ಈ ಲಕ್ಷಣವು ಶಾಸ್ತ್ರಾದಿ ಗ್ರಂಥಗಳಲ್ಲಿ ಅತಿವ್ಯಾಪ್ತವಾಗುವುದರಿಂದ ಶಬ್ದಾರ್ಥಗಳಿಗೆ ಸುಂದರ ಎಂಬ ವಿಶೇಷಣವನ್ನು ಕೊಡಬೇಕೆಂಬುದು ಸ್ಪಷ್ಟ. ವಾಮನನು 'ಕಾವ್ಯಶಬ್ದೋಽಯಂ ಗುಣಾಲಂಕಾರಸಂಸ್ಕೃತಯೋಃ ಶಬ್ದಾರ್ಥಯೋರ್ವರ್ತತೇ' – 'ಕಾವ್ಯ ಎಂಬ ಶಬ್ದವು ಗುಣಾಲಂಕಾರಗಳಿಂದ ಪರಿಷ್ಕೃತವಾದ ಶಬ್ದಾರ್ಥಗಳೆಂಬ ಅರ್ಥದಲ್ಲಿದೆ' ಎಂದಿದ್ದಾನೆ (ಕಾ. ಸೂ. ವೃ. I – 1). ಶಬ್ದಾರ್ಥಗಳೆರಡೂ ಸೇರಿ ಕಾವ್ಯ. ಅದು ಗುಣಾಲಂಕಾರಗಳಿಂದ ಯುಕ್ತವಾಗಿರಬೇಕು ಎಂಬುದು ವಾಮನನ ಅಭಿಪ್ರಾಯ. ಮಮ್ಮಟ, ಹೇಮಚಂದ್ರ – ಮುಂತಾದವರ ಲಕ್ಷಣಗಳು ಹೆಚ್ಚುಕಡಮೆ ವಾಮನನ ಲಕ್ಷಣದಂತೆಯೇ ಇವೆ. ಆನಂದವರ್ಧನನು 'ಸಹೃದಯ ಹೃದಯಾಹ್ಲಾದಿ ಶಬ್ದಾರ್ಥಮಯತ್ವಮೇವ ಕಾವ್ಯಲಕ್ಷಣಂ' – 'ಸಹೃದಯರ ಹೃದಯವನ್ನು ಆಹ್ಲಾದಗೊಳಿಸುವ ಶಬ್ದಾರ್ಥಗಳಿಂದ ಪ್ರಚುರವಾಗಿರುವುದೇ ಕಾವ್ಯಲಕ್ಷಣ' (ಧ್ವ. ವಾ. I – 1) ಎಂದು ಹೇಳಿದ್ದಾನೆ. ಇದು ಪೂರ್ವಪಕ್ಷದ ಸಂದರ್ಭದಲ್ಲಿ ಉಕ್ತವಾಗಿದ್ದರೂ ಧ್ವನಿಕಾರನಿಗೆ ಸಂಮತವಾದ್ದೇ. ಗುಣಾಲಂಕಾರಾದಿ ವಿಶೇಷಣಗಳನ್ನೇನೂ ಕೊಡದೆ, 'ಸಹೃದಯ ಹೃದಯಾಹ್ಲಾದಿ' ಎಂದು ಮಾತ್ರ ಆನಂದವರ್ಧನನು ಹೇಳಿರುವುದು ಇಲ್ಲಿ ಗಮನಾರ್ಹ. ಕುಂತಕನ ಲಕ್ಷಣವೂ ಧ್ವನಿಕಾರನ ಲಕ್ಷಣವನ್ನೇ ಹೋಲುತ್ತದೆ:

ಶಬ್ದಾರ್ಥೌ ಸಹಿತೌ ವಕ್ರಕವಿವ್ಯಾಪಾರಶಾಲಿನಿ
ಬಂಧೇ ವ್ಯವಸ್ಥಿತೌ ಕಾವ್ಯಂ ತದ್ವಿದಾಹ್ಲಾದಕಾರಿಣಿ
(ವ. ಜೀ. I – 7)

'"ವಕ್ರವಾದ ಕವಿವ್ಯಾಪಾರದಿಂದ ಕೂಡಿದ್ದೂ ಬಲ್ಲವರಿಗೆ ಆನಂದವನ್ನುಂಟುಮಾಡತಕ್ಕದ್ದೂ ಆದ ಬಂಧದಲ್ಲಿ ವ್ಯವಸ್ಥಿತವಾಗಿರುವ ಶಬ್ದಾರ್ಥಗಳೆರಡೂ ಸೇರಿ ಕಾವ್ಯ"

ಮಮ್ಮಟನು ಕಾವ್ಯಪ್ರಕಾಶದಲ್ಲಿ 'ತದದೋಷೌ ಶಬ್ದಾರ್ಥೌ ಸಗುಣಾವನಲಂಕೃತೀ ಪುನಃ ಕ್ವಾಪಿ' (ಕಾವ್ಯ. I – 4) ಎಂದು ಕಾವ್ಯಲಕ್ಷಣವನ್ನು ಹೇಳಿದನು. 'ಅದು ದೋಷವಿಲ್ಲದ ಗುಣಸಹಿತವಾದ ಶಬ್ದಾರ್ಥರೂಪ . ಸ್ಫುಟವಾದ ಅಲಂಕಾರವು ಕ್ವಚಿತ್ ಇಲ್ಲದಿದ್ದರೂ ಆಗಬಹುದು' ಈ ಲಕ್ಷಣವು ಸರಿಯಲ್ಲವೆಂದು ವಿಶ್ವನಾಥನೂ ಜಗನ್ನಾಥನೂ ದೂಷಿಸಿದ್ದಾರೆ. ಸಾರಾಂಶವಿಷ್ಟು: ಕಾವ್ಯಲಕ್ಷಣದಲ್ಲಿ 'ಅದೋಷೌ' ಎಂದು ಸೇರಿಸಿದ್ದು ಯುಕ್ತವಲ್ಲ. ದೋಷರಹಿತವಾದ ಕಾವ್ಯವೇ

ವಿರಳ. ಕಾಳಿದಾಸಾದಿ ಮಹಾಕವಿಗಳ ಕಾವ್ಯದಲ್ಲಿಯೂ ಒಂದಲ್ಲ ಒಂದು ದೋಷವನ್ನು ತೋರಿಸುವುದು ಶಕ್ಯ. ರಸಧ್ವನಿಯಿರುವ ಉತ್ತಮ ಕಾವ್ಯದಲ್ಲಿಯೂ ಯಾವುದಾದರೊಂದು ಶಬ್ದದೋಷವಿರಬಹುದು. ಅದು ಕಾವ್ಯವೇ ಅಲ್ಲವೆನ್ನುವುದು ಸಾಹಸದ ಮಾತು. ಮಮ್ಮಟನೇ ಕಾವ್ಯಪ್ರಕಾಶದ ಸಪ್ತಮೋಲ್ಲಾಸದಲ್ಲಿ ಮಹಾಕವಿಗಳ ಕೃತಿಗಳಿಂದಾಯ್ದ ಪದ್ಯಗಳನ್ನು ಕಾವ್ಯದೋಷಗಳಿಗೆ ಉದಾಹರಣೆಗಳೆಂದು ತೋರಿಸಿದ್ದಾನೆ. ಅವು ಕಾವ್ಯವೇ ಅಲ್ಲವೆಂದು ಹೇಳಲು ಶಕ್ಯವೆ ? ಲಕ್ಷಣದಲ್ಲಿ ಗುಣಾಲಂಕಾರಗಳ ನಿವೇಶವೂ ಸರಿಯಾಗದು. 'ಗತೋಽಸ್ತಮರ್ಕಃ– ಸೂರ್ಯ ಮುಳುಗಿದನು' 'ಉದಿತಂ ಮಂಡಲಂ ವಿಧೋಃ– 'ಉದಯಿಸಿತು ಚಂದ್ರಮಂಡಲ' ಇತ್ಯಾದಿವಾಕ್ಯಗಳು ಸಹ ಗುಣಾಲಂಕಾರಗಳಿಲ್ಲದಿದ್ದರೂ ಸಂದರ್ಭವಿಶೇಷದಲ್ಲಿ ವ್ಯಂಗ್ಯಾರ್ಥಪ್ರತಿಪಾದಕವಾಗಿ ಉತ್ತಮಕಾವ್ಯವೆನಿಸಬಹುದು. ಇಲ್ಲಿಯೂ ಯಾವುದಾದರೊಂದು ಗುಣವೋ ಅಲಂಕಾರವೋ ಇದೆಯೆಂದು ವಾದಿಸುವುದಾದರೆ, ಗುಣಾಲಂಕಾರಗಳನ್ನು ಲಕ್ಷಣದಲ್ಲಿ ಸೇರಿಸುವುದಾದರೂ ಏಕೆ ? ಗುಣವಿಲ್ಲದ ವಾಕ್ಯರಚನೆಯೇ ಅಶಕ್ಯವೆಂದಾಗುತ್ತದೆ. 'ಸ್ಫುಟವಾದ ಅಲಂಕಾರವು ಕ್ವಚಿತ್ ಇಲ್ಲದಿದ್ದರೂ ಆಗಬಹುದು' ಎಂಬುದು ಲಕ್ಷಣದಲ್ಲಿ ಸೇರಿಸತಕ್ಕ ಅಂಶವೆ ? ಕಾವ್ಯಜೀವಿತವಾದ ಚಮತ್ಕಾರವಿರುವಾಗ ಅಲಂಕಾರವಿಲ್ಲದಿದ್ದರೇನು ?

'ವಾಕ್ಯಂ ರಸಾತ್ಮಕಂ ಕಾವ್ಯಂ' ಎಂಬುದು ವಿಶ್ವನಾಥನ ಮತ. ಜಗನ್ನಾಥನು ಇದನ್ನು ಒಪ್ಪುವುದಿಲ್ಲ. ರಸಧ್ವನಿಯಿರುವುದೇ ಕಾವ್ಯವೆಂದು ಹೇಳುವುದಾದರೆ, ವಸ್ತುಧ್ವನಿಯೊ ಅಲಂಕಾರಧ್ವನಿಯೊ ಇರುವಾಗ ಕಾವ್ಯವಲ್ಲವೊ ಹೇಗೆ ? ಅರ್ಥಚಿತ್ರ, ಶಬ್ದಚಿತ್ರಗಳಲ್ಲಿ ರಸಾತ್ಮಕತೆ ಎಲ್ಲಿದೆ ? ಮಹಾಕಾವ್ಯದಲ್ಲಿ ಪ್ರತಿಪಾದ್ಯವಾದ ರಸವಿರುವುದೆಂದೂ ಪರಂಪರೆಯಿಂದ ವಸ್ತುಧ್ವನಿ, ಅರ್ಥಚಿತ್ರಾದಿಗಳಲ್ಲಿ ರಸಸ್ಪರ್ಶ ಬರುವುದೆಂದೂ ಹೇಳುವುದಾದರೆ, 'ಹಸು ಹೋಗುತ್ತದೆ' 'ಜಿಂಕೆ ಓಡುತ್ತದೆ' ಎಂಬ ವಾಕ್ಯಗಳನ್ನೂ ಕಾವ್ಯವೆನ್ನಬೇಕಾದೀತು. ಉಚಿತಸನ್ನಿವೇಶದಲ್ಲಿ ಈ ವಾಕ್ಯಗಳಿಗೆ ರಸಸ್ಪರ್ಶವುಂಟಾಗಿ ಕಾವ್ಯವೆನಿಸಿದರೂ ಎಲ್ಲೆಡೆಯೂ ಅಲ್ಲ. ವಸ್ತುಕಥನಮಾತ್ರವಾದಾಗಲೂ ಕಾವ್ಯವೆನ್ನಬೇಕಾದೀತು ಎಂದು ಜಗನ್ನಾಥನ ಆಕ್ಷೇಪ. ಪರಂಪರೆಯಿಂದಲೂ ರಸಸ್ಪರ್ಶವಿಲ್ಲದ ಮುಕ್ತಕಗಳಲ್ಲಿ (ಬಿಡಿಪದ್ಯ) ಗತಿ ಏನು ? ರಸಾತ್ಮಕವಾದದ್ದೇ ಕಾವ್ಯವೆಂದರೆ ಮಧ್ಯಮಕಾವ್ಯ, ಅಧಮಕಾವ್ಯ ಎಂಬ ವಿಭಾಗ ಹೇಗೆ ಯುಕ್ತವಾದೀತು ?

'ಕಾವ್ಯಸ್ಯಾತ್ಮಾ ಧ್ವನಿಃ' ಎಂಬುದು ಆನಂದವರ್ಧನನ ಸಿದ್ಧಾಂತ. ಸಹೃದಯಹೃದಯಾಹ್ಲಾದವು ಧ್ವನಿಯಿಂದ ಮಾತ್ರ ಎಂದು ಆತನ ನಿಲವಾಗಿ ತೋರುತ್ತದೆ.

ಇಲ್ಲಿ ಧ್ವನಿಯೆಂದರೆ ವ್ಯಂಗ್ಯಾರ್ಥ. ಈ ಪಕ್ಷದಲ್ಲಿ ವಸ್ತುಧ್ವನಿ ಮುಂತಾದವೂ ಗುಣೀಭೂತವ್ಯಂಗ್ಯವೂ ಕಾವ್ಯವೆನಿಸುತ್ತವೆ. ಅರ್ಥಚಿತ್ರ, ಶಬ್ದಚಿತ್ರಗಳನ್ನು ಧ್ವನಿಕಾರನು ಅಂಗೀಕರಿಸಿದ್ದರೂ ಅವು ಕಾವ್ಯಾನುಕಾರಗಳು; ಕಾವ್ಯವೆಂಬ ವ್ಯವಹಾರ ಅವುಗಳ ವಿಷಯದಲ್ಲಿ ಔಪಚಾರಿಕ.

ಕಾವ್ಯದಲ್ಲಿ ಧ್ವನಿ ವಾಚ್ಯಾರ್ಥಕ್ಕಿಂತ ರಮಣೀಯವೆಂದೂ ಅದರಲ್ಲಿಯೂ ರಸಧ್ವನಿ ಪರಮರಮಣೀಯವೆಂದೂ ಜಗನ್ನಾಥನು ಅಂಗೀಕರಿಸುತ್ತಾನೆ. ವಾಚ್ಯವಾದ ಉಪಮಾದ್ಯರ್ಥಾಲಂಕಾರವೂ ಅನುಪ್ರಾಸಾದಿಶಬ್ದಾಲಂಕಾರವೂ ಆಹ್ಲಾದ ಜನಕವಲ್ಲವೆಂಬುದಾಗಲಿ ಅರ್ಥಚಿತ್ರ ಶಬ್ದಚಿತ್ರಗಳು ಔಪಚಾರಿಕವಾಗಿ ಕಾವ್ಯಗಳೆಂಬ ಧ್ವನಿಕಾರನ ಮತವಾಗಲಿ ಜಗನ್ನಾಥನಿಗೆ ಸಂಮತವಲ್ಲ. ಅರ್ಥಚಿತ್ರಾದಿಗಳೂ ಕಾವ್ಯಭೇದಗಳೇ. ಆದ್ದರಿಂದಲೇ ಮಹಾಕವಿಗಳು ಅವನ್ನೂ ಆದರಿಸಿದ್ದಾರೆ. ವಸ್ತುಸ್ಥಿತಿಯನ್ನನುಸರಿಸಿ ಕಾವ್ಯಲಕ್ಷಣವನ್ನು ಹೇಳಬೇಕು. ಏಕಾಕ್ಷರಿ, ದ್ವ್ಯಕ್ಷರಿ ಮುಂತಾದವು ಮಾತ್ರ ರಮಣೀಯಾರ್ಥವಿಲ್ಲದ್ದರಿಂದ ಕಾವ್ಯವಲ್ಲ.

ನಮಗೆ ಬೇಕಾದದ್ದು ಕಾವ್ಯಸಾಮಾನ್ಯಲಕ್ಷಣ. ನಾವು ಹೇಳುವ ಲಕ್ಷಣ ಸಕಲ ಕಾವ್ಯಗಳಲ್ಲಿಯೂ ಅನುಗತವಾಗಿರಬೇಕು. ಅಧಮಕಾವ್ಯದಲ್ಲಿಯೂ ಕಂಡುಬರಬೇಕು. ಸಹೃದಯಾಹ್ಲಾದಕರವಾದ ಚಮತ್ಕಾರವೇ ಕಾವ್ಯಜೀವಿತ. ಧ್ವನಿಕಾವ್ಯದಿಂದ ಆಹ್ಲಾದವಾಗುವಂತೆ ಅರ್ಥಚಿತ್ರ ಶಬ್ದಚಿತ್ರಗಳಿಂದಲೂ ಆಗಬಹುದು. ಆದರೆ ಆಹ್ಲಾದದಲ್ಲಿ ತರತಮಭಾವವಿರುತ್ತದೆ. ಆಹ್ಲಾದಜನಕತೆ ಉತ್ತಮವಾಗಿದ್ದರೆ ಉತ್ತಮಕಾವ್ಯ. ಮಧ್ಯಮವಾದರೆ ಮಧ್ಯಮಕಾವ್ಯ. ಕನಿಷ್ಠವಾದರೆ ಅಧಮಕಾವ್ಯ. ಚಮತ್ಕಾರ ಜನಕತೆ ಇದ್ದರೆ ಕಾವ್ಯ, ಇಲ್ಲದಿದ್ದರೆ ಕಾವ್ಯವಲ್ಲ ಎಂದು ಇದರಿಂದ ನಿರ್ಮಥಿತವಾಗುತ್ತದೆ. ಆದ್ದರಿಂದ 'ರಮಣೀಯಾರ್ಥಪ್ರತಿಪಾದಕಃ ಶಬ್ದಃ ಕಾವ್ಯಂ' ಅಥವಾ 'ಸಹೃದಯಹೃದಯಾಹ್ಲಾದಿ ಶಬ್ದಾರ್ಥಮಯಂ ಕಾವ್ಯಂ' ಎಂಬ ಲಕ್ಷಣ ಸರಿಯೆಂದು ಸಿದ್ಧವಾಗುತ್ತದೆ. ಶಬ್ದವು ಕಾವ್ಯ ಎಂಬ ಪಕ್ಷದಲ್ಲಿ ಮೊದಲನೆಯ ಲಕ್ಷಣ; ಶಬ್ದಾರ್ಥಗಳೆರಡೂ ಸೇರಿ ಕಾವ್ಯ ಎಂಬ ಪಕ್ಷದಲ್ಲಿ ಎರಡನೆಯ ಲಕ್ಷಣ. ಶಬ್ದಾರ್ಥಗಳಿಗಿರುವ ಮಧುರ ಸಹಿತಭಾವ ಸಾಹಿತ್ಯ.

ಶಬ್ದವು ಕಾವ್ಯ ಎಂಬ ಜಗನ್ನಾಥನ ಪಕ್ಷ ವಿಚಾರಸಹವಾಗಿ ಕಾಣುತ್ತದೆ. ವೇದವೂ ಸಹ ಶಬ್ದಪರವೇ. ಆದ್ದರಿಂದಲೇ ಅದಕ್ಕೆ ಶ್ರುತಿ ಎಂಬ ಹೆಸರು. ಶ್ರವಣಗೋಚರವಾಗತಕ್ಕದ್ದು ಶಬ್ದ, ಅರ್ಥವಲ್ಲ. ಗ್ರಂಥವೆಂದರೆ ಶಬ್ದಗಳ ಗ್ರಥನವಷ್ಟೆ. ಕಾವ್ಯವೂ ಒಂದು ಗ್ರಂಥ. ಕಾವ್ಯವು ಶಬ್ದಾತ್ಮಕವೆಂದು ಹೇಳಿದರೆ ಮಾತ್ರ ಗದ್ಯಕಾವ್ಯ, ಪದ್ಯಕಾವ್ಯ, ಚಂಪೂಕಾವ್ಯ ಎಂಬ ವ್ಯವಹಾರ ಉಪಪನ್ನವಾಗುತ್ತದೆ. ಗದ್ಯ ಪದ್ಯಗಳೆಂಬ ವಿಭಾಗ ಶಬ್ದಗಳಿಗೆ ಸಲ್ಲುವುದೇ ಹೊರತು ಅರ್ಥಕ್ಕೆ ಸಲ್ಲದು.

ಕಾವ್ಯ ತಿಳಿಯಿತು ಎಂದಾಗ ಕಾವ್ಯಾರ್ಥ ತಿಳಿಯಿತು ಎಂದೇ ಅರ್ಥವಾದರೂ ಭೂಯೋವ್ಯವಹಾರವಿರುವುದು ಶಬ್ದದಲ್ಲಿ. ಶಬ್ದಾರ್ಥಗಳೆರಡೂ ಸೇರಿ ಕಾವ್ಯ ಎನ್ನುವವರ ಪಕ್ಷದಲ್ಲಿ ಇನ್ನೊಂದು ಅನುಪಪತ್ತಿಯುಂಟು. ಗಿರಿವನಾದಿವರ್ಣನಾ ಕಾವ್ಯದಲ್ಲಿ ಅರ್ಥಗಳಾದ ಗಿರಿವನಾದಿಗಳನ್ನೂ ಕಾವ್ಯವೆಂದು ಹೇಳಬೇಕಾಗುತ್ತದೆ.

ಶಂಖಪ್ರಭಂ ಕ್ಷೀರಮೃಣಾಲವರ್ಣಮುದ್ಗಚ್ಛಮಾನಂ ವ್ಯವಭಾಸಮಾನಮ್
ದದರ್ಶ ಚಂದ್ರಂ ಸ ಕಪಿಪ್ರವೀರಃ ಪೋಪ್ಲೂಯಮಾನಂ ಸರಸೀವ ಹಂಸಮ್
— ವಾ. ರಾಮಾ (ಸುಂದರ II- 58)

"ಶಂಖದಂತೆಯೂ ಹಾಲಿನಂತೆಯೂ ತಾವರೆಯ ದಂಟಿನಂತೆಯೂ ಶುಭ್ರವರ್ಣನಾಗಿ ಬೆಳಗುತ್ತ, ಸರಸ್ಸಿನಲ್ಲಿ ಈಜುವ ಹಂಸದಂತೆ ಆಕಾಶದಲ್ಲಿ ತೇಲುತ್ತ ಬರುವ ಚಂದ್ರನನ್ನು ಕಪಿವೀರನಾದ ಹನುಮಂತನು ಕಂಡನು."

ಇಲ್ಲಿ ರಮಣೀಯವಾದ ಅರ್ಥ ಚಂದ್ರ. ಚಂದ್ರನನ್ನು ವರ್ಣಿಸುವದು ಈ ಪದ್ಯ ಕಾವ್ಯ. ಇಲ್ಲಿ ಚಂದ್ರನೂ ಕಾವ್ಯವೋ ಹೇಗೆ ? ಶಬ್ದಾರ್ಥಗಳೆರಡೂ ಸೇರಿ ಕಾವ್ಯ ಎನ್ನತಕ್ಕವರು ಚಂದ್ರನನ್ನೂ ಕಾವ್ಯ ಎಂದು ಹೇಳಬೇಕಾಗುತ್ತದೆ.

*

**ಕಾವ್ಯಸೌಂದರ್ಯಾಧಾಯಕಗಳು :**

ನಮಗೆ ದೊರೆಯುವ ಕಾವ್ಯಲಕ್ಷಣ ಗ್ರಂಥಗಳಲ್ಲಿ ಭರತಮುನಿಯ ನಾಟ್ಯಶಾಸ್ತ್ರವೇ ಮೊದಲನೆಯದು. ಇದು ಮುಖ್ಯವಾಗಿ ನಾಟ್ಯವನ್ನು ಉದ್ದೇಶಿಸಿ ಬರೆದ ಗ್ರಂಥವಾದರೂ ಕಾವ್ಯಸಾಮಾನ್ಯದಲ್ಲಿ ಆದರಿಸಬೇಕಾದ ಹಲವಾರು ವಿಷಯಗಳಿಗೆ ಆಕರ. 'ವಿಭಾವಾನುಭಾವವ್ಯಭಿಚಾರಿಸಂಯೋಗಾತ್ ರಸನಿಷ್ಪತ್ತಿಃ' ಎಂಬ ಸೂತ್ರಪ್ರಾಯವಾದ ವಾಕ್ಯವು ದೊರೆಯುವುದು ಇದರಲ್ಲಿಯೇ. ರಸ, ಭಾವ, ಗುಣ, ಅಲಂಕಾರ, ಭೂಷಣ, ವೃತ್ತಿ, ದೋಷ – ಮುಂತಾದ ಲಾಕ್ಷಣಿಕೋಪಯೋಗಿ ಪದಗಳೂ ಅವುಗಳ ವಿವರಣೆಗಳೂ ನಾಟ್ಯಶಾಸ್ತ್ರದಲ್ಲಿ ದೊರೆಯುತ್ತವೆ. ಇವುಗಳಲ್ಲಿ ರಸವು ಮುಖ್ಯವೆಂದು ಭರತಮುನಿಯ ಸಿದ್ಧಾಂತ. "ತತ್ರ ರಸಾನೇವ ತಾವದಾದಾವಭಿವ್ಯಾಖ್ಯಾಸ್ಯಾಮಃ । ನ ಹಿ ರಸಾದೃತೇ ಕಶ್ಚಿದರ್ಥಃ ಪ್ರವರ್ತತೇ" (ನಾ. ಶಾ. vi.) – 'ಅವುಗಳಲ್ಲಿ (ರಸಭಾವಾಭಿನಯಾದಿಗಳಲ್ಲಿ) ಮೊದಲು ರಸಗಳನ್ನೇ ಕುರಿತು ವ್ಯಾಖ್ಯಾನಮಾಡುತ್ತೇವೆ. ರಸವಿಲ್ಲದೆ ಯಾವುದೂ ಪ್ರವರ್ತಿಸುವುದಿಲ್ಲವಷ್ಟೆ.'

ಶಾಸ್ತ್ರಪ್ರವರ್ತಕನಾದ ಭರತನು ರಸದ ಪ್ರಾಧಾನ್ಯವನ್ನೂ ಸ್ಪಷ್ಟವಾಗಿ ತಿಳಿಸಿದ್ದರೂ ಮುಂದಿನ ಭಾಮಹಾದಿಗಳು ಅದನ್ನು ಅಷ್ಟಾಗಿ ಗಮನಿಸಲಿಲ್ಲ. ಭರತನ ಹೇಳಿಕೆ ನಾಟ್ಯಕ್ಕೆ ಮಾತ್ರ ಸಂಬಂಧಿಸಿದ್ದೆಂದು ಅವರು ಭಾವಿಸಿರಬಹುದು. ಅಥವಾ ತಮ್ಮ ವಿಚಾರಸ್ವಾತಂತ್ರ್ಯವನ್ನು ಅವರು ಪ್ರಕಟಿಸಿರಬಹುದು. ಭರತಮುನಿಯ ನಾಟ್ಯಶಾಸ್ತ್ರದ ಪ್ರಕಾರ –

1. ರಸಗಳು : ಶೃಂಗಾರ, ವೀರ, ಕರುಣ, ಅದ್ಭುತ, ಹಾಸ್ಯ, ಭಯಾನಕ, ಬೀಭತ್ಸ, ರೌದ್ರ ಎಂಬ ಎಂಟು (ಶಾಂತರಸವನ್ನು ಭರತನು ಹೇಳಿಲ್ಲ. ಪ್ರಕ್ಷಿಪ್ತ ಪಾಠದಲ್ಲಿ ಇದು ದೊರೆಯುತ್ತದೆ. ಮುಂದೆ ಧ್ವನಿಪ್ರಕರಣದಲ್ಲಿ ಇವುಗಳ ವಿವರಣೆ ಬರುತ್ತದೆ.)

2. ನಿರ್ವೇದ, ಗ್ಲಾನಿ ಮುಂತಾದ 33 ವ್ಯಭಿಚಾರಿಭಾವಗಳು.

3. ಸಾತ್ತ್ವಿಕಭಾವಗಳು : ಸ್ತಂಭಃ ಸ್ವೇದೋಽಥ ರೋಮಾಂಚಃ ಸ್ವರಭೇದೋಽಥ ವೇಪಥುಃ ವೈವರ್ಣ್ಯಮಶ್ರು ಪ್ರಲಯ ಇತ್ಯಷ್ಟೌ ಸಾತ್ತ್ವಿಕಾ ಮತಾಃ

ಸ್ತಂಭಾದಿಗಳು ಶಾರೀರಕಕ್ರಿಯೆಯಾಗಿ ಕಂಡುಬಂದರೂ ಇವುಗಳ ಉತ್ಪತ್ತಿಗೆ ಸಮಾಹಿತವಾದ (ಏಕಾಗ್ರವಾದ) ಮನಸ್ಸೇ ಕಾರಣವಾದ್ದರಿಂದ, ಇವು ಭಾವಗಳೆನಿಸುತ್ತವೆ.

4. ಗುಣಗಳು : ಶ್ಲೇಷಃ ಪ್ರಸಾದಃ ಸಮತಾ ಸಮಾಧಿರ್ಮಾಧುರ್ಯಮೋಜಃ ಪದಸೌಕುಮಾರ್ಯಂ ಅರ್ಥಸ್ಯ ಚ ವ್ಯಕ್ತಿರುದಾರತಾ ಚ ಕಾಂತಿಶ್ಚ ಕಾವ್ಯಾರ್ಥಗುಣಾ ದಶೈತೇ.

ಇವು 'ಕಾವ್ಯಾರ್ಥಗುಣ'ಗಳೆಂದು ಭರತನು ಹೇಳಿದ್ದರೂ ಅವನು ಕೊಡುವ ಲಕ್ಷಣದ ಪ್ರಕಾರ ಕೆಲವು ಶಬ್ದನಿಷ್ಠಗಳಾಗಿಯೂ ಕೆಲವು ಅರ್ಥನಿಷ್ಠಗಳಾಗಿಯೂ ತೋರುತ್ತಿವೆ.

5. ಅಲಂಕಾರಗಳು ನಾಲ್ಕು: ಉಪಮಾ, ದೀಪಕ, ರೂಪಕ ಮತ್ತು ಯಮಕ. ಮೊದಲನೆಯ ಮೂರು ಅರ್ಥಾಲಂಕಾರ. ಯಮಕವು ಶಬ್ದಾಲಂಕಾರ.

6. ಭೂಷಣಗಳು : ನಾಟ್ಯಶಾಸ್ತ್ರದ 16 ನೆಯ ಅಧ್ಯಾಯದಲ್ಲಿ ಕಾವ್ಯಭೂಷಣಗಳ ಪ್ರಸ್ತಾವವಿದೆ. ಇವು ಒಟ್ಟು 36. ಇವುಗಳಿಗೆ ಭೂಷಣಗಳೆಂದೂ ಲಕ್ಷಣಗಳೆಂದೂ ಎರಡು ಹೆಸರುಗಳಿರುವಂತೆ ಕಂಡುಬರುತ್ತದೆ. (ನಾಟ್ಯಶಾಸ್ತ್ರದ ಒಂದು ಪಾಠದ ಪ್ರಕಾರ ಇವು ಕಾವ್ಯಭೂಷಣಗಳು.)

* ಇವುಗಳಲ್ಲಿ ಮೊದಲ ನಾಲ್ಕು ಶೃಂಗಾರ, ರೌದ್ರ, ವೀರ, ಬೀಭತ್ಸ; ಅವುಗಳಿಂದಾದವು ಹಾಸ್ಯ, ಕರುಣ, ಅದ್ಭುತ, ಭಯಾನಕ; ನಾ. ಶಾ. ಇದರ ವಿಸ್ತಾರ ವಿವೇಚನೆ ಈಕಾಲದಲ್ಲಿ ಆಗತ್ಯ. — ಸಂ.

ವಿಭೂಷಣ, ಅಕ್ಷರಸಂಗತಿ, ಶೋಭಾ, ಉದಾಹರಣ, ಹೇತು, ಸಂಶಯ, ದೃಷ್ಟಾಂತ, ಪ್ರಾಪ್ತ, ಅಭಿಪ್ರಾಯ, ನಿದರ್ಶನ, ನಿರುಕ್ತ, ಸಿದ್ಧಿ, ವಿಶೇಷಣ, ಗುಣಾತಿಪಾತ, ಅತಿಶಯ, ತುಲ್ಯತರ್ಕ, ಪದೋಚ್ಚಯ, ದೃಷ್ಟ, ಉಪದಿಷ್ಟ, ವಿಚಾರ, ವಿಪರ್ಯಯ, ಭ್ರಂಶ, ಅನುನಯ, ಮಾಲಾ, ದಾಕ್ಷಿಣ್ಯ, ಗರ್ಹಣ, ಅರ್ಥಾಪತ್ತಿ, ಪ್ರಸಿದ್ಧಿ, ಪೃಚ್ಛ, ಸಾರೂಪ್ಯ, ಮನೋರಥ, ಲೇಶ, ದೋಷ, ಗುಣಕೀರ್ತನ, ಕಾರ್ಯ, ಪ್ರಿಯೋಕ್ತಿ.

ಭೂಷಣವೆಂದರೆ ಶೋಭಾಜನಕವೆಂದು ಶಬ್ದಾರ್ಥವಾಗುತ್ತದೆ. ಇವುಗಳ ವಿವಿಕ್ತ ಸ್ವರೂಪವು ಅಸ್ಫುಟವಾದ್ದರಿಂದ ಮುಂದಿನ ಆಲಂಕಾರಿಕರು ಈ ಭೂಷಣಗಳನ್ನು ಗುಣಾಲಂಕಾರಗಳಲ್ಲಿ ಸೇರಿಸಿಬಿಟ್ಟಿದ್ದಾರೆಂದು ತೋರುತ್ತದೆ. ಜಯದೇವನು ತನ್ನ ಚಂದ್ರಾಲೋಕದಲ್ಲಿ ಹತ್ತು ಭೂಷಣಗಳನ್ನು ಲಕ್ಷಣೋದಾಹರಣೆಗಳಿಂದ ವಿವರಿಸಿದ್ದಾನೆ. ಅವನ ಪ್ರಕಾರ ಭೂಷಣಕ್ಕೆ ಲಕ್ಷಣವೆಂದು ಹೆಸರು. ಯಾವುದನ್ನು ಜಯದೇವನು ಲಕ್ಷಣದ ಉದಾಹರಣೆಯೆಂದು ಕೊಟ್ಟಿರುವನೋ ಅದನ್ನೇ ಅವನು ಅಲಂಕಾರದ ಉದಾಹರಣೆಯನ್ನಾಗಿಯೂ ಕೊಟ್ಟಿದ್ದಾನೆ. ಲಕ್ಷಣಗಳೂ ಸಮಾನ. ಹೇಗೆಂದರೆ, –

ಇದು ಕಾರ್ಯವೆಂಬ ಲಕ್ಷಣ :–

ಕಾರ್ಯಂ ಫಲೋಪಲಂಭಶ್ಚೇದ್ವ್ಯಾಪಾರಾದ್ವಸ್ತುತೋಽಥವಾ
ಅಸಾವುದೇತಿ ಶೀತಾಂಶುರ್ಮಾನಚ್ಛೇದಾಯ ಸುಭ್ರುವಾಂ
ಚಂದ್ರಾ 3 – 10

ಇದು ಹೇತ್ವಲಂಕಾರ :–

ಹೇತೋರ್ಹೇತುಮತಾ ಸಾರ್ಧಂ ವರ್ಣನಂ ಹೇತುರುಚ್ಯತೇ
ಅಸಾವುದೇತಿ ಶೀತಾಂಶುರ್ಮಾನಚ್ಛೇದಾಯ ಸುಭ್ರುವಾಂ
— ಚಂದ್ರಾ 5 – 100

ದೋಷಗಳು :– ಗೂಢಾರ್ಥ, ಅರ್ಥಾಂತರಹೀನಾದಿ ಹತ್ತು ಕಾವ್ಯದೋಷಗಳನ್ನು ಭರತನು ಹೇಳಿದ್ದಾನೆ. ಈ ದೋಷಗಳನ್ನೇ ಮಮ್ಮಟಾದಿಗಳು ವಿಸ್ತರಿಸಿದ್ದಾರೆ.

ಇವು ನಾಟ್ಯಶಾಸ್ತ್ರದಿಂದ ತಿಳಿದುಬರುವ ಕಾವ್ಯಸಂಬಂಧಿಗಳಾದ ಮುಖ್ಯವಿಷಯಗಳು. ರಸಾದಿಗಳು ಕಾವ್ಯಸೌಂದರ್ಯಕ್ಕೆ ನಿಮಿತ್ತ ಎಂಬುದರಲ್ಲಿ ಯಾವ ವಿವಾದವೂ ಇಲ್ಲ. ಅವುಗಳಲ್ಲಿ ಯಾವುದರ ಸ್ಥಾನ ಯಾವುದೆಂಬುದನ್ನು ನಿರ್ಣಯಿಸಿದರೆ, ಅದರ ಮೌಲ್ಯವೆಷ್ಟೆಂದು ನಿರ್ಣಯಿಸಿದಂತೆಯೇ. ಕಾವ್ಯವನ್ನು ಪುರುಷನೆಂದೂ

ವಧುವೆಂದೊ ರೂಪಿಸಿ ರಸಾದಿಗಳ ಸ್ಥಾನವನ್ನು ನಿರ್ದೇಶಿಸುವುದು ಆಲಂಕಾರಿಕರ ಪದ್ಧತಿ. ಹೋಲಿಕೆಯಿಂದ ಅದರ ಮೌಲ್ಯವೇನೆಂಬುದು ಮನವರಿಕೆಯಾಗುತ್ತದೆ. ಭರತನು ಬಳಸಿದ ಗುಣ, ಭೂಷಣ, ಅಲಂಕಾರ ಎಂಬ ಶಬ್ದವಿಶೇಷಗಳೇ ಕವಿಕೃತಿಯನ್ನು ಮನುಷ್ಯವ್ಯಕ್ತಿಯಾಗಿ ರೂಪಿಸುವಂತೆ ಕಾವ್ಯಮೀಮಾಂಸಕರಿಗೆ ಪ್ರಚೋದನೆಯನ್ನಿತ್ತಿರಬಲ್ಲದು.

*

**ರೀತಿ, ಗುಣ, ಅಲಂಕಾರ ಪ್ರಸ್ಥಾನಗಳು**

ಭರತನ ತರುವಾಯ ಪ್ರಸಿದ್ಧನಾದ ಆಲಂಕಾರಿಕ ಭಾಮಹ. ಅವನು ಶರೀರ–ಆತ್ಮ ಎಂದು ವಿಭಜಿಸದಿದ್ದರೂ 'ಶಬ್ದಾರ್ಥೌ ಸಹಿತೌ ಕಾವ್ಯಂ' ಎಂಬ ಮಾತಿನಿಂದ ಶಬ್ದಾರ್ಥಗಳು ಕಾವ್ಯಶರೀರವೆಂಬ ಆಶಯವನ್ನು ವ್ಯಕ್ತಪಡಿಸಿದ್ದಾನೆ. ಇಲ್ಲಿ ಅರ್ಥವು ವಾಚ್ಯವೆ, ವ್ಯಂಗ್ಯವೆ ? – ಎಂಬುದನ್ನು ವಿಶದಪಡಿಸಿಲ್ಲ. 'ಯುಕ್ತಂ ವಕ್ರಸ್ವಭಾವೋಕ್ತ್ಯಾ ಸರ್ವಮೇವೈತದಿಷ್ಯತೇ' (ಕಾವ್ಯಾಲಂಕಾರ, I – 30) – 'ಕಾವ್ಯಸಾಮಾನ್ಯವೆಲ್ಲವೂ ವಕ್ರೋಕ್ತಿಯಿಂದ ಯುಕ್ತವಾಗಿರುವುದು ಅಪೇಕ್ಷಿತ' ಎಂದು ನುಡಿದು ಕಾವ್ಯದಲ್ಲಿ ವಕ್ರೋಕ್ತಿಯೇ ಚಮತ್ಕಾರಜನಕವೆಂದು ತನ್ನ ಅಭಿಪ್ರಾಯವನ್ನು ಸ್ಪಷ್ಟಪಡಿಸಿದ್ದಾನೆ. ವಕ್ರಸ್ವಭಾವೋಕ್ತಿಯೆಂದರೆ ವಕ್ರಸ್ವಭಾವವುಳ್ಳ ಉಕ್ತಿ ಎಂದರ್ಥ. ಸ್ವಭಾವೋಕ್ತಿಯು ಚಮತ್ಕಾರಿಯೆಂಬುದು ಅವನಿಗೆ ಸಂಮತವಲ್ಲ.

> ಸೈಷಾ ಸರ್ವತ್ರ ವಕ್ರೋಕ್ತಿರನಯಾರ್ಥೋ ವಿಭಾವ್ಯತೇ
> ಯತ್ನೋಽಸ್ಯಾಂ ಕವಿನಾ ಕಾರ್ಯಃ ಕೋಽಲಂಕಾರೋಽನಯಾ ವಿನಾ
> (ಕಾವ್ಯಾಲಂಕಾರ, II – 87)

"ಎಲ್ಲೆಡೆಯೂ (ಕಾವ್ಯಸಾಮಾನ್ಯದಲ್ಲಿಯೂ) ಈ ವಕ್ರೋಕ್ತಿ ಇರುತ್ತದೆ. ಇದರಿಂದ (ಚಮತ್ಕಾರಿಯಾದ) ಅರ್ಥವು ಗೋಚರಿಸುತ್ತದೆ. ಕವಿಯು ಇದಕ್ಕಾಗಿ ಯತ್ನಿಸಬೇಕು. ವಕ್ರೋಕ್ತಿ ಇಲ್ಲದೆ ಯಾವ ಅಲಂಕಾರವಿದ್ದೀತು ?" – ಎಂಬುದು ಭಾಮಹನ ಮತ. ಭಾಮಹನು ವಕ್ರೋಕ್ತಿಯ ಸ್ವರೂಪವನ್ನು ವಿವೇಚಿಸಲಿಲ್ಲ. ವಕ್ರೋಕ್ತಿಯಿಂದ ಸಂಭವಿಸುವ 39 ಅಲಂಕಾರಗಳನ್ನು ವಿವೇಚಿಸಿದ್ದಾನೆ. ರೀತಿಗಳಲ್ಲಿ ವೈದರ್ಭಿ, ಗೌಡಿಗಳನ್ನೂ ಗುಣಗಳಲ್ಲಿ ಮಾಧುರ್ಯ, ಪ್ರಸಾದ, ಓಜಸ್ಸುಗಳನ್ನೂ ಪ್ರಸ್ತಾವಿಸಿದ್ದರೂ ಅದಕ್ಕೆ ಪ್ರಾಮುಖ್ಯವನ್ನೇನೂ ಕೊಟ್ಟಂತೆ ಕಾಣುವುದಿಲ್ಲ.

ಕುಂತಕನು "ವಕ್ರೋಕ್ತಿಃಪ್ರಸಿದ್ಧಾಭಿಧಾನವ್ಯತಿರೇಕಿಣೀ ವಿಚಿತ್ರೈವಾಭಿಧಾ" – ವಕ್ರೋಕ್ತಿ ಎಂದರೆ ಪ್ರಸಿದ್ಧವಾದ ವಚನವ್ಯಾಪಾರಕ್ಕಿಂತ ಭಿನ್ನವಾಗಿ ವಿಚಿತ್ರವಾದ ಒಂದು ಅಭಿಧಾವ್ಯಾಪಾರ' ಎಂದು ವಿವರಿಸಿದ್ದಾನೆ. ಅದು ಲಕ್ಷಣಾ ವ್ಯಂಜನೆಗಳಿಗೆ ಅತಿರಿಕ್ತವಾದ ಒಂದು ಶಬ್ದಶಕ್ತಿ. ಅದು ಲೋಕರೀತಿಗಿಂತ ವಿಲಕ್ಷಣವಾಗಿ ಕವಿಕೌಶಲದಿಂದ ಸುಭಗವಾದದ್ದು. ಈ ಬಗೆಯ ಭಣಿತಿವಿಶೇಷದಿಂದ ಉದ್ಭವಿಸುವ ಅಲಂಕಾರವು ವಾಚ್ಯವೊ ಲಕ್ಷ್ಯವೊ ವ್ಯಂಗ್ಯವೊ ಆಗಿರಬಹುದು. ಆದ್ದರಿಂದಲೇ ಭಾಮಹನು ರಸಭಾವಾದಿಗಳನ್ನು ಸಹ ರಸವದಾದ್ಯಲಂಕಾರಗಳಲ್ಲಿ ಸೇರಿಸಿದನು. ಭಾಮಹನ ಮತದಂತೆ 'ಶಬ್ದ ಮತ್ತು ವಾಚ್ಯಾರ್ಥವು ಸೇರಿ ಕಾವ್ಯ, ವಕ್ರೋಕ್ತಿಯಿಂದ ಸಂಭವಿಸುವ ಅಲಂಕಾರಗಳು ಕಾವ್ಯದ ಉಪಸ್ಕಾರಕಗಳು. ಕಾವ್ಯದ ಸೌಂದರ್ಯಕ್ಕೆ ಅಲಂಕಾರಗಳೇ ನಿಮಿತ್ತಗಳು' ಎಂದು ಮಥಿತವಾಗುತ್ತದೆ. ಮನುಷ್ಯನೆಂದರೆ ದೇಹಾತ್ಮಗಳ ಸಮಷ್ಟಿರೂಪ. ಹಾಗೇ ಶಬ್ದಾರ್ಥಗಳ ಸಮಷ್ಟಿರೂಪವಾದ ಕಾವ್ಯದಲ್ಲಿ ಶಬ್ದವನ್ನು ದೇಹವೆಂದೂ ಅರ್ಥವನ್ನು ಆತ್ಮವೆಂದೂ ಊಹಿಸಿದರೆ ಭಾಮಹನ ಮತಕ್ಕೆ ವಿರೋಧವಾಗಲಾರದು.

ದಂಡಿಯು, ತನ್ನ ಕಾವ್ಯಾದರ್ಶದಲ್ಲಿ, ಕಾವ್ಯಕ್ಕೆ ಸಂಬಂಧಿಸಿದಂತೆ ಶರೀರ, ಪ್ರಾಣ– ಎಂಬೆರಡು ಪದಗಳನ್ನು ಉಪಯೋಗಿಸಿದ್ದಾನೆ. "ಶರೀರಂತಾವದಿಷ್ಟಾರ್ಥ ವ್ಯವಚ್ಛಿನ್ನಾಪದಾವಲೀ – (ಕಾವ್ಯ) ಶರೀರವು ರಮಣೀಯಾರ್ಥಪ್ರತಿಪಾದಕವಾದ ಪದಸಮೂಹ." "ಇತಿ ವೈದರ್ಭಮಾರ್ಗಸ್ಯ ಪ್ರಾಣಾ ದಶಗುಣಾಃ ಸ್ಮೃತಾಃ – (ಶ್ಲೇಷಾದಿ) ಹತ್ತು ಗುಣಗಳು ವೈದರ್ಭಮಾರ್ಗದ ಪ್ರಾಣಗಳು." ಪ್ರಾಣಗಳೆಂದರೆ ಸಾರಸರ್ವಸ್ವ; ಕಾವ್ಯದಲ್ಲಿ ಸೌಂದರ್ಯವನ್ನುಂಟುಮಾಡಿ ಅದು ಉಪಾದೇಯವಾಗುವಂತೆ ಮಾಡತಕ್ಕವು. ಕಾವ್ಯೇತರಗ್ರಂಥಗಳಿಂದ ಕಾವ್ಯವನ್ನು ಬೇರ್ಪಡಿಸತಕ್ಕುದು ಸೌಂದರ್ಯ. ಶಬ್ದಾರ್ಥಸ್ವರೂಪನಾದ ಕಾವ್ಯಪುರುಷನಿಗೆ ಕಾವ್ಯತ್ವವನ್ನೀಯುತಕ್ಕವು ಈ ಗುಣಗಳು; – ಇದು ದಂಡಿಯ ಆಶಯವೆಂದು ಊಹಿಸಬಹುದು.

ಗುಣಪ್ರಸ್ಥಾನವಾದಿಗಳಲ್ಲಿ ದಂಡಿ, ವಾಮನ –ಇವರು ಪ್ರಧಾನಾಚಾರ್ಯರು. ವಾಮನನು "ರೀತಿರಾತ್ಮಾಕಾವ್ಯಸ್ಯ" – ರೀತಿ ಕಾವ್ಯದ ಆತ್ಮ ಎಂದು ಸೂತ್ರಿಸಿದ್ದರೂ ಅವನ ಮತದಂತೆ ಗುಣವಿಶಿಷ್ಟ ಪದರಚನೆಯೇ ರೀತಿಯಾದ್ದರಿಂದ ಸೌಂದರ್ಯಾಧಾನವು ಗುಣಗಳಿಗೆ ಸೇರಿದ್ದೆಂದು ಸ್ಪಷ್ಟವಾಗುತ್ತದೆ. "ಕಾವ್ಯಶೋಭಾಯಾಃ ಕರ್ತಾರೋ ಧರ್ಮಾ ಗುಣಾಃ – ಕಾವ್ಯಶೋಭೆಯನ್ನುಂಟುಮಾಡುವ ಧರ್ಮಗಳೇ ಗುಣಗಳು" ಎಂದು ವಾಮನನು ಹೇಳಿಯೂ ಇದ್ದಾನೆ. ಗುಣವಿಶಿಷ್ಟ ಪದರಚನೆಯೆಂಬುದಕ್ಕೆ ರಚ್ಯಮಾನಪದನಿಷ್ಠಗುಣ ಎಂಬ ಅರ್ಥದಲ್ಲಿ ಪರ್ಯವಸಾನ. ಶಬ್ದಾ

ರ್ಥಗಳಿಗೆ ತಾದಾತ್ಮ್ಯವಿರುವುದರಿಂದ ವಾಮನನ ಅರ್ಥಗುಣಗಳೂ ಸಂಗೃಹೀತವಾಗುತ್ತವೆ. ಆದ್ದರಿಂದ ವಾಮನನ ಮತದಲ್ಲಿ ಶಬ್ದಾರ್ಥಗಳೆರಡೂ ಸೇರಿ ಕಾವ್ಯ. ಗುಣವು ಆತ್ಮ. ದಂಡಿಯು ಲಕ್ಷಣೋದಾಹರಣೆಗಳಿಂದ ವಿವರಿಸಿದ ಈ ಹತ್ತುಗುಣಗಳಲ್ಲಿ ಕೆಲವು ಶಬ್ದನಿಷ್ಠಗಳೆಂದೂ ಕೆಲವು ಅರ್ಥನಿಷ್ಠಗಳೆಂದೂ ಹೇಳಬಹುದು. ಆದರೆ ದಂಡಿಯು ಆಮಾತನ್ನು ಹೇಳಿಲ್ಲ. ವಾಮನನು ಶ್ಲೇಷಾದಿ ದಶಗುಣಗಳನ್ನೂ ಶಬ್ದಗುಣಗಳೆಂದೂ ಅರ್ಥಗುಣಗಳೆಂದೂ ವಿಭಜಿಸಿ ವಿಭಿನ್ನ ಲಕ್ಷಣಗಳನ್ನು ಕೊಟ್ಟಿದ್ದಾನೆ. ಉಭಯ ಪಕ್ಷದಲ್ಲಿಯೂ ಹೆಸರುಗಳು ಸಮಾನ. ಲಕ್ಷಣಗಳು ಭಿನ್ನ. ಹೀಗೆ ವಾಮನನ ಮತದಲ್ಲಿ 20 ಕಾವ್ಯಗುಣಗಳಾಗುತ್ತವೆ. ಮುಂದಿನ ಲಾಕ್ಷಣಿಕರು ಸೌಕ್ಷ್ಮ್ಯ, ಗಾಂಭೀರ್ಯ ಮುಂತಾದ ಇನ್ನೂ 14 ಗುಣಗಳನ್ನು ಸೇರಿಸಿ ಸಂಖ್ಯೆಯನ್ನು 34 ಕ್ಕೆ ಏರಿಸಿದ್ದಾರೆ.

ಗುಣವಿಶಿಷ್ಟ ಪದರಚನೆಯನ್ನು ದಂಡಿಯು ಮಾರ್ಗವೆಂದೂ ವಾಮನನು ರೀತಿಯೆಂದೂ ಕರೆದಿದ್ದಾರೆ. ಶ್ಲೇಷಾದಿ ಸಮಗ್ರಗುಣಗಳೂ ಇರುವುದು ವೈದರ್ಭ ಮಾರ್ಗ. ಇದಕ್ಕೆ ವಿಪರ್ಯಯವಾದುದು – ಎಂದರೆ ಓಜಸ್ಸು ಮತ್ತು ಕಾಂತಿ ಎಂಬ ಗುಣಗಳೇ ಪ್ರಧಾನವಾದಲ್ಲಿ ಗೌಡೀಯಮಾರ್ಗ. ಇವೆರಡೇ ಮುಖ್ಯ ಭೇದಗಳಾದ್ದರಿಂದ ದಂಡಿಯು ಉದಾಹರಣಸಹಿತವಾಗಿ ಇವನ್ನು ವಿವರಿಸಿದ್ದಾನೆ. ವಾಮನನು ಮಾಧುರ್ಯ ಸೌಕುಮಾರ್ಯೋಪೇತವಾದ ಪಾಂಚಾಲಿಯೆಂಬ ಮೂರನೆಯ ರೀತಿಯನ್ನು ಪ್ರತಿಪಾದಿಸಿದ್ದಾನೆ. ಹೀಗೆಯೇ ಲಾಟಿ, ಮಾಗಧಿ, ಆವಂತಿಕಾ ಎಂಬ ರೀತಿಗಳನ್ನು ಇತರ ಲಾಕ್ಷಣಿಕರು ಅಂಗೀಕರಿಸಿದ್ದಾರೆ. ಕೆಲವು ಗುಣಗಳ ಮಿಶ್ರಣ – ದೂರೀಕರಣಗಳಿಂದ ರೀತಿಭೇದಗಳನ್ನು ಹೆಚ್ಚಿಸುವುದು ಗಣಿತಶಾಸ್ತ್ರವಾಯಿತೇ ಹೊರತು ಕಾವ್ಯಸಮೀಕ್ಷೆಯಾಗಲಿಲ್ಲ.

ವೈದರ್ಭೀ, ಗೌಡೀ, ಪಾಂಚಾಲೀ ಈ ಮೂರು ಪ್ರಸಿದ್ಧರೀತಿಗಳು. ವಿದರ್ಭಾದಿದೇಶದಲ್ಲಿ ಕವಿಗಳಿಗೆ ಪ್ರಿಯವಾದ್ದರಿಂದ ಕ್ರಮವಾಗಿ ಈ ಹೆಸರು ಬಂದಿದೆ. ಸಕಲ ದೇಶಗಳಲ್ಲಿಯೂ ವಿವಿಧರೀತಿಗಳನ್ನು ಪ್ರೀತಿಸುವ ಕವಿಗಳಿರುತ್ತಾರಾದ್ದರಿಂದ ಈ ಹೆಸರು ಸೂಕ್ತವಲ್ಲವೆಂದೆಣಿಸಿ, ಮಮ್ಮಟಾದಿಗಳು ಉಪನಾಗರಿಕಾ, ಪರುಷಾ, ಕೋಮಲಾ ಎಂದು ಕ್ರಮವಾಗಿ ಆ ಮೂರು ರೀತಿಗಳಿಗೆ ನಾಮಕರಣಮಾಡಿದರು. ಕುಂತಕನು ಈ ಮಾತನ್ನು ಸ್ಪಷ್ಟವಾಗಿ ಹೇಳಿದ್ದಾನೆ. ರೀತಿ ಮೂಲತಃ ಕವಿಸ್ವಭಾವವನ್ನು ಅವಲಂಬಿಸುತ್ತದೆಯೆಂದು ಅವನ ಅಭಿಪ್ರಾಯ. ಕುಂತಕನ ಪ್ರಕಾರ ಸುಕುಮಾರ, ವಿಚಿತ್ರ, ಉಭಯಾತ್ಮಕ ಎಂದು ರೀತಿಗಳು ಮೂರು ಬಗೆ. (ರೀತಿಗೆ ವೃತ್ತಿ ಎಂಬ ಇನ್ನೊಂದು ಹೆಸರೂ ಉಂಟು.)

ಸಕಲಗುಣಗಳೂ ಇರುವುದರಿಂದ ವೈದರ್ಭಿಯು ಗ್ರಾಹ್ಯವೆಂದೂ ಅಲ್ಪಗುಣಗಳಿರುವುದರಿಂದ ಗೌಡಿ ಮತ್ತು ಪಾಂಚಾಲಿಗಳು ಅಗ್ರಾಹ್ಯಗಳೆಂದೂ ವಾಮನನು ಹೇಳುತ್ತಾನೆ. ವೈದರ್ಭಿಯು ರೇಶ್ಮೆಯ ಎಳೆಯಂತೆ. ಗೌಡಿಯು ಸೆಣಬಿನ ದಾರದಂತೆ. ವೈದರ್ಭಿಯು 'ವಿಪಂಚೀಸ್ವರಸೌಭಾಗ್ಯ' ಉಳ್ಳುದು. 'ವೈದರ್ಭೀ ಮಾರ್ಗ ಸಂದರ್ಭೇ ಕಾಲಿದಾಸಃ ಪ್ರಗಲ್ಭತೇ' ಇತ್ಯಾದಿ ಪ್ರಶಂಸಾವಚನಗಳುಂಟು. ವೈದರ್ಭೀರೀತಿಯ ಮುಖ್ಯಲಕ್ಷಣಗಳು ಇವು: ಸಮಾಸರಾಹಿತ್ಯ ಅಥವಾ ಅಲ್ಪ ಸಮಾಸ, ಮೃದುವರ್ಣ, ಒತ್ತಕ್ಷರಗಳ ವಿರಳತೆ.

> ಅಸಮಸ್ತಪದನ್ಯಾಸಂ
> ಪ್ರಸಾದಮಾಧುರ್ಯಗುಣಸಮಗ್ರಮುದಾರಂ
> ರಸಭಾವಭಾವಿತೋಕ್ತಿ
> ಪ್ರಸರಂ ವೈದರ್ಭರೀತಿಯೆನೆ ಪೆಸರ್ವಡೆಗುಂ
>
> — 782

ಗೌಡೀರೀತಿಯ ಮುಖ್ಯಲಕ್ಷಣಗಳು ಇವು: ದೀರ್ಘಸಮಾಸ, ಕರ್ಕಶ ಮತ್ತು ಮಹಾಪ್ರಾಣಗಳ ಸಂಯೋಜನೆ, ಒತ್ತಕ್ಷರಗಳ ಬಾಹುಳ್ಯ.

> ಅತಿದೀರ್ಘಸಮಾಸಾಂಚಿತ
> ಗತಿಶಬ್ದಾಡಂಬರಾನುವಿದ್ಧಂ ಕ್ರೋಧಾ
> ದ್ಭುತ ರೌದ್ರವೀರರಸಸಂ
> ಗತಮಂತದು ಗೌಡರೀತಿ ಪರುಷಪ್ರಾಯಂ
>
> — 861

ವಸ್ತುಸ್ಥಿತಿ ಏನೆಂದರೆ, ಕಾವ್ಯದಲ್ಲಿ ಕೋಮಲಬಂಧ, ಕಠೋರಬಂಧ, ಇವುಗಳಿಗೆ ಮಧ್ಯವರ್ತಿಯಾದ ಮಧ್ಯಮಬಂಧ – ಈ ಮೂರು ಬಗೆಯ ಪದರಚನೆ ಆವಶ್ಯಕ. ಪ್ರತಿಪಾದ್ಯ ವಿಷಯವು ಕೋಮಲವಾಗಿದ್ದಲ್ಲಿ – ಉದಾಹರಣೆಗೆ ಶೃಂಗಾರ, ಕರುಣ, ಶಾಂತರಸಗಳಲ್ಲಿ – ಕೋಮಲಬಂಧ ಶೋಭಿಸುತ್ತದೆ: ಕಠೋರವಾಗಿದ್ದಲ್ಲಿ–ವೀರ, ರೌದ್ರ, ಬೀಭತ್ಸಗಳಲ್ಲಿ–ಕಠೋರಬಂಧವು ಯುಕ್ತವಾಗಿರುತ್ತದೆ. ಹಾಸ್ಯ, ಭಯಾನಕ, ಅದ್ಭುತಗಳಲ್ಲಿ ಮಧ್ಯಮಬಂಧ ಹಿತವಾಗಿರುತ್ತದೆ. ಶ್ಲೇಷಾದಿ ಗುಣಗಳಲ್ಲಿ ಕೆಲವನ್ನು ಸ್ವೀಕರಿಸುವುದರಿಂದಲೂ ಕೆಲವನ್ನು ವಿಸರ್ಜಿಸುವುದರಿಂದಲೂ

ಈ ಮೂರು ಬಗೆಯ ಬಂಧಗಳು ಏರ್ಪಡುತ್ತವೆ. ವೈದರ್ಭಮಾರ್ಗದಲ್ಲಿ ಈ ಎಲ್ಲ ಬಂಧಗಳಿಗೂ ಅವಕಾಶ ಉಂಟು. ಏಕೆಂದರೆ, ಅದರಲ್ಲಿ ಸಕಲಗುಣಗಳಿಗೂ ಮಾನ್ಯತೆ ಇದೆ. ಗೌಡಮಾರ್ಗದಲ್ಲಿಯಾದರೊ ಪ್ರತಿಪಾದ್ಯವು ಮೃದುಳಾರ್ಥಗರ್ಭಿತವಾಗಿದ್ದರೂ – ಶೃಂಗಾರ ಕರುಣಗಳಲ್ಲಿಯೂ – ಕಠೋರಬಂಧವನ್ನೇ ಆಶ್ರಯಿಸಬೇಕಾಗುತ್ತದೆ. ಭವಭೂತಿಯ ಮಾಲತೀಮಾಧವ ಇದಕ್ಕೆ ಉದಾಹರಣೆ. ಇದು ಅನುಚಿತ. ಈ ಅನೌಚಿತ್ಯವು ವೈದರ್ಭರೀತಿಯಲ್ಲಿ ಸಂಭವಿಸುವುದಿಲ್ಲ. ಆದ್ದರಿಂದಲೇ ದಂಡಿ ವಾಮನಾದಿಗಳು ವೈದರ್ಭಮಾರ್ಗವನ್ನು ಕೊಂಡಾಡಿರುವುದು. ಗೌಡೀಯ ಮಾರ್ಗದವರ ವೈಪರೀತ್ಯವನ್ನು ಒಂದು ನಿದರ್ಶನದಿಂದ ದಂಡಿ ಸ್ಪಷ್ಟಪಡಿಸಿದ್ದಾನೆ:

ಇದು ಮಲಯಾನಿಲವರ್ಣನೆ; ಶೃಂಗಾರದ ಉದ್ದೀಪನ ವಿಭಾವ.

ಕೋಕಿಲಾಲಾಪವಾಚಾಲೋ ಮಾಮೇತಿ ಮಲಯಾನಿಲಃ
ಉಚ್ಚಲಚ್ಛೀಕರಾಚ್ಛಾಚ್ಛ ನಿರ್ಝರಾಂಭಃ ಕಣೋಕ್ಷಿತಃ
ಕಾವ್ಯಾ. I – 48

'ಕೋಗಿಲೆಗಳ ಇಂಚರನುಡಿಯೊಡನೆ
ಸುಳಿವನು ಮಲಯಾನಿಲನೆನ್ನ ಬಳಿಗೆ'

'ಉಚ್ಚಲಿಸುವ ಶೀಕರಯುತವಹ ಅ –
ತ್ಯಚ್ಛರ್ಝರಿಯ ಅಂಭಃಕಣಸಿಕ್ತನು'

ಈ ಶ್ಲೋಕದ ಪೂರ್ವಾರ್ಧ ಉತ್ತರಾರ್ಧಗಳಲ್ಲಿ ಬಂಧದ ಔಚಿತ್ಯ, ಅನೌಚಿತ್ಯಗಳು ಸ್ಪಷ್ಟವಾಗಿವೆ. ಆದ್ದರಿಂದಲೇ ಸಹೃದಯಶಿರೋಮಣಿಯಾದ ದಂಡಿ ಗೌಡೀಯಮಾರ್ಗವನ್ನು ತೆಗಳಿರುವುದು.

ಇತ್ಯನಾಲೋಚ್ಯ ವೈಷಮ್ಯಮರ್ಥಾಲಂಕಾರಡಂಬರೌ
ಅಪೇಕ್ಷಮಾಣಾ ವವೃಧೇ ಪೌರಸ್ತ್ಯಾ ಕಾವ್ಯಪದ್ಧತಿಃ
ಕಾವ್ಯಾ. I – 50

"ಈ ವೈಷಮ್ಯವನ್ನು ಪರಿಗಣಿಸದೆ ಬರಿಯ ಅಲಂಕಾರ ಶಬ್ದಾಡಂಬರಗಳನ್ನೇ ನೆಚ್ಚಿ, ಪೂರ್ವದೇಶೀಯರ ಕಾವ್ಯಪದ್ಧತಿ (ಗೌಡೀಯಮಾರ್ಗ) ಬೆಳೆಯಿತು.

ಅರ್ಥ, ರಸ, ಭಾವಗಳಿಗೆ ಅನುಗುಣವಾಗಿ ಔಚಿತ್ಯವನ್ನರಿತು ಪ್ರಯೋಗಿಸಿದಾಗ, ಗೌಡೀ ಪಾಂಚಾಲೀ ಮುಂತಾದ ರೀತಿಗಳೆಲ್ಲವೂ ಹೃದ್ಯವಾಗುತ್ತವೆ. ಅವುಗಳಲ್ಲಿ ಮಧುರವಾದ ಆಸ್ವಾದ ಉಂಟು. ಮಾಧುರ್ಯವು ಪರಸ್ಪರ ವಿಲಕ್ಷಣವಾದ್ದು.

> ಇಕ್ಷುಕ್ಷೀರ ಗುಡಾದೀನಾಂ ಮಾಧುರ್ಯಸ್ಯಾಂತರಂ ಮಹತ್
> ತಥಾಪಿ ನ ತದಾಖ್ಯಾತುಂ ಸರಸ್ವತ್ಯಾಪಿ ಶಕ್ಯತೇ
>
> ಕಾವ್ಯಾ. I – 102

'ಕಬ್ಬು, ಹಾಲು, ಬೆಲ್ಲ ಮೊದಲಾದ ವಸ್ತುಗಳ ಮಾಧುರ್ಯದಲ್ಲಿ ಮಹತ್ತರವಾದ ಭೇದವೇನೊ ಇದೆ. ಆದರೆ ಅದನ್ನು ತಿಳಿಸಿ ಹೇಳಲು ಸರಸ್ವತಿಗೂ ಶಕ್ಯವಲ್ಲ!'

ಭಾಮಹನ ಕಾಲದಲ್ಲಿಯೇ ವೈದರ್ಭ ಗೌಡೀಯಮಾರ್ಗಗಳ ಚರ್ಚೆ ಇತ್ತು. ಆದರೆ ಕಾವ್ಯದಲ್ಲಿ ಈ ವಿಭಾಗ ಅನಾವಶ್ಯಕವೆಂದೂ ಅಲಂಕಾರ, ಅರ್ಥಪುಷ್ಟಿ ಮೊದಲಾದ ಕಾವ್ಯಧರ್ಮಗಳಿದ್ದಲ್ಲಿ ಈ ಮಾರ್ಗಗಳೆರಡೂ ಸಮಾನಯೋಗ್ಯತೆಯುಳ್ಳವುಗಳಾಗುತ್ತವೆಯೆಂದೂ ಆತನು ಅಭಿಪ್ರಾಯಪಟ್ಟಿದ್ದಾನೆ. (ಭಾಮಹ ಕಾವ್ಯಾ, I – 31 – 35). ಅವನು ಹೇಳಿದ ಓಜಸ್ಸು, ಮಾಧುರ್ಯ, ಪ್ರಸಾದ– ಇವಕ್ಕೂ ರೀತಿಗೂ ಸಂಬಂಧವಿದೆಯೆ ಎಂಬುದೂ ಸ್ಪಷ್ಟವಾಗಿಲ್ಲ. ಅವನ್ನು 'ಗುಣ' ಎಂಬ ಶಬ್ದದಿಂದಲೂ ಕರೆದಿಲ್ಲ. ಹೆಚ್ಚುಸಮಾಸ ಪದಗಳಿಲ್ಲದೆ ಶ್ರಾವ್ಯವಾದ ಕಾವ್ಯವು ಮಧುರವೆಂದೂ ಸಾಮಾನ್ಯರಿಗೂ ಸುಲಭವಾಗಿ ಅರ್ಥವಾಗುವ ಕಾವ್ಯ ಪ್ರಸನ್ನ (ಪ್ರಸಾದವತ್) ವೆಂದೂ ಹೇಳಿದ್ದಾನೆ. ಸಮಾಸಭೂಯಿಷ್ಠತೆ ಓಜಸ್ಸಿನ ಲಕ್ಷಣವೆಂದಿದ್ದಾನೆ. ದಂಡಿ ವಾಮನರಂತೆ ಧ್ವನಿಪ್ರಸ್ಥಾನಕಾರರು ಗುಣರೀತಿಗಳಿಗೆ ಪ್ರಾಧಾನ್ಯ ಕೊಡದಿದ್ದರೂ ರಸಭಾವಾನುಗುಣವಾಗಿ ಅವುಗಳ ಆವಶ್ಯಕತೆಯನ್ನು ಒಪ್ಪಿದ್ದಾರೆ. ಮಮ್ಮಟಾದಿಗಳು ಮಾಧುರ್ಯ, ಓಜಸ್ಸು, ಪ್ರಸಾದ – ಎಂಬ ಮೂರುಗುಣಗಳನ್ನು ಮಾತ್ರ ಒಪ್ಪಿ, ಅವು ರಸಧರ್ಮಗಳೆಂದು ಹೇಳುತ್ತಾರೆ. ಜಗನ್ನಾಥನು ಮಾತ್ರ 'ಏಷಾಂ ರಸಧರ್ಮತ್ವೇ ಕಿಂ ಮಾನಂ ? – ಇವು ರಸಧರ್ಮವೆನ್ನಲು ಪ್ರಮಾಣವೇನು?' ಎಂದು ಪ್ರಶ್ನಿಸಿ, ಈ ಗುಣಗಳು ಶಬ್ದ, ಅರ್ಥ, ರಸ – ಈ ಮೂರರ ಧರ್ಮಗಳೂ ಆಗುತ್ತವೆಯೆಂದು ಸಿದ್ಧಾಂತಮಾಡಿದ್ದಾನೆ.

ಲೋಕದಲ್ಲಿ ಮನುಷ್ಯನಿಗೆ ಗೌರವೋತ್ಕರ್ಷವನ್ನು ಕೊಡತಕ್ಕವು ಸೌಂದರ್ಯ ವೈದುಷ್ಯಾದಿ ಗುಣಗಳು. ಹಾಗೆಯೇ ಶ್ಲೇಷಾದಿಗುಣಗಳು ಕಾವ್ಯದ ಉತ್ಕರ್ಷಕ್ಕೆ ನಿಮಿತ್ತಗಳೆಂದು ಗುಣಪ್ರಸ್ಥಾನವಾದಿಗಳ ಆಶಯ. ವಸ್ತ್ರಭೂಷಾದಿಗಳು ಮನುಷ್ಯನ ಶೋಭೆಯನ್ನು ಹೆಚ್ಚಿಸುತ್ತವೆಯೆಂಬುದು ದಿಟ. ಆದರೆ ವೈದುಷ್ಯಾದಿಗುಣಗಳಿಗಿಂತ ವಸ್ತ್ರಭೂಷಣಗಳ ಸ್ಥಾನ ಅಪಕೃಷ್ಟವಾದುದು.

1. ಕಾವ್ಯಶೋಭಾಯಾಃ ಕರ್ತಾರೋಧರ್ಮಾ ಗುಣಾಃ
2. ತದತಿಶಯಹೇತವಸ್ತ್ವಲಂಕಾರಾಃ
3. ಪೂರ್ವೇನಿತ್ಯಾಃ

(ವಾಮನ, ಕಾ. ಸೂ.)

1. ಕಾವ್ಯಕ್ಕೆ ಶೋಭೆಯನ್ನುಂಟುಮಾಡತಕ್ಕ ಧರ್ಮಗಳೇ ಗುಣಗಳು
2. ಶೋಭೆಯನ್ನು ಹೆಚ್ಚಿಸತಕ್ಕವು ಅಲಂಕಾರಗಳು
3. ಮೊದಲಿನವು (ಗುಣಗಳು) ನಿತ್ಯವಾಗಿ ಇರಲೇಬೇಕಾದವು.

*

ಇನ್ನು ಅಲಂಕಾರಗಳ ಕಡೆಗೆ ತಿರುಗೋಣ. ಅಲಂಕಾರಶಬ್ದಕ್ಕೆ ಭೂಷಣ, ಒಡವೆ ಎಂಬ ಅರ್ಥ ಪ್ರಸಿದ್ಧವಾದದ್ದು. 'ಅಲಂ' ಶಬ್ದಕ್ಕೆ ಅನೇಕಾರ್ಥಗಳುಂಟು. 'ಅಲಂ ಭೂಷಣ ಪರ್ಯಾಪ್ತಿ ಶಕ್ತಿವಾರಣವಾಚಕಂ' ಎಂದು ಅಮರಕೋಶ ಹೇಳುತ್ತದೆ* 'ಅಲಂ'ಶಬ್ದ ಅಲಧಾತುವಿನಿಂದ ಹುಟ್ಟಿದೆ. ಅಲ=ಭೂಷಣಪರ್ಯಾಪ್ತಿ ವಾರಣೇಷು ಎಂಬ ಪಾಣಿನೀಯಧಾತುಪಾಠ. ಇದರಲ್ಲಿ ಪರ್ಯಾಪ್ತಿಯೆಂದರೆ ಪರಿಪೂರ್ಣತೆ. ಈ ಅರ್ಥವನ್ನು ಗ್ರಹಿಸುವುದಾದರೆ, ಯಾವುದು ಪರಿಪೂರ್ಣತೆಯನ್ನುಂಟುಮಾಡುವುದೊ ಅದು ಅಲಂಕಾರ ಎಂಬ ಅರ್ಥ ಹೊರಡುತ್ತದೆ. ಇದೇ ಈ ಶಬ್ದದ ಮೂಲಾರ್ಥವಿರಬಹುದು. ಎಲ್ಲಿ ಸೌಂದರ್ಯದ ಕೊರತೆಯಿದೆಯೊ ಅಲ್ಲಿ ಅಲಂಕಾರದ ಅಪೇಕ್ಷೆ. ಸಹಜಸುಂದರವಾದ ವಸ್ತುವಿಗೆ ಅದರ ಅಪೇಕ್ಷೆ ಇಲ್ಲ. ರಸನಿರ್ಭರವಾದ ಕವಿತೆಯಲ್ಲಿ ಅಲಂಕಾರವೂ ಇದ್ದರೆ ಅದರ ಶೋಭೆ ಕೊಂಚ ಹೆಚ್ಚ

* (ಹಾಗೆಯೇ ಅರಂ = ಸಜ್ಜು, ಸಿದ್ಧತೆ ಎಂಬುದನ್ನು ಪರಿಶೀಲಿಸಬಹುದು — ಸಂ.)

ಬಹುದು. ಅಲಂಕಾರವಿಲ್ಲದಿದ್ದರೆ ನಷ್ಟವಿಲ್ಲ. ಶಾಕುಂತಲ ನಾಟಕದ ಪ್ರಸಿದ್ಧವಾದ ಈ ಶ್ಲೋಕವನ್ನು ನೋಡಬಹುದು :

ಪಾತುಂ ನ ಪ್ರಥಮಂ ವ್ಯವಸ್ಯತಿ ಜಲಂ ಯುಷ್ಮಾಸ್ವಪೀತೇಷು ಯಾ
ನಾದತ್ತೇ ಪ್ರಿಯಮಂಡನಾಪಿ ಭವತಾಂ ಸ್ನೇಹೇನ ಯಾ ಪಲ್ಲವಂ
ಆದ್ಯೇ ವಃ ಕುಸುಮಪ್ರಸೂತಿಸಮಯೇ ಯಸ್ಯಾ ಭವತ್ಯುತ್ಸವಃ
ಸೇಯಂ ಯಾತಿ ಶಕುಂತಲಾ ಪತಿಗೃಹಂ ಸರ್ವೈರನುಜ್ಞಾಯತಾಂ

ಕಾಣುವಂತೆ ಇಲ್ಲಿ ಯಾವ ಅಲಂಕಾರವೂ ಇಲ್ಲ. ಇದು ಉತ್ತಮ ಕವಿತೆಯಲ್ಲವೆಂದು ಯಾರೂ ಹೇಳಲಾರರು.

ಭರತನು ಉಪಮಾ, ರೂಪಕ, ದೀಪಕ ಎಂಬ ಮೂರು ಅರ್ಥಾಲಂಕಾರಗಳನ್ನೂ ಯಮಕವೆಂಬ ಶಬ್ದಾಲಂಕಾರವನ್ನೂ ತಿಳಿಸಿದ್ದಾನಷ್ಟೆ.ಭಾಮಹನ ಕಾಲದಲ್ಲಿ ಶಬ್ದಾಲಂಕಾರವು ಮಾತ್ರವೇ ನಿಜವಾದ ಕಾವ್ಯಾಲಂಕಾರವೆಂದೂ ರೂಪಕಾದಿ ಅರ್ಥಾಲಂಕಾರಗಳು ಬಾಹ್ಯಗಳೆಂದೂ ಹೇಳತಕ್ಕವರಿದ್ದರು. ಅವರ ಮತದಂತೆ ಕಾವ್ಯವು ಶಬ್ದರೂಪವಾದ್ದರಿಂದ ಹಾಗೆ ಹೇಳುತ್ತಿದ್ದರೆಂದು ತೋರುತ್ತದೆ. ಶಬ್ದಾಲಂಕಾರವನ್ನು ಸೌಶಬ್ದ್ಯವೆನ್ನುತ್ತಿದ್ದರು. ಭಾಮಹನು "ಶಬ್ದಾಭಿಧೇಯಾಲಂಕಾರಭೇದಾದಿಷ್ಟಂ ದ್ವಯಂ ತು ನಃ" ಎಂದು ಹೇಳಿ ಎರಡನ್ನೂ ಅಂಗೀಕರಿಸಿದ್ದಾನೆ. ಶಬ್ದಚಿತ್ರ, ಅರ್ಥಚಿತ್ರಗಳನ್ನು ಅಧಮಕಾವ್ಯದಲ್ಲಿ ಸೇರಿಸಿದ ಮಮ್ಮಟಾದಿಗಳು ಇವೆರಡು ಅಲಂಕಾರಗಳಿಗೂ ಸಮಾನಸ್ಥಾನವನ್ನು ಕಲ್ಪಿಸಿದಂತಾಗಿದೆ. ಸೂಕ್ಷ್ಮಮತಿಯಾದ ಜಗನ್ನಾಥನಿಗೆ ಇದು ಸರಿಯೆನಿಸಲಿಲ್ಲ. ಅವನು ಶಬ್ದಾಲಂಕಾರವನ್ನು ಅರ್ಥಾಲಂಕಾರಕ್ಕಿಂತ ಕೆಳಮಟ್ಟದಲ್ಲಿರಿಸಿದನು. ಧ್ವನಿಕಾವ್ಯವನ್ನು ಉತ್ತಮೋತ್ತಮವೆಂದೂ ಗುಣೀಭೂತವ್ಯಂಗ್ಯವನ್ನು ಉತ್ತಮವೆಂದೂ ಅರ್ಥಚಿತ್ರ ಪ್ರಧಾನವಾದ್ದನ್ನು ಮಧ್ಯಮವೆಂದೂ ಬರಿಯ ಶಬ್ದಚಿತ್ರವನ್ನು ಅಧಮವೆಂದೂ ಕರೆದಿದ್ದಾನೆ.

ಭಾಮಹನು ನ ಕಾಂತಮಪಿ ನಿರ್ಭೂಷಂ ವಿಭಾತಿ ವನಿತಾಮುಖಂ – ತರುಣಿಯ ಮುಖವು ಕಾಂತ (ಸುಂದರ) ವಾಗಿದ್ದರೂ ಭೂಷಣವಿಲ್ಲದಿದ್ದರೆ ಶೋಭಿಸುವುದಿಲ್ಲ ಎಂದು ನುಡಿದು, ಕಾವ್ಯದಲ್ಲಿ ಅಲಂಕಾರದ ಪ್ರಾಶಸ್ತ್ಯವನ್ನು ತಿಳಿಸಿದ್ದಾನೆ. ವನಿತಾಮುಖದ ದೃಷ್ಟಾಂತದಿಂದ ಅಲಂಕಾರವಿಲ್ಲದೆ ಕಾವ್ಯ ಕಾಂತವಾಗಿರಬಹುದೆಂದೂ ಅಲಂಕಾರದಿಂದ ಶೋಭಾತಿಶಯ ಉಂಟಾಗುವುದೆಂದೂ ಅವನು ಒಪ್ಪಿದಂತಾಯಿತು. ಮೂಲಭೂತವಾದ ಈ ಕಾಂತತೆ (ಸೌಂದರ್ಯ) ಯನ್ನು ಕಾವ್ಯಕ್ಕೆ ನೀಡತಕ್ಕುದು ಯಾವುದು ?

ಈ ವಿಷಯದಲ್ಲಿ ಭಾಮಹನ ಆಶಯ ಸ್ಪಷ್ಟವಾಗಿಲ್ಲ. ಜಯದೇವನು ತನ್ನ ಚಂದ್ರಾಲೋಕದಲ್ಲಿ ಅಲಂಕಾರದ ಪ್ರಾಶಸ್ತ್ಯವನ್ನು ಅಂಗೀಕರಿಸಿ, ಅಲಂಕಾರವಿಲ್ಲದ್ದು ಕಾವ್ಯವೇ ಅಲ್ಲವೆಂದು ಸಹ ಹೇಳುತ್ತಾನೆ :

ಅಂಗೀಕರೋತಿ ಯಃ ಕಾವ್ಯಂ ಶಬ್ದಾರ್ಥಾವನಲಂಕೃತೀ
ಅಸೌ ನ ಮನ್ಯತೇ ಕಸ್ಮಾದನುಷ್ಣಮನಲಂ ಕೃತೀ

ಚಂದ್ರಾ. I – 8

"ಅಲಂಕಾರವಿಲ್ಲದ ಶಬ್ದಾರ್ಥಗಳನ್ನು ಕಾವ್ಯವೆಂದು ಯಾವನು ಒಪ್ಪುವನೋ ಆ ಪಂಡಿತನು ಬಿಸಿಯಿಲ್ಲದ ಬೆಂಕಿಯುಂಟೆಂದು ಏಕೆ ಒಪ್ಪುವುದಿಲ್ಲ?"

ಭಾಮಹಾದಿಗಳು ಅಲಂಕಾರಗಳ ಸಂಖ್ಯೆಯನ್ನು ಬೆಳಸುತ್ತ ಹೋದರು. ಜಯದೇವನು ಆ ಸಂಖ್ಯೆಯನ್ನು ನೂರಕ್ಕೆ ಮುಟ್ಟಿಸಿದನು. ಅಪ್ಪಯ್ಯ ದೀಕ್ಷಿತರು ರಸವದಾದ್ಯಲಂಕಾರಗಳನ್ನೂ ಸೇರಿಸಿ ಅದನ್ನು ಕುವಲಯಾನಂದದಲ್ಲಿ ನೂರಿಪ್ಪತ್ತು ನಾಲ್ಕು ಸಂಖ್ಯೆಗೆ ಏರಿಸಿದ್ದಾರೆ.

ಉಕ್ತಿವೈಚಿತ್ರ್ಯವೇ ಅಲಂಕಾರಕ್ಕೆ ಮೂಲ. ವೈಚಿತ್ರ್ಯವು ಕವಿಕಲ್ಪನೆಯಿಂದ ಸಂಭವಿಸುತ್ತದೆ. ಕವಿಕಲ್ಪನಾಪ್ರಕಾರಗಳಿಗೆ ಮಿತಿ ಇಲ್ಲ. ಆದ್ದರಿಂದ ಅಲಂಕಾರಗಳು ಇಷ್ಟೇ ಎಂದು ನಿರ್ಣಯಿಸುವುದು ಶಕ್ಯವಲ್ಲ. ಅಂತೆಯೇ ದಂಡಿ 'ಕಸ್ತಾನ್ ಕಾರ್ತ್ಸ್ನ್ಯೇನ ವಕ್ಷ್ಯತಿ – ಯಾವನು ತಾನೇ ಅವನ್ನು (ಅಲಂಕಾರಗಳನ್ನು) ಸಮಗ್ರವಾಗಿ ನಿರೂಪಿಸಬಲ್ಲನು?' ಎಂದು ಉದ್ಗರಿಸಿದ್ದಾನೆ.

ಶಬ್ದಾರ್ಥಗಳಿಗೆ ಸೌಂದರ್ಯವನ್ನುಂಟುಮಾಡತಕ್ಕವು ಗುಣಾಲಂಕಾರಗಳೆರಡೇ ಎಂದು ಭಾಮಹಾದಿಗಳು ಭಾವಿಸಿದರು. ಅವುಗಳಲ್ಲಿ ಗುಣವು ಪ್ರಧಾನವೆಂದು ದಂಡಿವಾಮನರ ಅಭಿಪ್ರಾಯ. ವಾಮನನು ರೀತಿಯನ್ನು ಆತ್ಮವೆಂದಿದ್ದರೂ ರೀತಿವ್ಯಂಗ್ಯವಾದ ಗುಣದಲ್ಲಿಯೇ ಆ ನುಡಿಗೆ ವಿಶ್ರಾಂತಿ. ಇವರು ಅಲಂಕಾರಗಳಿಗೆ ದ್ವಿತೀಯ ಸ್ಥಾನವನ್ನು ಕಲ್ಪಿಸಿದರು. ಭಾಮಹ, ಉದ್ಭಟ, ರುದ್ರಟ, ಜಯದೇವಾದಿಗಳು ಅಲಂಕಾರವು ಪ್ರಧಾ ವೆಂದು ಬಗೆದರು. ಅವರು ರಸಭಾವಗಳ ರಮಣೀಯತೆಯನ್ನು ಅರಿಯದವರಲ್ಲ. ಭರತನ ನಾಟ್ಯಶಾಸ್ತ್ರ ಅವರ ಕಣ್ಣೆದುರಿಗೆ ಇತ್ತು. ವ್ಯಂಗ್ಯವು ಚಮತ್ಕಾರಿ ಎಂಬುದೂ ಅವರಿಗೆ ತಿಳಿದಿತ್ತು. ಆದರೆ ಅವೆಲ್ಲವನ್ನೂ ಅಲಂಕಾರಗಳ ಗುಂಪಿನಲ್ಲಿ ಸೇರಿಸಿಬಿಟ್ಟರು. ದಂಡಿ ಮಹಾಕಾವ್ಯದ ಸ್ವರೂಪವನ್ನು ತಿಳಿಸುತ್ತ ಅದು 'ರಸಭಾವನಿರಂತರ'ವಾಗಿರಬೇಕೆಂದು ಹೇಳುತ್ತಾನೆ.(ಕಾವ್ಯ. I–18)

ಮಧುರಂ ರಸವದ್ವಾಚಿ ವಸ್ತುನ್ಯಪಿ ರಸಸ್ಥಿತಿಃ
ಯೇನ ಮಾದ್ಯಂತಿ ಧೀಮಂತೊ ಮಧುನೇವ ಮಧುವ್ರತಾಃ

ಕಾವ್ಯಾ. I – 51

"ರಸಪ್ರತಿಪಾದಕವಾದ ವಾಕ್ಯ ಮಾಧುರ್ಯಉಳ್ಳದ್ದು. ಶಬ್ದಾರ್ಥಗಳೆರಡರಲ್ಲಿಯೂ ರಸವಿರುತ್ತದೆ. (ಶಬ್ದಾರ್ಥಗಳಿಂದ ವ್ಯಂಗ್ಯವಾಗುತ್ತದೆ) ಈ ರಸದಿಂದ ಸಹೃದಯರು, ಮಧುವಿನಿಂದ ದುಂಬಿಗಳು ಮದಿಸುವಂತೆ, (ಆನಂದ ತುಂದಿಲರಾಗಿ) ಮೈಮರೆಯುತ್ತಾರೆ"

ಕಾಮಂ ಸರ್ವೋಽಪ್ಯಲಂಕಾರೋ ರಸಮರ್ಥೇ ನಿಷಿಂಚತಿ

ಕಾವ್ಯಾ. I – 6

"ಎಲ್ಲ ಅಲಂಕಾರವೂ ಅರ್ಥದಲ್ಲಿ ರಸವನ್ನು ಸುರಿಸುತ್ತದೆ" ಅಲಂಕಾರಗಳು ರಸಪೋಷಕಗಳೆಂದು ಅಭಿಪ್ರಾಯ. ಹೀಗೆಯೇ 'ಸಾನುಪ್ರಾಸಾ ರಸಾವಹಾ' 'ವಕ್ಷ್ಯಾಮಿ ರಸಸಂಶ್ರಯಂ' ಮುಂತಾದ ನುಡಿಗಳಿಂದ ದಂಡಿ ಕಾವ್ಯದಲ್ಲಿ ರಸ ಸರ್ವೋತ್ಕೃಷ್ಟವೆಂದು ಗಣಿಸಿದ್ದಾನೆ. ವಾಮನನು 'ದೀಪ್ತರಸತ್ವಂ ಕಾಂತಿಃ' ಎಂದು ಸೂತ್ರಿಸಿ ಕಾಂತಿ ರಸಾಭಿವ್ಯಂಜಕವೆಂದು ಒಪ್ಪಿದ್ದಾನೆ. ರುದ್ರಟನು ಶಾಂತ, ಪ್ರೇಯಾನ್ ಎಂಬ ಎರಡು ರಸಗಳನ್ನು ಸೇರಿಸಿ ಒಟ್ಟು ಹತ್ತು ರಸಗಳನ್ನು ನಿರೂಪಿಸಿದ್ದಾನೆ. ಪ್ರೇಯೋರಸಕ್ಕೆ ಸ್ನೇಹವು ಸ್ಥಾಯಿಭಾವ. ಕಾವ್ಯವು ರಸನಿರ್ಭರವಾಗುವಂತೆ ಕವಿಯು ಪ್ರಯತ್ನಿಸಬೇಕೆಂದೂ ನೀರಸವಾದ ಕಾವ್ಯವು ಶಾಸ್ತ್ರದಂತೆ ಉದ್ವೇಗವನ್ನುಂಟುಮಾಡುವುದೆಂದೂ ಹೇಳಿದ್ದಾನೆ :

ತಸ್ಮಾತ್ ತತ್‌ಕರ್ತವ್ಯಂ ಯತ್ನೇನ ಮಹೀಯಸಾ ರಸ್ಯೈರ್ಯುಕ್ತಂ
ಉದ್ವೇಜನ ಮೇತೇಷಾಂ ಶಾಸ್ತ್ರವದೇವಾನ್ಯಥಾ ಹಿ ಸ್ಯಾತ್

ಕಾವ್ಯಾ. 12 – 2

ರುದ್ರಟನ ಮತದಂತೆ ಕಾವ್ಯದಲ್ಲಿ ರಸದ ಸ್ಥಾನ ಯಾವುದೆಂಬುದು ಸ್ಪಷ್ಟವಾಗಿಲ್ಲ. ಮೇಲಿನ ಶ್ಲೋಕಕ್ಕೆ ನಮಿಸಾಧು ವ್ಯಾಖ್ಯಾನ ಬರೆಯುತ್ತ "ಕಾವ್ಯಕ್ಕೆ ಶಬ್ದಾರ್ಥಗಳು ಶರೀರ. ವಕ್ರೋಕ್ತಿ ವಾಸ್ತವಾದಿ ಮೂಲಕವಾದ ಅಲಂಕಾರಗಳು ಕಟಕಕುಂಡಲಗಳಂತೆ ಕಲ್ಪಿತಾಲಂಕಾರಗಳು. ರಸಗಳಾದರೋ ಸೌಂದರ್ಯಾದಿಗಳಂತೆ ಸಹಜಗುಣಗಳು" ಎಂದಿದ್ದಾನೆ. ಪರ್ಯಾಯೋಕ್ತಿ, ಅಪ್ರಸ್ತುತ ಪ್ರಶಂಸಾ, ಸಮಾಸೋಕ್ತಿ, ಆಕ್ಷೇಪ, ವ್ಯಾಜಸ್ತುತಿ, ಉಪಮೇಯೋಪಮಾ – ಮುಂತಾದ ಅಲಂಕಾರಗಳಲ್ಲಿ ಪ್ರತೀಯಮಾನವಾದ – ಎಂದರೆ ವ್ಯಂಜನಾಗಮ್ಯವಾದ ಅರ್ಥ ಚಮತ್ಕಾರಿಯೆಂಬುದನ್ನು ದಂಡಿಪ್ರಭೃತಿಗಳು ಅರಿತೇ ಇದ್ದರು. ಹಾಗೆಯೇ ವ್ಯಂಗ್ಯವಾದ ರಸಾದಿಯು ರಮಣೀಯವಾದ್ದೆಂದು ಅವರು ತಿಳಿದಿದ್ದರು. ಅವರ ಮತದಲ್ಲಿ ಅವೆಲ್ಲವೂ ವಾಚ್ಯಾರ್ಥಕ್ಕೆ ಅಲಂಕಾರಗಳು; ಶೋಭಾಜನಕಗಳು. ಧ್ವನಿ

ಪ್ರಸ್ಥಾನವಾದಿಗಳು ಸಹ ರಸಾದಿಗಳು ಅಪ್ರಧಾನವಾಗಿ ಪರಾಂಗವಾದಲ್ಲಿ ರಸವದಾದ್ಯಲಂಕಾರಗಳಾಗುತ್ತವೆಯೆಂದು ಅಂಗೀಕರಿಸಿದ್ದಾರೆ :

ಪ್ರಧಾನೇಽನ್ಯತ್ರ ವಾಕ್ಯಾರ್ಥೇ ಯತ್ರಾಂಗಂ ತು ರಸಾದಯಃ
ಕಾವ್ಯೇ ತಸ್ಮಿನ್ನಲಂಕಾರೋ ರಸಾದಿರಿತಿ ಮೇ ಮತಿಃ

ಧ್ವನ್ಯಾ. II – 5

"ಕಾವ್ಯದಲ್ಲಿ ಬೇರೊಂದು ವಾಕ್ಯಾರ್ಥವು ಪ್ರಧಾನವಾಗಿದ್ದಾಗ ರಸಾದಿಗಳು ಅದಕ್ಕೆ ಅಂಗವಾಗಿರಬಹುದು. ಆಗ ರಸಾದಿಗಳು ಅಲಂಕಾರವೆನಿಸಿಕೊಳ್ಳುತ್ತವೆಯೆಂದು ನನ್ನ ಅಭಿಪ್ರಾಯ."

ಭಾಮಹಾದಿಗಳು ಕಾವ್ಯದಲ್ಲಿ ಧ್ವನಿ ಪ್ರಧಾನವಾದ್ದೆಂದು ತಿಳಿಯಲಿಲ್ಲ. ಅವರ ಅಭಿಪ್ರಾಯದಲ್ಲಿ ವಾಚ್ಯಾರ್ಥವೇ ಪ್ರಧಾನವಾದ್ದರಿಂದ ರಸಧ್ವನಿಯೂ ಅವರಿಗೆ ಅಲಂಕಾರವಾಗಿಯೇ ತೋರಿತು.

### ವಕ್ರೋಕ್ತಿಪ್ರಸ್ಥಾನ

ಸುಮಾರು ಅಭಿನವಗುಪ್ತನ ಸಮಕಾಲಿಕನೊ ಸ್ವಲ್ಪಕಾಲ ಹಿಂದಿನವನೊ ಆದ ಕುಂತಕನು ವಕ್ರೋಕ್ತಿ ಜೀವಿತಕಾರನೆಂದು ಪ್ರಸಿದ್ಧನಾಗಿದ್ದಾನೆ.*

ಕುಂತಕನ ಮತದಂತೆ ವಕ್ರೋಕ್ತಿಯೇ ಕಾವ್ಯಜೀವಿತ. ವಕ್ರೋಕ್ತಿಯೆಂದರೆ ಆಪಾತವಾಗಿ ತೋರುವ ಕುಟಿಲೋಕ್ತಿಯೆಂದು ಅರ್ಥವಲ್ಲ. ಅದು ಸಹೃದಯೈಕವೇದ್ಯವಾದ ಒಂದಾನೊಂದು ಶೈಲಿ; ನಿರೂಪಣಪ್ರಕಾರ. "ವಕ್ರೋಕ್ತಿಃ ಪ್ರಸಿದ್ಧಾಭಿಧಾನವ್ಯತಿರೇಕಿಣೀ ವಿಚಿತ್ರೈವಾಭಿಧಾ. ಕೀದೃಶೀ? ವೈದಗ್ಧ್ಯಭಂಗೀಭಣಿತಿಃ" "ವಕ್ರೋಕ್ತಿಯೆಂದರೆ ಪ್ರಸಿದ್ಧವಾದ ಉಕ್ತಿಪ್ರಕಾರಕ್ಕಿಂತ ಭಿನ್ನವಾದ ಒಂದು ವಿಲಕ್ಷಣ ಅಭಿಧಾಪ್ರಕಾರ. ಹಾಗೆಂದರೆ, ಕವಿಕೌಶಲದಿಂದ ಸುಭಗವಾದ ವಚನಪ್ರಕಾರ." ಲೋಕವ್ಯವಹಾರದಲ್ಲಿಯೂ ಶಾಸ್ತ್ರದಲ್ಲಿಯೂ ಬಳಸುವ ಶೈಲಿ

---

* ಇವನ ಗ್ರಂಥದಲ್ಲಿ 165 ಕಾರಿಕೆಗಳಿವೆ. ಅವುಗಳಿಗೆ ತಾನೇ ವ್ಯಾಖ್ಯಾನವನ್ನು ಬರೆದಿದ್ದಾನೆ. ಈತನ ಗ್ರಂಥಕ್ಕೆ ಕಾವ್ಯಾಲಂಕಾರ ಎಂಬ ಹೆಸರಿದ್ದಂತೆ ಕಾಣುತ್ತದೆ. ಕುಂತಕನು ಸ್ವತಂತ್ರನಾದ ಕಾವ್ಯಮೀಮಾಂಸಕ; ಸಹೃದಯ ಶಿರೋಮಣಿ. ಹೃದಯಂಗಮವಾದ ಶೈಲಿಯಲ್ಲಿ ಕಾವ್ಯದ ಸೊಗಸನ್ನು ಬಿಡಿಸಿ ಹೇಳುವ ಸಾಮರ್ಥ್ಯಶಾಲಿ. ಪಂಡಿತರಾಜ ಜಗನ್ನಾಥನಂತೆ ನೂತನವಿಚಾರ ಸರಣಿಯನ್ನು ಮುಂದಿಡುವುದರಲ್ಲಿ ಗಟ್ಟಿಗ. ಕುಂತಕನ ವಕ್ರೋಕ್ತಿಸಿದ್ಧಾಂತಕ್ಕೆ ಮುಂದೆ ಬೆಂಬಲಿಗರು ದೊರೆಯದೆಹೋದರೂ ಆ ಸಿದ್ಧಾಂತ ಒಂದು ಪ್ರಸ್ಥಾನವಾಗಿ ಉಳಿದುಕೊಳ್ಳುವ ಅರ್ಹತೆಯನ್ನು ಪಡೆದಿದೆ.

ಗಿಂತ ಭಿನ್ನವೂ ಸಹೃದಯೈಕವೇದ್ಯವೂ ಆದ ಒಂದು ಶೈಲಿಯೇ ವಕ್ರೋಕ್ತಿ ಎನ್ನಬಹುದು.

ವಕ್ರೋಕ್ತಿಶಬ್ದದ ಈ ವ್ಯಾಪಕಾರ್ಥವು ಕುಂತಕನಿಗಿಂತ ಪೂರ್ವದಲ್ಲಿಯೇ ಪ್ರಸಿದ್ಧವಾಗಿತ್ತು. ಸುಬಂಧು, ಬಾಣಭಟ್ಟ, ಕವಿರಾಜ – ಈ ಮೂವರು 'ವಕ್ರೋಕ್ತಿ ಮಾರ್ಗನಿಪುಣ' ರೆಂದು ರಾಘವಪಾಂಡವೀಯ ಕಾವ್ಯದಲ್ಲಿ ಹೇಳಿದೆ. ಭಾಮಹನು ಶಬ್ದವಕ್ರತೆ, ಅರ್ಥವಕ್ರತೆ ಎಂಬ ಎರಡು ಭೇದಗಳನ್ನು ಹೇಳಿದ್ದನು (ಭಾ. ಕಾವ್ಯಾ I – 6, V – 66). ವಕ್ರೋಕ್ತಿ ಇಲ್ಲದೆ ಯಾವ ಅಲಂಕಾರವೂ ಇಲ್ಲವೆಂದು ಸಹ ತಿಳಿಸಿದ್ದನು. ದಂಡಿ ಸಮಗ್ರವಾಙ್ಮಯವನ್ನು ಸ್ವಭಾವೋಕ್ತಿ ವಕ್ರೋಕ್ತಿಯೆಂದು ವಿಭಜಿಸಿದ್ದನು. ಮುಂದೆ ಮಮ್ಮಟಾದಿಗಳು ಒಂದು ಅಲಂಕಾರ ವಿಶೇಷಕ್ಕೆ ಮಾತ್ರ ವಕ್ರೋಕ್ತಿಯೆಂದು ಹೆಸರಿಟ್ಟು ಆ ಶಬ್ದದ ವ್ಯಾಪಕಾರ್ಥವನ್ನು ಸಂಕುಚಿತಗೊಳಿಸಿದರು. ಲೋಕವ್ಯವಹಾರದಲ್ಲಿರುವ ಸ್ವಭಾವೋಕ್ತಿಗೂ ವಕ್ರೋಕ್ತಿಗೂ ಇರುವ ಭೇದವನ್ನು ಒಂದೆರಡು ಉದಾಹರಣೆಗಳಿಂದ ಸ್ಪಷ್ಟಗೊಳಿಸಬಹುದು.

1. ಸ್ವಭಾವೋಕ್ತಿ : ರಾಮರಾವಣರ ಯುದ್ಧವು ಅತಿಭೀಕರವಾಗಿತ್ತು. ಅಂತಹ ಯುದ್ಧ ಹಿಂದೆ ನಡೆದಿರಲಿಲ್ಲ.

ವಕ್ರೋಕ್ತಿ : ರಾಮರಾವಣರ ಯುದ್ಧ ರಾಮರಾವಣರ ಯುದ್ಧದಂತಿತ್ತು.

2. ಸ್ವಭಾವೋಕ್ತಿ : ದಾನಕರ್ತನಲ್ಲಿ ಸೌಮ್ಯತಾಗುಣ ದುರ್ಲಭ.

ವಕ್ರೋಕ್ತಿ : ದಾನಕರ್ತನ ಸೌಮ್ಯತಾಗುಣವೆಂದರೆ ಪೂರ್ಣಚಂದ್ರನ ನಿಷ್ಕಳಂಕತೆ.

ಕಾವ್ಯಶೋಭಾಕರವಾದ ಗುಣಾಲಂಕಾರಗಳೂ ರಸಭಾವಾದಿ ಸಕಲಧ್ವನಿಗಳೂ ವಕ್ರೋಕ್ತಿಗರ್ಭದಲ್ಲಿ ಸೇರುತ್ತವೆಯೆಂಬುದು ಕುಂತಕನ ಮತ. ವ್ಯಂಜನಾವ್ಯಾಪಾರವನ್ನೇನೂ ಅವನು ನಿರಾಕರಿಸುವುದಿಲ್ಲ. ವ್ಯಂಜನಾಸ್ಥಳದಲ್ಲಿಯೂ ಅಭಿಧಾವ್ಯಾಪಾರದಿಂದ ತೋರುವ ಒಂದು ವಾಚ್ಯಾರ್ಥವಿದ್ದೇ ಇರುವುದಷ್ಟೆ. ಅಲ್ಲಿ ವ್ಯಂಗ್ಯಾರ್ಥವನ್ನು ಬೋಧಿಸುವ ಉದ್ದೇಶದಿಂದ ನಿಪುಣನಾದ ಕವಿ ಲೋಕಾತಿಗವಾದ ಇನ್ನೊಂದು ಮಾರ್ಗವನ್ನು ಆಶ್ರಯಿಸುತ್ತಾನೆ. ಅವನು ಆಶ್ರಯಿಸುವುದು ಅಭಿಧಾವ್ಯಾಪಾರವನ್ನೇ. ಒಂದು ಉದಾಹರಣೆಯನ್ನು ಪರಿಶೀಲಿಸಬಹುದು :

ಶಿವನಿಗೋಸ್ಕರ ಪಾರ್ವತಿಯನ್ನು ಯಾಚಿಸಲು ಸಪ್ತರ್ಷಿಗಳು ಬಂದಿದ್ದಾರೆ. ಅಂಗಿರಸನು ಹಿಮಾಲಯನಿಗೆ ಶಿವನ ಮಹಿಮೆಯನ್ನು ತಿಳಿಸಿ, ಪಾರ್ವತಿಯನ್ನು ಶಿವನಿಗೆ ಮದುವೆಮಾಡಿಕೊಡುವಂತೆ ಕೇಳುತ್ತಾನೆ.

ಏವಂವಾದಿನಿ ದೇವರ್ಷೌ ಪಾರ್ಶ್ವೇ ಪಿತುರಧೋಮುಖೀ
ಲೀಲಾಕಮಲಪತ್ರಾಣಿ ಗಣಯಾಮಾಸ ಪಾರ್ವತೀ

ಕುಮಾ. ಸಂ. 6 – 84

"ದೇವರ್ಷಿಯು ಹೀಗೆ ಹೇಳುತ್ತಿರಲು, ತಂದೆಯ ಬಳಿ ತಲೆಬಾಗಿ ನಿಂತಿದ್ದ ಪಾರ್ವತಿ (ತನ್ನ ಕೈಯಲ್ಲಿದ್ದ) ಲೀಲಾಕಮಲದ ದಳಗಳನ್ನು ಎಣಿಸುತ್ತಿದ್ದಳು." ಇಲ್ಲಿ ಲಜ್ಜೆ, ಅದನ್ನು ಮುಚ್ಚುವ ಯತ್ನ – ಎರಡೂ ಅಭಿವ್ಯಕ್ತವಾಗುತ್ತವೆ. ಈ ಮಾತನ್ನು ಕವಿ ನೇರವಾಗಿ ಹೇಳದೆ ಒಂದಾನೊಂದು ವಕ್ರಮಾರ್ಗವನ್ನು ಆಶ್ರಯಿಸಿದ್ದಾನೆ. ಅದು ವಿಚಿತ್ರವಾದ ಅಭಿಧಾವ್ಯಾಪಾರ, ಅದೇ ವಕ್ರೋಕ್ತಿ. ಅದೇ ಕಾವ್ಯಜೀವಿತ.

ಕುಂತಕನು ವಕ್ರತೆಯನ್ನು ಮುಖ್ಯವಾಗಿ ಆರು ಬಗೆಯಲ್ಲಿ ವಿಂಗಡಿಸಿದ್ದಾನೆ: 1. ವರ್ಣವಿನ್ಯಾಸವಕ್ರತಾ 2. ಪದಪೂರ್ವಾರ್ಧವಕ್ರತಾ 3. ಪದಪರಾರ್ಧವಕ್ರತಾ 4. ವಾಕ್ಯವಕ್ರತಾ 5. ಪ್ರಕರಣವಕ್ರತಾ 6. ಪ್ರಬಂಧವಕ್ರತಾ. ಇವುಗಳಲ್ಲಿ ಅವಾಂತರ ವಿಭಾಗಗಳು ಹಲವಾರು.

1. ವರ್ಣವಿನ್ಯಾಸವಕ್ರತಾ: ಪ್ರಾಚೀನರು ಹೇಳುವ ಅನುಪ್ರಾಸ ಯಮಕಗಳೂ ಉಪನಾಗರಿಕಾ, ಪರುಷ ಮತ್ತು ಕೋಮಲವೃತ್ತಿಗಳೂ ಈ ವಕ್ರತೆಯಲ್ಲಿ ಸೇರುತ್ತವೆ. ಉದಾ :

ಈ ಧರೆಯ ಪೆಂಡಿರುಧ್ವ್ ಪ
ಯೋಧರೆಯ ಮನೋಜರಾಗರಸಪೂರಿತ ಬಿಂ
ಬಾಧರೆಯ ಕಂಬುಕಮ್ರ ಶಿ
ರೋಧರೆಯ ಬೆಡಂಗನಾರುಮೋನೆಯ್ದುವರೇ

ಪಂಪನ ಆ. ಪು. 4 – 46

2. ಪದಪೂರ್ವಾರ್ಧವಕ್ರತಾ: ಪದಪೂರ್ವಾರ್ಧವೆಂದರೆ ಪ್ರಾತಿಪದಿಕ ಮತ್ತು ಧಾತು. ಇವನ್ನು ಸಮಯೋಚಿತವಾಗಿ ಆರಿಸಿಕೊಳ್ಳುವುದು ಕವಿಯ ಜಾಣ್ಮೆ. ಪ್ರಸಿದ್ಧವಾದ ರೂಢಶಬ್ದವೂ ಸಂದರ್ಭವಿಶೇಷದಲ್ಲಿ ಚಮತ್ಕಾರಿಯಾಗುವುದು. ಲಕ್ಷ್ಮಣನು ಶಕ್ತ್ಯಾಯುಧದಿಂದ ಮೂರ್ಛಿತನಾದಾಗ ಕ್ರುದ್ಧನಾದ ಶ್ರೀರಾಮನು ವಾನರ ಸೇನೆಯನ್ನು ನೋಡುತ್ತ ಹೇಳುವನು:

ಅದ್ಯ ರಾಮಸ್ಯ ರಾಮತ್ವಂ ಪಶ್ಯಂತು ಮಮ ಸಂಯುಗೇ

ರಾಮಾ. ಯುದ್ಧ. 1 – 55

"ವಾನರರೆ, ರಾಮನಲ್ಲಿರುವ ರಾಮತ್ವವೆಂದರೇನೆಂಬುದನ್ನು ಈಗ ನೋಡಿರಿ!" ಹೇಳತಕ್ಕವನು ರಾಮನೆಂಬುದೂ ಅವನಲ್ಲಿ ರಾಮತ್ವವಿದೆಯೆಂಬುದೂ ವಾನರರಿಗೆ ತಿಳಿದೇ ಇದೆ. 'ನನ್ನಲ್ಲಿರುವ ಪರಾಕ್ರಮವನ್ನು ನೋಡಿರಿ' ಎಂದು ಹೇಳಿದರೆ ಮಾತು ಸಪ್ಪೆಯಾಗುತ್ತದೆ.

3. ಪದಪರಾರ್ಧವಕ್ರತಾ : ಪದಪರಾರ್ಧವು ಪ್ರತ್ಯಯ. ಪುರುಷವಚನಗಳ ವ್ಯತ್ಯಾಸದಿಂದ ಈ ವಕ್ರತೆಯುಂಟಾಗಿ ಚಮತ್ಕಾರವಾಗುತ್ತದೆ. ದುಷ್ಯಂತನು ಮರೆಯಲ್ಲಿ ನಿಂತು ಶಕುಂತಲೆಯನ್ನು ನೋಡುತ್ತಿದ್ದಾನೆ. ಕ್ಷತ್ರಿಯನಾದ ತಾನು ಅವಳನ್ನು ಪರಿಸಬಹುದೆ ಎಂದು ಚಿಂತಿಸುತ್ತಿದ್ದಾನೆ. ಆಗ ಒಂದು ದುಂಬಿ ಶಕುಂತಲೆಯ ಮುಖದ ಬಳಿ ಹಾರಾಡುತ್ತದೆ. ಅದನ್ನು ನೋಡಿ ದುಷ್ಯಂತನು ಹೇಳುತ್ತಾನೆ :

ವಯಂ ತತ್ತ್ವಾನ್ವೇಷಾತ್ ಮಧುಕರ ಹತಾಸ್ತ್ವಂ ಖಲು ಕೃತೀ

"ಎಲೆ ದುಂಬಿ, ತತ್ತ್ವವನ್ನರಸುತ್ತ ನಾವು ಕೆಟ್ಟೆವು. ನಿಶ್ಚಯವಾಗಿ ನೀನೇ ಧನ್ಯ!"

ದುಷ್ಯಂತನು ತನ್ನನ್ನು 'ನಾವು' ಎಂದು ಬಹುವಚನದಿಂದ ಕರೆದುಕೊಂಡಿದ್ದಾನೆ. ಇದರಿಂದ ಆತ್ಮನಿಂದೆಯೂ ಒಂದು ಬಗೆಯ ವಿರಕ್ತಿಯೂ ಧ್ವನಿತವಾಗುತ್ತದೆ.

4. ವಾಕ್ಯವಕ್ರತಾ : ಪೂರ್ಣವಾದ ಅರ್ಥ ಗೋಚರಿಸುವುದು ವಾಕ್ಯದಿಂದ. ವಾಕ್ಯವಕ್ರತೆ ಎಂದರೆ ಅರ್ಥವಕ್ರತೆ. ಅರ್ಥವು ಸಹಜ, ಆಹಾರ್ಯ ಎಂದು ಎರಡು ವಿಧ. ನಿಸರ್ಗಸುಂದರವಾದ ವಸ್ತುಸ್ವಭಾವ ಸಹಜವೆನಿಸುತ್ತದೆ. ಸಹಜಸೌಂದರ್ಯವನ್ನು ಪ್ರತಿಭಾಶಾಲಿಯಾದ ಕವಿ ಮನೋಹರವಾಗಿ ಚಿತ್ರಿಸಬಲ್ಲನು. ಅವನು ಚೇತನಾ ಚೇತನಗಳ ಗುಣಸ್ವಭಾವಗಳನ್ನು ಸೂಕ್ಷ್ಮವಾಗಿ ಅವಲೋಕಿಸಿರುತ್ತಾನೆ. ಸ್ತ್ರೀಪುರುಷರ ವಯೋಧರ್ಮ, ಋತು, ಸೂರ್ಯಚಂದ್ರರ ಉದಯ, ಮೃಗಪಕ್ಷಿಗಳ ಸ್ವಭಾವಾದಿಗಳು ಸಹಜವರ್ಣನೆಯ ವಿಷಯಗಳು. ಈ ನಿಸರ್ಗವರ್ಣನೆಗೆ ಕವಿ ಕೌಶಲ ಬೇಕು. ಸುಕುಮಾರಮತಿಗಳಾದ ಕವಿಗಳಿಗೆ ಇದು ವಿಷಯವೆಂದು ಕುಂತಕನು ಹೇಳುತ್ತಾನೆ. ರಮಣೀಯವಾದ ನಿಸರ್ಗವರ್ಣನೆ ಸಹೃದಯನಿಗೆ ಆಹ್ಲಾದಕಾರಿ.

ಪುಟ 90ರಲ್ಲಿ ಉದಾಹರಿಸಿರುವ ಪದ್ಯದಲ್ಲಿ ಚಂದ್ರೋದಯವು ನಿಸರ್ಗವರ್ಣನೆಯ ವಿಷಯ. 'ಪ್ರೋಪ್ಲೂಯಮಾನಂ ಸರಸೀವ ಹಂಸಂ' ಎಂಬ ಉತ್ಪ್ರೇಕ್ಷಾದ್ಯವಾದ ಉಪಮಾಲಂಕಾರದಿಂದ ಇದು ಸುಂದರವಾಗಿದೆ !

ಕುಂತಕನ ಅಭಿಪ್ರಾಯದಲ್ಲಿ ವರ್ಣನೀಯವಾದ ಕಾವ್ಯವಸ್ತು ಮುಖ್ಯವಾಗಿ ಎರಡು ವಿಧ : ಚೇತನಾಚೇತನಗಳ ಸ್ವಭಾವ ಮತ್ತು ಚೇತನಗಳ ಭಾವ. ಸ್ವಭಾವ

ವನ್ನು ನಿಸರ್ಗ ಅಥವಾ ಪ್ರಕೃತಿ ಎನ್ನಬಹುದು. ಪ್ರಕೃತಿವರ್ಣನೆ ಭಾವಕ್ಕೆ ಪೋಷಕವಾಗಿರಬೇಕು. ಭಾವವರ್ಣನೆ ರಸಪರ್ಯವಸಾಯಿಯಾಗಬೇಕು. ಆದ್ದರಿಂದ ಪ್ರಕೃತಿವರ್ಣನೆ ರಸಾಂಗವೇ ಹೊರತು, ವಿವಿಕ್ತವೂ ಸ್ವತಂತ್ರವೂ ಅಲ್ಲ. ನೀತಿ ಪ್ರಧಾನವಾದ ಮೂರನೆಯ ಕಾವ್ಯವಸ್ತುವೂ ಇರಲು ಸಾಧ್ಯವೆಂದು ಕುಂತಕನು ಹೇಳುತ್ತಾನೆ. ಆ ಪಕ್ಷದಲ್ಲಿ ಸ್ವಭಾವ ಭಾವಗಳೆರಡೂ ನೀತ್ಯಂಗವಾಗಿ ಪರಿಣಮಿಸುತ್ತವೆ. ವಾಕ್ಯವಕ್ರತೆಯು ಸಮಗ್ರಕಾವ್ಯದ ಸಾರಸರ್ವಸ್ವ. ಹಾರದಲ್ಲಿರುವ ಬಿಡಿ ಮುತ್ತು ಇದ್ದಂತೆ ವಾಕ್ಯ. ಒಂದೊಂದು ಮುತ್ತು ಶ್ರೇಷ್ಠವಾದರೆ ಸಮಗ್ರಹಾರವೂ ಶ್ರೇಷ್ಠವಾಗುತ್ತದೆ.

5. ಪ್ರಕರಣವಕ್ರತಾ: ಮಹಾಪ್ರಬಂಧದ ಏಕದೇಶವು ಪ್ರಕರಣವೆನಿಸಿಕೊಳ್ಳುತ್ತದೆ. ರಾಮಾಯಣದಲ್ಲಿ ಶ್ರೀರಾಮಜನನ, ಅಹಲ್ಯೋದ್ಧಾರ, ಸೀತಾವಿವಾಹಾದಿಗಳು ಪ್ರಕರಣಗಳು. ಚಿಕ್ಕ ಕಥಾಪ್ರಬಂಧದಲ್ಲಿ ಚಂದ್ರೋದಯ, ಜಲಕೇಳಿ ಮುಂತಾದವು ಪ್ರಕರಣಗಳು. ಪ್ರಬಂಧದಲ್ಲಿ ಬರುವ ಪಾತ್ರಗಳ ಸೌಂದರ್ಯವನ್ನು ಪ್ರಕರಣ ವಕ್ರತೆಯಿಂದ ಉತ್ತಮ ಮಟ್ಟಕ್ಕೇರಿಸಬಹುದು. ಕವಿ ಸಮರ್ಥನಾದರೆ ಒಂದು ಸಂಭಾಷಣಾಪ್ರಸಂಗವೇ ಸಾಕಾಗುತ್ತದೆ. ರಘುವಂಶದಲ್ಲಿ ಬರುವ ರಘು ಕೌತ್ಸರ ಸಂಭಾಷಣೆ ಇದಕ್ಕೆ ಉದಾಹರಣೆ. ರಘುವಿನ ಔದಾರ್ಯವೀರ್ಯಾದಿಗುಣಗಳೂ ಕೌತ್ಸನ ಗುರುಭಕ್ತಿ ವಿನಯ ವೈರಾಗ್ಯಗಳೂ ಅವರಿಬ್ಬರ ಸಂಭಾಷಣೆಯಿಂದಲೇ ಮನೋಹರವಾಗಿ ಅಭಿವ್ಯಕ್ತವಾಗುತ್ತವೆ. ಕವಿಯು ತನ್ನ ಉದ್ದೇಶವನ್ನು ಹೀಗೆ ಬಹುಮುಖದಲ್ಲಿ ಸಾಧಿಸಿಕೊಳ್ಳುತ್ತಾನೆ. ಶಿಲ್ಪಿಯು ಶಿಲಾಭಂಜಿಕೆಯನ್ನು ನಿರ್ಮಿಸುವಾಗ ಅದರ ಅಂಗಪ್ರತ್ಯಂಗಗಳನ್ನು ಎಷ್ಟು ಎಚ್ಚರಿಕೆಯಿಂದ ಕೊರೆಯುವನೊ ಹಾಗೆ ನಿಪುಣನಾದ ಕವಿ ತನ್ನ ಕಾವ್ಯದ ಯಾವ ಸಂನಿವೇಶವನ್ನೂ ಉಪೇಕ್ಷಿಸದೆ ಏಕತಾನವಾದ ಮನಸ್ಸಿನಿಂದ ಮನೋಹರವಾಗಿ ಚಿತ್ರಿಸುತ್ತಾನೆ. ಪಾತ್ರಪರಿಪೋಷಣೆಗಾಗಿ ವಾತ್ಸಲ್ಯಾದಿಭಾವಗಳನ್ನು ಉಜ್ವಲಗೊಳಿಸುತ್ತಾನೆ.

ಆಕರವಾದ ರಾಮಾಯಣಾದಿ ಕಥಾಪ್ರಸಂಗದಲ್ಲಿ ಕೊಂಚ ಪರಿವರ್ತನೆ ಮಾಡಿ ಕಾವ್ಯದಲ್ಲಿ ಆ ಕಥಾವಸ್ತುವನ್ನು ಬಳಸಿಕೊಳ್ಳುವನು. ಆಕರದಲ್ಲಿ ತನಗೆ ತೋರಿದ ಅನೌಚಿತ್ಯವೊಂದನ್ನು ಪರಿಹರಿಸಿಕೊಳ್ಳುವುದಕ್ಕಾಗಿಯೋ ನೂತನವಾದ ಸೌಂದರ್ಯವೊಂದನ್ನು ತರುವುದಕ್ಕಾಗಿಯೋ ಈ ಪರಿವರ್ತನೆ ಆವಶ್ಯಕವಾಗಬಹುದು. ಭಾಸನ ಪ್ರತಿಮಾನಾಟಕ, ಊರುಭಂಗಗಳಲ್ಲಿಯೂ ಕಾಳಿದಾಸನ ಶಾಕುಂತಲ ನಾಟಕದಲ್ಲಿಯೂ ಭವಭೂತಿಯ ಮಹಾವೀರಚರಿತೆಯಲ್ಲಿಯೂ ಇಂತಹ ಪರಿವರ್ತನೆಗಳನ್ನು ನೋಡಬಹುದು. ಇದು ಉತ್ಪಾದ್ಯವಾದ ಪ್ರಕರಣವಕ್ರತೆ. ಇದರಿಂದ ಕಾವ್ಯದಲ್ಲಿ ಒಂದು ರಮಣೀಯತೆಯುಂಟಾಗುತ್ತದೆ. ವಿದ್ಯಮಾನಪರಿವರ್ತನೆ, ಅವಿದ್ಯಮಾನ

ಕಲ್ಪನೆ, ಅಪ್ರಧಾನ ಪ್ರಸಂಗದ ರಂಜನೆ – ಈ ಮೂರು ಮುಖ್ಯವಾಗಿ ಪ್ರಕರಣ ವಕ್ರತೆಯ ಪ್ರಭೇದಗಳು.

6. ಪ್ರಬಂಧವಕ್ರತಾ : ಯಾವುದಾದರೊಂದು ಕಥಾಪ್ರಸಂಗದ ಸಮಗ್ರ ವೃತ್ತಾಂತನಿರೂಪಣೆಯನ್ನು ಪ್ರಬಂಧವೆಂದು ಕರೆಯಬಹುದು. ಮಹಾಪ್ರಬಂಧದ ಏಕದೇಶವೇ ಕವಿಗೆ ಉದ್ದಿಷ್ಟವಾದರೆ ಅದೂ ಪ್ರಬಂಧವೆನಿಸುತ್ತದೆ. ಶಿಶುಪಾಲ ವಧ, ಕಿರಾತಾರ್ಜುನೀಯಗಳಲ್ಲಿರುವ ಕಥಾವೃತ್ತಾಂತ ಮಹಾಭಾರತದ ಏಕದೇಶ. ಅಲ್ಲಿ ವರ್ಣನೆಗೆ ಉದ್ದಿಷ್ಟವಾದದ್ದು ಪರಿಮಿತವಾದ ಒಂದು ಪ್ರಕರಣಮಾತ್ರ. ಆದ್ದರಿಂದ ಅದನ್ನೂ ಪ್ರಬಂಧವೆನ್ನಬಹುದು. ಪ್ರಬಂಧವು 'ಕವೀಂದ್ರರ ಕೀರ್ತಿ ಕಂದ' ಎನ್ನುತ್ತಾನೆ ಕುಂತಕ. ಭರತನು –

ನ ತಜ್ಜ್ಞಾನಂ ನ ತಚ್ಛಿಲ್ಪಂ ನ ಸಾ ವಿದ್ಯಾ ನ ಸಾ ಕಲಾ
ನ ಸ ಯೋಗೋ ನ ತತ್ಕರ್ಮ ಯನ್ನಾಟ್ಯೇಽಸ್ಮಿನ್ನ ದೃಶ್ಯತೇ
ನಾಟ್ಯಶಾಸ್ತ್ರ I – 116

ಎಂಬುದಾಗಿ ನಾಟ್ಯದಲ್ಲಿಲ್ಲದ ಶಿಲ್ಪ ವಿದ್ಯಾಕಲಾದಿಗಳೇ ಇಲ್ಲವೆಂದು ಹೇಳಿದ ಪ್ರಶಂಸೆ ಪ್ರಬಂಧಕ್ಕೂ ಅನ್ವಯಿಸುತ್ತದೆ. ಮಹಾಕಾವ್ಯ, ನಾಟಕ, ಕಥೆ – ಇವೆಲ್ಲವೂ ಪ್ರಬಂಧದಲ್ಲಿಯೇ ಸೇರುತ್ತವೆ. ವಾಮನನು 'ಕ್ರಮಸಿದ್ಧಿಸ್ತಯೋಃ ಸ್ರಗುತ್ತಂಸ ವತ್' ಎಂದು ಸೂತ್ರಿಸಿ, ಕವಿಯು ಮುಕ್ತಕಗಳನ್ನು ರಚಿಸುವ ಸಾಮರ್ಥ್ಯವನ್ನು ಪಡೆದ ಮೇಲೆ ಪ್ರಬಂಧವನ್ನು ರಚಿಸುವ ಸಾಮರ್ಥ್ಯವನ್ನು ಪಡೆಯುತ್ತಾನೆ ಎಂದು ಹೇಳಿದ್ದಾನೆ. ಹೂವಾಡಿಗನು ಮಾಲೆಯನ್ನು ಕಟ್ಟುವ ಕಲೆಯಲ್ಲಿ ನಿಪುಣನಾದ ಮೇಲೆ, ಉತ್ತಂಸವನ್ನು (ಮಾಲೆಯಿಂದ ರಚಿತವಾದ ಪುಷ್ಪಾಭರಣ) ನಿರ್ಮಿಸಲು ಸಮರ್ಥನಾಗುತ್ತಾನೆ. ಅಭಿನವಗುಪ್ತನು ರಸಪರಿಪಾಕದ ಪೂರ್ಣತೆ ಪ್ರಬಂಧದಲ್ಲಿ ಮಾತ್ರ ಲಭಿಸುವುದೆಂದು ಅಭಿನವಭಾರತೀವ್ಯಾಖ್ಯಾನದಲ್ಲಿ ಬರೆದಿದ್ದಾನೆ. ಮುಕ್ತಕ ದಲ್ಲಿ ಒಂದು ಮನಃಸ್ಥಿತಿಯ ವರ್ಣನೆ ಮಾತ್ರ ಸಾಧ್ಯ. ವಿಶಾಲ ಜೀವನದರ್ಶನ ಅಶಕ್ಯ. ಜೀವನವಾದರೊ ಮನುಷ್ಯನ ಹಲವಾರು ಏರಿಳಿತ, ಸುಖದುಃಖ, ಆಸೆ ನಿರಾಸೆ ಕಾಮಕ್ರೋಧಾದಿ ವಿವಿಧ ದ್ವಂದ್ವಗಳ ಆಕರ. ಸಂಭವಿಸುವ ವಿವಿಧ ಘಟನೆ ಗಳ ಪೌರ್ವಾಪರ್ಯದಿಂದ ನಾನಾವ್ಯಕ್ತಿಗಳ ಸ್ನೇಹ ದ್ವೇಷ ಸಂಬಂಧಗಳಿಂದ ಪಾತ್ರ ಗಳ ಮಾನಸ ವಿಶ್ಲೇಷಣೆ ಪ್ರಬಂಧದಲ್ಲಿ ಸಾಧ್ಯ. ಅದನ್ನು ನಿರೂಪಿಸುವುದೇ ಕವಿ ಕರ್ಮಕ್ಕೆ ವಿಷಯ.

ಇತಿವೃತ್ತವನ್ನು ಯಥಾವತ್ತಾಗಿ ತಿಳಿಸುವುದು ಮಾತ್ರವೇ ಕಾವ್ಯಧರ್ಮವಲ್ಲ. ಅದು ಚರಿತ್ರೆಯ* ಕೆಲಸ. ಇತಿವೃತ್ತದ ನಿರೂಪಣೆಯನ್ನು ಸುಂದರ ಮಾಡುವುದೇ ಕವಿಯ ಉದ್ದೇಶ. ಕಥಾವಸ್ತು ಒಂದು ಶಿಲೆಯಿದ್ದಂತೆ. ತನ್ನ ನೈಪುಣಿಯಿಂದ ಶಿಲ್ಪಿ ಕರಚರಣಾದ್ಯಂಗಗಳನ್ನು ಮೂಡಿಸಿ ವಿಶಿಷ್ಟಭಾವವನ್ನು ಅಭಿವ್ಯಕ್ತಗೊಳಿಸುತ್ತಾನೆ. ಹಾಗೆಯೇ ಕವಿ ಕಥಾವಸ್ತುವನ್ನು ತನ್ನ ಕೌಶಲದಿಂದ ಕಾವ್ಯವಾಗಿ ಪರಿವರ್ತಿಸುತ್ತಾನೆ. ಈ ಪರಿವರ್ತನೆಯೇ ಪ್ರಬಂಧವಕ್ರತೆ. ಈ ವಕ್ರತೆ ಕಥಾಸಂವಿಧಾನವನ್ನು ಅವಲಂಬಿಸಿರುತ್ತದೆ. ಇದಕ್ಕಾಗಿ ಕವಿ ಬೇರೆ ಬೇರೆ ಮಾರ್ಗಗಳನ್ನನುಸರಿಸುತ್ತಾನೆ :

1. ಮೂಲರಸಪರಿವರ್ತನ : ಕಾವ್ಯದಲ್ಲಿ ಪ್ರತಿಪಾದ್ಯವಾದ ರಸವು ಆಕರ ಗ್ರಂಥದ ಪ್ರಧಾನ ರಸಕ್ಕಿಂತ ಭಿನ್ನವಾಗಬಹುದು. ಕವಿ ಆರಿಸಿಕೊಂಡ ಪ್ರಕರಣಕ್ಕೆ ಅದು ಉಚಿತವಾಗುತ್ತದೆ. ಮಹಾಭಾರತದಲ್ಲಿ ಶಾಂತರಸವು ಪ್ರಧಾನವೆಂದರೂ ವೇಣೀಸಂಹಾರದಲ್ಲಿ ವೀರರಸವೇ ಪ್ರಧಾನ. ಅದು ನಾಯಕನಾದ ಭೀಮನಿಗೆ ಅನುಗುಣವಾದದ್ದು. ಗದಾಯುದ್ಧದಲ್ಲಿ ರೌದ್ರ; ಉತ್ತರ ರಾಮಚರಿತದಲ್ಲಿ ಕರುಣ ಹೀಗೆಯೇ ರಸಪರಿವರ್ತನೆಯನ್ನು ಕಾಣಬಹುದು.

2. ಸಮಾಪನ ವಕ್ರತಾ : ನಾಯಕನ ಪರಮೋತ್ಕರ್ಷವನ್ನು ವರ್ಣಿಸುವ ಒಂದು ಘಟನೆಯಲ್ಲಿಯೇ ಕಥೆಯನ್ನು ಸಮಾಪ್ತಿಗೊಳಿಸುವುದು ಕಾವ್ಯಕ್ಕೆ ಒಂದು ಸೌಂದರ್ಯವನ್ನು ನೀಡುತ್ತದೆ. ಇದರ ಉದ್ದೇಶ ಕಥಾವಸ್ತುವಿನಲ್ಲಿ ಉತ್ತರತ್ರ ಸಂಭವಿಸುವ ವಿರಸತೆಯನ್ನು ಪರಿಹರಿಸುವುದು. ಕಿರಾತಾರ್ಜುನೀಯದಲ್ಲಿ ಪಾರ್ಥನು ಶಿವನನ್ನು ಮೆಚ್ಚಿಸಿ ದಿವ್ಯಾಸ್ತ್ರಗಳನ್ನು ಪಡೆದನೆಂಬಲ್ಲಿಗೇ ಭಾರವಿಯು ಕಾವ್ಯವನ್ನು ಸಮಾಪ್ತಿಗೊಳಿಸಿ, ಪಾರ್ಥನ ಅನುಪಮ ವಿಕ್ರಮವನ್ನು ಪ್ರಕಾಶಿಸಿದ್ದಾನೆ. ಕಿರಾತಾರ್ಜುನೀಯದಲ್ಲಿ ವೀರರಸ ಪ್ರಧಾನ ಭಾರತದ ಕಥೆಯನ್ನು ಮುಂದುವರಿಸಿದ್ದರೆ ಕೌರವ ನಿಧನದಿಂದಲೂ ಧರ್ಮರಾಜನ ಶೋಕದಿಂದಲೂ ವೀರರಸ ಕುಂಠಿತವಾಗಿ ವೈರಸ್ಯ ಉಂಟಾಗುತ್ತಿತ್ತು. ಇದು ಸಮಾಪನ ವಕ್ರತೆ.

3 ಕಥಾಸಮಾಪ್ತಿಯು ನೀರಸವಾಗುವ ಸಂದರ್ಭವಿದ್ದಾಗ ಮಧ್ಯದಲ್ಲಿ ಕುತೂಹಲಜನಕವಾದ ಒಂದು ಪ್ರಕರಣವನ್ನು ವಿಸ್ತರಿಸಿ ಉತ್ಕೃಷ್ಟವಾಗಿ ವರ್ಣಿಸುವುದು ಇನ್ನೊಂದು ಬಗೆಯ ಕವಿಕೌಶಲ. ಮಾಘನ ಶಿಶುಪಾಲವಧದಲ್ಲಿ ಧರ್ಮರಾಜನ ರಾಜಸೂಯಯಾಗ ಸಮಾಪ್ತಿಯಲ್ಲಿ ಬರತಕ್ಕದು. ಅದು ನೀರಸವಾದೀತೆಂದು

* ಅರಿಸ್ಟಾಟಲ್ ಕೂಡ ಚರಿತ್ರೆಗೂ ಕಾವ್ಯಕ್ಕೂ ಇರುವ ವ್ಯತ್ಯಾಸವನ್ನು ತಿಳಿಸುತ್ತಾನೆ, ಗ್ರೀಕರಲ್ಲಿ ತೂಕಿದಿದೇಸ್ ಅಂಥ ಚರಿತ್ರಕಾರರಿದ್ದರು. ನಮ್ಮಲ್ಲಿ ಚರಿತ್ರೆಯ ಬರವಣಿಗೆ ಕಡಮೆ — ಸಂ.

ಕವಿ ಶಿಶುಪಾಲನ ವಧಪ್ರಕರಣವನ್ನೇ ವಿಸ್ತರಿಸಿ ಬಣ್ಣಿಸಿದ್ದಾನೆ. ಇದು ರಸಸಿದ್ಧನಾದ ಕವಿಯು ನೈಪುಣ್ಯ.

4. ನಾಯಕನ ಕೀರ್ತಿಯನ್ನು ಉಜ್ವಲಗೊಳಿಸಲೂ ಆನುಷಂಗಿಕವಾದ ಒಂದು ಘಟನೆಯನ್ನು ಕವಿ ವಿಸ್ತರಿಸಬಹುದು. ಅದು ಅಪ್ರಧಾನವಾಗಿದ್ದರೂ ಕಥಾನಾಯಕನ ಗುಣೋತ್ಕರ್ಷವನ್ನು ವ್ಯಂಜಿಸುವುದಕ್ಕಾಗಿ ತನ್ನ ಪ್ರಬಂಧಕೌಶಲವನ್ನು ಕವಿ ಪ್ರಕಟಿಸುತ್ತಾನೆ. ನಾಗಾನಂದ ನಾಟಕದಲ್ಲಿ ಶಂಖಚೂಡನ ವೃತ್ತಾಂತ ಆನುಷಂಗಿಕ. ಆದರೂ ಆ ಘಟನೆಯ ವಿಸ್ತರ ಜೀಮೂತವಾಹನನ ಕಾರುಣ್ಯಸ್ವಭಾವವನ್ನು ಉಜ್ವಲಗೊಳಿಸುತ್ತದೆ.

5. ತನ್ನ ಕಾವ್ಯಕ್ಕೆ ನಾಮಕರಣ ಮಾಡುವುದು ಸಹ ಕವಿಕೌಶಲವೆಂದು ಕುಂತಕನು ಹೇಳುತ್ತಾನೆ. ಗ್ರಂಥನಾಮವೇ ಕಾವ್ಯಘಟನೆಯ ಜೀವಾಳವನ್ನು ಸೂಚಿಸುತ್ತಿರಬೇಕು. ಅಭಿಜ್ಞಾನ ಶಾಕುಂತಲ, ಮುದ್ರಾರಾಕ್ಷಸ ಮುಂತಾದವು ಉದಾಹರಣೆಗಳು. ಹಯಗ್ರೀವವಧ, ಪಾಂಡವಾಭ್ಯುದಯ – ಮುಂತಾದವು ನೀರಸನಾಮಗಳು. ಇದು ಪ್ರಬಂಧಕೌಶಲವಾಗದಾದರೂ ಪ್ರಬಂಧಕರ್ತನು ಎಂತಹ ವಿದಗ್ಧನೆಂಬುದನ್ನು ತೋರಿಸುತ್ತದೆ.

6. ಮೂಲಕಥಾವಸ್ತುವಿನ ಆಕರವನ್ನು ಉಲ್ಲಂಘಿಸಿ ರಸಾನುಗುಣವಾಗಿ ಕಥಾಸರಣಿಯನ್ನು ಬದಲಾಯಿಸುವುದು ಸಹ ರಸಪೋಷಣೆಗೆ ಉಪಯುಕ್ತವಾಗುತ್ತದೆ. ಉದಾತ್ತರಾಘವ, ಮಹಾವೀರಚರಿತೆ – ಮುಂತಾದವುಗಳಲ್ಲಿ ರಾಮಾಯಣ ಕಥೆಯೇ ಬೇರೊಂದು ಬಗೆಯಾಗಿದೆ. ಇದು ಸಹ ರಸಪೋಷಣೆಗೆ ನಿಮಿತ್ತವಾಗುವುದರಿಂದ ಗ್ರಾಹ್ಯವೆಂದು ಕುಂತಕನ ಅಭಿಪ್ರಾಯ.

ಒಟ್ಟಿನಲ್ಲಿ ಕುಂತಕನ ಪ್ರಬಂಧ ಕಲ್ಪನಾ ವಿಧಾನವನ್ನು ಹೀಗೆ ಸಂಗ್ರಹಿಸಬಹುದು;

1. ಪ್ರಬಂಧದಲ್ಲಿ ಸಂಭವಿಸುವ ಘಟನೆಗಳಿಗೆ ಔಚಿತ್ಯಪೂರ್ಣವಾದ ಪೂರ್ವಾಪರ ಸಂಬಂಧವಿರಬೇಕು.

2. ಪ್ರಬಂಧದ ಮುಖ್ಯೋದ್ದೇಶಕ್ಕೆ ಭಂಗಬಾರದಂತೆ ಅದಕ್ಕೆ ಉಪಕಾರಿಯಾದ ಅವಾಂತರ ಪ್ರಕರಣಗಳನ್ನು ವರ್ಣಿಸಬೇಕು.

3. ಪಾತ್ರದ ಉತ್ಕರ್ಷವನ್ನು ವ್ಯಂಜಿಸುವುದಕ್ಕಾಗಿಯೂ ರಸಪೋಷಣೆಗಾಗಿಯೂ ನವೀನ ಪ್ರಸಂಗಗಳನ್ನು ಕಲ್ಪಿಸಬಹುದು.

4. ಔಚಿತ್ಯದೃಷ್ಟಿಯಿಂದ ಆಕರಗ್ರಂಥದಲ್ಲಿರುವ ಯಾವುದೊಂದು ವೃತ್ತಾಂತವನ್ನು ಪರಿವರ್ತಿಸಬೇಕು, ಇಲ್ಲವೆ, ತ್ಯಜಿಸಬೇಕು.

5. ಕಾವ್ಯಸೌಂದರ್ಯವನ್ನು ವರ್ಧಿಸುವುದಕ್ಕಾಗಿ ಸಾಮಾನ್ಯ ಘಟನೆಯನ್ನು ವಿಸ್ತಾರವಾಗಿ ವರ್ಣಿಸಬಹುದು.

ಆನಂದವರ್ಧನನು ಪ್ರಬಂಧರಚನೆಯ ವಿಷಯವಾಗಿ ಇನ್ನೂ ಕೆಲವು ಮುಖ್ಯ ವಿಷಯಗಳನ್ನು ನಿರೂಪಿಸಿದ್ದಾನೆ.

1, ಭಾವ, ವಿಭಾವ, ಅನುಭಾವ, ಸಂಚಾರಿಭಾವಗಳನ್ನು ಔಚಿತ್ಯದಿಂದ ಬೆರಸಲು ಅನುಕೂಲವಾಗುವಂತೆ ಒಂದು ಕಥಾಶರೀರವನ್ನು ಕವಿ ನಿರ್ಮಿಸಿಕೊಳ್ಳಬೇಕು. ಅದು ಐತಿಹಾಸಿಕವೊ ಕಲ್ಪಿತವೊ ಆಗಿರಬಹುದು.

2. ಮುಖ, ಪ್ರತಿಮುಖಾದಿ ಸಂಧಿಗಳನ್ನು ರಸಾಭಿವ್ಯಕ್ತಿದೃಷ್ಟಿಯಿಂದ ಕಲ್ಪಿಸಬೇಕಲ್ಲದೆ, ಅಲಂಕಾರಶಾಸ್ತ್ರದಲ್ಲಿ ಹೇಳಿದೆಯೆಂದು ಅವನ್ನು ಹೇಗೋ ತುರುಕಲು ಯತ್ನಿಸಬಾರದು.

3. ಪ್ರಧಾನರಸವು ಪೂರ್ಣವಾಗಿ ಮಧ್ಯದಲ್ಲಿ ವಿಶ್ರಾಂತವಾಗದಂತೆ ಅಲ್ಲಲ್ಲಿ ಅದಕ್ಕೆ ಅನುಸಂಧಾನವಿರುವ ಸನ್ನಿವೇಶವನ್ನು ಕಲ್ಪಿಸಬೇಕು.

4. ಉಪಮಾದ್ಯಲಂಕಾರಗಳನ್ನು ರಸದೃಷ್ಟಿಯಿಂದ ಸಂಯೋಜಿಸಬೇಕಲ್ಲದೆ, ತನ್ನ ಸಾಮರ್ಥ್ಯವನ್ನು ಮೆರಸಲು ಮನಬಂದಂತೆ ಕವಿ ಬಳಸಬಾರದು.

ಕಾವ್ಯಪ್ರಬಂಧವನ್ನು ಹೇಗೆ ಆರಂಭಿಸಿ, ಬೆಳಸಿ, ವಿಸ್ತರಿಸಿ, ಸಮಾಪ್ತಿಗೊಳಿಸಬೇಕೆಂಬ ಶಿಕ್ಷಣ ಭರತನ ನಾಟ್ಯಶಾಸ್ತ್ರದಲ್ಲಿಯೇ ದೊರೆಯುತ್ತದೆ. ಅರ್ಥಪ್ರಕೃತಿಗಳು, ಅವಸ್ಥೆಗಳು, ಇವುಗಳ ಸಂಯೋಜನದಿಂದಾಗುವ ಮುಖಾದಿ ಪಂಚಸಂಧಿಗಳು ಪ್ರಬಂಧಕಲ್ಪನಾದೃಷ್ಟಿಯಿಂದಲೇ ನಿರೂಪಿತವಾಗಿವೆ. ಪ್ರಬಂಧವು ವಿವಿಧ ಪ್ರಸಂಗಗಳಿಂದ ನಾನಾಮುಖವಾಗಿ ಬೆಳೆದರೂ ಅವೆಲ್ಲ ಸೇರಿ ಒಂದು ಎಂಬ ಭಾವನೆ ದೃಢವಾಗಬೇಕು. ಘಟನೆಗಳ ಪರಸ್ಪರ ಹೊಂದಾಣಿಕೆ ಈ ಭಾವನೆಗೆ ನಿಮಿತ್ತ. ಮರವು ಕೊಂಬೆ, ಎಲೆ, ಹೂ, ಹಣ್ಣುಗಳಿಂದ ವಿವಿಧರೂಪದಲ್ಲಿ ತೋರಿದರೂ ಅದೆಲ್ಲ ಸೇರಿ ಒಂದೇ ಮರ ಎಂಬ ಭಾವನೆ ಹೇಗೆ ಇಂಬುಗೊಳ್ಳುವುದೊ ಹಾಗೆ ಪ್ರಬಂಧರಚನೆ ಇರಬೇಕು. ಇಂತಹ ಕಾವ್ಯನಿರ್ಮಿತಿ ಪ್ರತಿಭಾಹೀನನಾದ ಕವಿಗೆ ಅಸಾಧ್ಯ. ಈ ಸೂಚನೆ ನಾಟ್ಯಶಾಸ್ತ್ರದಲ್ಲಿಯೇ ಇದೆ.

**ಸ್ವಭಾವೋಕ್ತಿ :**

ವಕ್ರೋಕ್ತಿಯೇ ಕಾವ್ಯಜೀವಿತವೆನ್ನುವ ಕುಂತಕನ ಮತದಲ್ಲಿ ಸ್ವಭಾವೋಕ್ತಿಯ ಸ್ಥಾನವೇನು ? ಎಂಬ ಪ್ರಶ್ನೆ ಸಹಜ. ದಂಡಿಯು ಸ್ವಭಾವೋಕ್ತಿಯನ್ನು ಹೀಗೆ ಲಕ್ಷಿಸಿದ್ದಾನೆ :

ನಾನಾವಸ್ಥಂ ಪದಾರ್ಥಾನಾಂ ರೂಪಂ ಸಾಕ್ಷಾದ್ವಿವೃಣ್ವತೀ
ಸ್ವಭಾವೋಕ್ತಿಶ್ಚ ಜಾತಿಶ್ಚೇತ್ಯಾದ್ಯಾ ಸಾಲಂಕೃತಿರ್ಯಥಾ
ಕಾವ್ಯಾ, 2 – 8

"(ಜಾತಿ ಗುಣ ಕ್ರಿಯಾ ದ್ರವ್ಯರೂಪಗಳಾದ) ಪದಾರ್ಥಗಳ ವಿವಿಧಾವಸ್ಥೆಗಳ ಸ್ವರೂಪವನ್ನು ಸಾಕ್ಷಾತ್ಕರಿಸಿದಂತೆ ವಿವರಿಸುವ ವಚೋವಿನ್ಯಾಸವು ಸ್ವಭಾವೋಕ್ತಿ ಎನಿಸುತ್ತದೆ. ಇದಕ್ಕೆ ಜಾತಿಯೆಂದೂ ಹೆಸರಿದೆ. ಇದು ಮುಖ್ಯವಾದ ಅಲಂಕಾರ"

ದಂಡಿ, ವಾಮನ, ರುದ್ರಟಾದಿಗಳು ಸ್ವಭಾವೋಕ್ತಿಯನ್ನು ಅಲಂಕಾರವೆಂದು ಒಪ್ಪಿದರು. ಭಾಮಹನು 'ಕೆಲವರು ಸ್ವಭಾವೋಕ್ತಿಯನ್ನು ಅಲಂಕಾರವೆನ್ನುತ್ತಾರೆ' ಎಂದು ಅಸ್ವರಸವನ್ನು ಪ್ರಕಟಿಸಿದ್ದನು. ಕುಂತಕನು ಅದು ಅಲಂಕಾರವಲ್ಲವೆಂದು ಸ್ಪಷ್ಟವಾಗಿ ಹೇಳಿದನು :

ಅಲಂಕಾರಕೃತಾಂ ಯೇಷಾಂ ಸ್ವಭಾವೋಕ್ತಿರಲಂಕೃತಿಃ
ಅಲಂಕಾರ್ಯತಯಾ ತೇಷಾಂ ಕಿಮನ್ಯದವಶಿಷ್ಯತೇ
ವಕ್ರೋಕ್ತಿ, 1 – 11

"ಸ್ವಭಾವೋಕ್ತಿ ಅಲಂಕಾರವೆಂದು ಹೇಳುವ ಆಲಂಕಾರಿಕರ ಮತದಲ್ಲಿ ಅಲಂಕಾರ್ಯವಾಗಿ ಇರತಕ್ಕದು ಯಾವುದು?"ಎಂದು ಆಕ್ಷೇಪಿಸಿದನು.ಮಹಿಮಭಟ್ಟ,ಹೇಮಚಂದ್ರಾದಿಗಳು ಇದಕ್ಕೆ ಸಮಾಧಾನವನ್ನಿತ್ತು ಸ್ವಭಾವೋಕ್ತಿ ಅಲಂಕಾರವೆಂದು ಸಮರ್ಥಿಸಿದರು. ಸ್ವಭಾವೋಕ್ತಿಯಲ್ಲಿ ಎರಡು ಅಂಶಗಳುಂಟು. ಒಂದು ಸಾಮಾನ್ಯ ರೂಪ, ಒಂದು ಅಸಾಧಾರಣರೂಪ. 'ಜಿಂಕೆ ಓಡಿತು'ಎಂಬುದು ಸಾಮಾನ್ಯರೂಪ, ಇದು ಅಲಂಕಾರವಲ್ಲ. 'ಗ್ರೀವಾಭಂಗಾಭಿರಾಮಂ ಮುಹುರನುಪತತಿ ಸ್ಯಂದನೇ ಬದ್ಧದೃಷ್ಟಿಃ' ಎಂದರೆ ಅಸಾಧಾರಣರೂಪ. ಇದರಲ್ಲಿ ಕವಿಪ್ರತಿಭಾಗೋಚರವಾದ ಲೋಕೋತ್ತರತೆ ಇದೆ. ಇದರಲ್ಲಿರುವ ಸೌಂದರ್ಯ ಸಹಜವಾದ್ದು. ಆಹಾರ್ಯವಲ್ಲ. ಆದ್ದರಿಂದ ಇದು ವಕ್ರೋಕ್ತಿಯಲ್ಲ. ಸ್ವಭಾವೋಕ್ತಿಯಾಗಿದ್ದರೂ ಅಲಂಕಾರವಾಗಿದೆ ಎಂದು ಅವರ ಅಭಿಪ್ರಾಯ. ಸ್ವಭಾವೋಕ್ತಿಯಲ್ಲಿ ಸಾಧಾರಣರೂಪವು ಅಲಂಕಾರ್ಯವೆಂದೂ ಅಸಾಧಾರಣ ರೂಪ ಅಲಂಕಾರವೆಂದೂ ಮಹಿಮಭಟ್ಟಾದಿಗಳ ಆಶಯ.

ಇದಕ್ಕೆ ಕುಂತಕನ ಉತ್ತರವೇನೆಂದರೆ, ನೀವು ಸ್ವಭಾವೋಕ್ತಿ ಎಂದು ಹೇಳುವ 'ಗ್ರೀವಾಭಂಗಾಭಿರಾಮಂ....' ಮುಂತಾದ ವರ್ಣನೆ ಅತ್ಯಂತ ಮನೋಹರವೆಂಬುದರಲ್ಲಿ ಸಂದೇಹವಿಲ್ಲ. ಅದರಲ್ಲಿ ಯಾವ ಅಸಾಧಾರಣತೆ ಇದೆಯೋ ಅದು ಕವಿಪ್ರತಿಭಾಗೋಚರ. ಯಾವುದು ಕವಿಪ್ರತಿಭಾಗೋಚರವೋ ಅದು ವಕ್ರೋಕ್ತಿಯೇ

ಹೊರತು ಸ್ವಭಾವೋಕ್ತಿಯಲ್ಲ. ಅದು ಅಲಂಕಾರ್ಯವಾಗಿ – ಸ್ವತಃ ಪ್ರಧಾನವಾಗಿ ಚಮತ್ಕೃತಿಯನ್ನೀಯುವುದೇ ಹೊರತು ಅಲಂಕಾರವಾಗಿ ಅಲ್ಲ. ಅದು ಸಾಧಾರಣ ರೂಪವಾದ ವಾಕ್ಯಾರ್ಥವನ್ನು ಅಲಂಕರಿಸುತ್ತದೆ ಎನ್ನುವುದಾದರೆ, ವಕ್ರೋಕ್ತಿ ರೂಪದಿಂದಲೇ ಹೊರತು ಸ್ವಭಾವೋಕ್ತಿಯಾಗಿ ಅಲ್ಲ.

## ಉಪಸಂಹಾರ

ಶಬ್ದಾರ್ಥಗಳಿಗೆ ಎರಡು ರೂಪಗಳಿರುತ್ತವೆ. ವ್ಯವಹಾರದಲ್ಲಿಯೂ ಶಾಸ್ತ್ರದಲ್ಲಿಯೂ ಬಳಸುವ ರೂಪ ಒಂದು; ಇದು ಅನಲಂಕೃತ. ಕಾವ್ಯದಲ್ಲಿ ಬಳಸುವ ರೂಪ ಇನ್ನೊಂದು; ಇದು ಅಲಂಕೃತ. 'ಸೂರ್ಯನು ಮುಳುಗಿದನು' ಎಂಬುದು ಅನಲಂಕೃತ. ಇದು ಕಾವ್ಯವಲ್ಲ. 'ಮಾನಿನಿಯರ ಪ್ರಣಯಕೋಪವನ್ನು ನೀಗಿಸುವುದಕ್ಕಾಗಿ ಸೂರ್ಯನು ಮುಳುಗಿದನು' ಎಂದರೆ ಅಲಂಕೃತ. ಇದು ಕಾವ್ಯ. 'ಮಾನಿನಿಯರ ಪ್ರಣಯಕೋಪವನ್ನು ನೀಗಿಸುವುದಕ್ಕಾಗಿ' ಎಂಬ ಹೇತು ಕವಿಪ್ರತಿಭಾ ಕಲ್ಪಿತ. ಶಬ್ದ, ಅರ್ಥ, ಅಲಂಕಾರಗಳ ಸಮಷ್ಟಿ ಕಾವ್ಯವಾದಮೇಲೆ, ಕಾವ್ಯ ಯಾವುದು ? ಅಲಂಕಾರ ಯಾವುದು ? ಎಂಬ ಪ್ರಶ್ನೆಯೇ ಸರಿಯಲ್ಲ. ಅಲಂಕಾರವನ್ನು ಪೃಥಕ್ಕರಿಸಿದರೆ ಕಾವ್ಯಶರೀರವನ್ನೇ ಕತ್ತರಿಸಿದಂತೆ. ಆದ್ದರಿಂದಲೇ ಕುಂತಕನು,

ಅಲಂಕೃತಸ್ಯ ಕಾವ್ಯತ್ವಮಿತಿ ಸ್ಥಿತಿಃ, ನ ಪುನಃ ಕಾವ್ಯಸ್ಯ ಅಲಂಕಾರಯೋಗಃ

**ವಕ್ರೋ. 1 – 6 ವೃತ್ತಿ.**

"ಅಲಂಕೃತವಾದ ಶಬ್ದಾರ್ಥಗಳಿಗೆ ಕಾವ್ಯತ್ವ ಬರುತ್ತದೆ. ಕಾವ್ಯಕ್ಕೆ ಹೊಸದಾಗಿ ಅಲಂಕಾರದ ಸಂಬಂಧ ಬರುವುದಿಲ್ಲ" ಎಂದಿದ್ದಾನೆ.

ಶಬ್ದಾರ್ಥಸೌಂದರ್ಯಗಳ ಸಮುದಾಯವೇ ಕಾವ್ಯವೆನಿಸುವುದರಿಂದ ಇದು ಶಬ್ದ, ಇದು ಅರ್ಥ, ಇದು ಸೌಂದರ್ಯ – ಎಂಬ ವಿಭಜನೆ ಕಾಲ್ಪನಿಕ. ಈ ವಿಭಜನೆ ಕಾವ್ಯಾಭ್ಯಾಸಿಗಳ ವ್ಯುತ್ಪತ್ತಿಸಿದ್ಧಿಗಾಗಿ. ವ್ಯಾಕರಣಶಾಸ್ತ್ರದಲ್ಲಿ ಒಂದು ಪದವನ್ನು ಪ್ರಕೃತಿಪ್ರತ್ಯಯಗಳೆಂದೂ ಅವನ್ನು ಅಕ್ಷರಗಳೆಂದೂ ಅಕ್ಷರಗಳನ್ನು ಸ್ವರ ವ್ಯಂಜನಗಳೆಂದೂ ವಿಭಜಿಸಿ ರೂಪಸಿದ್ಧಿಮಾಡುತ್ತಾರೆ. ವಾಸ್ತವವಾಗಿ ಪದವು ಅಖಂಡವೆಂದು ವೈಯಾಕರಣರೇ ಹೇಳುತ್ತಾರೆ. ಸಾಧುತ್ವವನ್ನು ವ್ಯವಸ್ಥೆಗೊಳಿಸುವುದಕ್ಕಾಗಿ ಪ್ರಕೃತಿಪ್ರತ್ಯಯಾದಿಕಲ್ಪನೆ. ಇದೇ ನ್ಯಾಯವು ಕಾವ್ಯಮೀಮಾಂಸಾ ಶಾಸ್ತ್ರದಲ್ಲಿಯೂ ಸಲ್ಲುತ್ತದೆ.

ಕುಂತಕನು ಕಾವ್ಯತತ್ತ್ವವನ್ನು ಅತಿಸೂಕ್ಷ್ಮವಾಗಿ ವಿವೇಚಿಸಿ ಆಳಕ್ಕೆ ಮುಳುಗಿದರೂ ತಳವನ್ನು ಕಾಣಲಿಲ್ಲ. ವಕ್ರೋಕ್ತಿಯೆಂದರೇನೆಂಬ ಪ್ರಶ್ನೆಗೆ 'ಅದೊಂದು

ವೈದಗ್ಧ್ಯಭಂಗೀಭಣಿತಿ'* ಎಂಬುದೊಂದೇ ಅವನ ಉತ್ತರ. ಅಲಂಕಾರ ರಸಭಾವಗಳನ್ನೆಲ್ಲ ವಕ್ರೋಕ್ತಿ ಎಂಬ ಒಂದೇ ಗುಂಪಿಗೆ ಸೇರಿಸಿದನು. ವ್ಯಂಜನಾವೃತ್ತಿಯನ್ನೂ ವ್ಯಂಗ್ಯದ ಸೊಬಗನ್ನೂ ಅವನು ಬಲ್ಲ. ರಸಧ್ವನಿಯ ಪರಮ ಸೌಂದರ್ಯ ಅವನಿಗೆ ತಿಳಿಯದಿಲ್ಲ. ಅವನ ಅಂಗಡಿಯಲ್ಲಿ ಸಕಲವಸ್ತುಗಳೂ ಉಂಟು. ಆದರೆ ಯಾವುದರ ಮೌಲ್ಯ ಎಷ್ಟು – ಎಂಬ ತಲೆಚೀಟಿಯನ್ನಂಟಿಸಿ ಓರಣವಾಗಿ ಪದಾರ್ಥಗಳನ್ನು ವಿಂಗಡಿಸಿ ಜೋಡಿಸಲಿಲ್ಲ. ಆದ್ದರಿಂದ ಗ್ರಾಹಕರು ಅಲ್ಲಿಗೆ ಪ್ರವೇಶಿಸದೆ ಮುಂದಕ್ಕೆ ಸಾಗಬೇಕಾಯಿತು.

*

## ಧ್ವನಿಪ್ರಸ್ಥಾನ :

'ಕಾವ್ಯಸ್ಯಾತ್ಮಾಧ್ವನಿಃ' ಎಂದು ನಿರ್ಣಯಿಸಿ ಧ್ವನಿಸಿದ್ಧಾಂತವನ್ನು ಭದ್ರವಾದ ತಳಹದಿಯ ಮೇಲೆ ಸ್ಥಾಪಿಸಿದ ಕೀರ್ತಿ ಆನಂದವರ್ಧನನಿಗೆ ಸಲ್ಲುತ್ತದೆ. ಅನಂತರದಲ್ಲಿ ಪ್ರಸಿದ್ಧರಾದ ಬಹುಮಂದಿ ಆಲಂಕಾರಿಕರು ಈ ಸಿದ್ಧಾಂತವನ್ನು ವಿವರಿಸಿ ಪೋಷಿಸಿದರು. ಇಂದಿಗೂ ಈ ಧ್ವನಿತತ್ತ್ವವು ಸಹೃದಯಸಂಮತವಾಗಿ ನಿಂತಿದೆ.

ಅರ್ಥವನ್ನು ಬೋಧಿಸುವ ಸಾಮರ್ಥ್ಯ ಶಬ್ದದಲ್ಲಿ ಉಂಟಷ್ಟೆ. ಬೋಧಕತಾರೂಪವಾದ ಈ ಸಾಮರ್ಥ್ಯವನ್ನು ಶಾಸ್ತ್ರೀಯ ಪರಿಭಾಷೆಯಲ್ಲಿ ವೃತ್ತಿ ಅಥವಾ ವ್ಯಾಪಾರ ಎನ್ನುತ್ತಾರೆ. ವ್ಯಾಪಾರವು ಅಭಿಧಾ (ಶಕ್ತಿ), ಲಕ್ಷಣಾ, ವ್ಯಂಜನಾ – ಎಂದು ಮೂರು ವಿಧ. ಇವುಗಳಿಂದ ತಿಳಿಯುವ ಅರ್ಥಕ್ಕೆ ಕ್ರಮವಾಗಿ ವಾಚ್ಯ, ಲಕ್ಷ್ಯ, ವ್ಯಂಗ್ಯ ಎಂದು ಹೆಸರು. ಅಭಿಧಾದಿ ವ್ಯಾಪಾರಗಳಿಂದ ಅರ್ಥಬೋಧಕಗಳಾದ ಶಬ್ದಗಳು ಕ್ರಮವಾಗಿ ವಾಚಕ, ಲಕ್ಷಕ, ವ್ಯಂಜಕ ಎನಿಸುತ್ತವೆ. ಲೋಕಶಾಸ್ತ್ರಗಳಲ್ಲಾಗಲಿ, ಕಾವ್ಯದಲ್ಲಾಗಲಿ ಪ್ರತಿಯೊಂದು ಶಬ್ದವೂ ತನ್ನ ಅಭಿಧಾವ್ಯಾಪಾರದಿಂದ ವಾಚ್ಯಾರ್ಥವನ್ನು ಬೋಧಿಸಿ ತೀರುತ್ತದೆ. ಲಕ್ಷಣಾ ವ್ಯಂಜನೆಗಳಿರಲಿ, ಇಲ್ಲದಿರಲಿ – ಅಭಿಧೆಯು ಮಾತ್ರ ಇರುತ್ತದೆ. ಆದ್ದರಿಂದ ಇದು ಮುಖ್ಯವ್ಯಾಪಾರವೆನಿಸಿಕೊಂಡಿದೆ. ಕೋಶದಲ್ಲಿ ಬರೆದಿರುವುದು ಅಭಿಧಾಬೋಧ್ಯವಾದ ಮುಖ್ಯಾರ್ಥವನ್ನು. ವ್ಯಂಜನಾವೃತ್ತಿಯು ವಿಶೇಷವಾಗಿ ಕಾವ್ಯದಲ್ಲಿ ಉಪಯುಕ್ತವಾಗುವುದು. ಲಕ್ಷಣಾವೃತ್ತಿಯು ಲೋಕಶಾಸ್ತ್ರಗಳಲ್ಲಾಗಲಿ ಇರಬಹುದು, ಇಲ್ಲದೆಯೂ ಇರಬಹುದು, ಒಂದೆರಡು ಉದಾಹರಣೆಗಳಿಂದ ಇದನ್ನು ಸ್ಪಷ್ಟಗೊಳಿಸಬಹುದು :

'ಹುಡುಗನು ಪಾಠಶಾಲೆಗೆ ಹೋಗುತ್ತಾನೆ'. ಇಲ್ಲಿ ವಾಚ್ಯಾರ್ಥವು ಮಾತ್ರ ತೋರುವುದರಿಂದ ಅಭಿಧಾವೃತ್ತಿಯುಂಟು. ಲಕ್ಷಣಾವ್ಯಂಜನೆಗಳಿಲ್ಲ. 'ಒಂದು

* ಕವಿವ್ಯಾಖ್ಯಾನ ಎಂದಾಗಲೂ ಅದು Begging the Question ಆಗುತ್ತದೆ — ಸಂ.

ಸೇರು ಮೆಣಸಿನಕಾಯಿ' ಸೇರು ಒಂದು ಪರಿಮಾಣ. ಪರಿಮಾಣವೇ ಮೆಣಸಿನ ಕಾಯಿ ಅಲ್ಲ. ಆದ್ದರಿಂದ 'ಸೇರು ಎಂಬ ಪರಿಮಾಣದಿಂದ ಪರಿಮಿತವಾದ' ಎಂದು ಅರ್ಥಮಾಡಿಕೊಳ್ಳಬೇಕು. ಇದು ಲಕ್ಷ್ಯಾರ್ಥ. ಇಲ್ಲಿ ಅಭಿಧಾ ಲಕ್ಷಣೆಗಳುಂಟು. ವ್ಯಂಜನಾವೃತ್ತಿ ಇಲ್ಲ. 'ಈ ಯೋಧ ಸಿಂಹ' ಪ್ರಾಣಿವಿಶೇಷವೆಂಬುದು ಸಿಂಹಶಬ್ದದ ಮುಖ್ಯಾರ್ಥ. ಯೋಧನು ಸಿಂಹವಲ್ಲವಾದ್ದರಿಂದ ಸಿಂಹಶಬ್ದಕ್ಕೆ ಸಿಂಹಸದೃಶ ಎಂದು ಅರ್ಥವಾಗುತ್ತದೆ. ಇದು ಲಕ್ಷ್ಯಾರ್ಥ. ಸಿಂಹಶಬ್ದದ ಬೋಧಕತಾ ಸಾಮರ್ಥ್ಯವು ಇಲ್ಲಿಗೇ ಮುಗಿಯದು. ಸಿಂಹದ ಧೈರ್ಯಪರಾಕ್ರಮಗಳೂ ಯೋಧ ನಲ್ಲಿವೆ ಎಂಬ ಪ್ರತೀತಿಯನ್ನೂ ಆ ಶಬ್ದವು ಉಂಟು ಮಾಡುತ್ತದೆ. ಧೈರ್ಯಪರಾ ಕ್ರಮಗಳು ವ್ಯಂಗ್ಯಾರ್ಥ. ಸಿಂಹಶಬ್ದದಲ್ಲಿ ಮೇಲೆ ಹೇಳಿದ ಮೂರು ವ್ಯಾಪಾರ ಗಳೂ ಇವೆ.

'ಈ ಯೋಧ ಸಿಂಹ' ಎಂಬಲ್ಲಿ ಸಿಂಹಶಬ್ದದ ಮುಖ್ಯಾರ್ಥವನ್ನು ಯೋಧ ನೊಡನೆ ಅನ್ವಯಿಸಲು ಶಕ್ಯವಾಗದೆ ಮುಖ್ಯಾರ್ಥವು ಬಾಧಿತವಾಯಿತು. ಆದ್ದ ರಿಂದ ಲಕ್ಷಣೆಯು ತಲೆಯೆತ್ತಿ 'ಸಿಂಹಸದೃಶ' ಎಂಬ ಅರ್ಥವನ್ನು ಬೋಧಿಸಿತು. ಯೋಧನಲ್ಲಿ ಸಿಂಹಸಾದೃಶ್ಯವು ಹೇಗೆ ? ಎಂಬ ಜಿಜ್ಞಾಸೆಯ ಫಲವಾಗಿ ವ್ಯಂಜನಾ ವೃತ್ತಿಯು ಮೈದಳೆದು 'ಧೈರ್ಯಪರಾಕ್ರಮಗಳಿರುವುದರಿಂದ' ಎಂದು ಉತ್ತರಿ ಸಿತು. ವ್ಯಂಜನೆಯು ಮೈದಳೆಯಲು ಲಕ್ಷಣೆಯು ನಿಮಿತ್ತ. ಇದು 'ಲಕ್ಷಣಾ ಮೂಲವಾದ ವ್ಯಂಜನಾ' ಎನಿಸಿಕೊಳ್ಳುತ್ತದೆ. 'ಈ ಯೋಧನು ಸಿಂಹಸದೃಶ' ಎಂದು ವಾಕ್ಯವಿದ್ದರೆ ಲಕ್ಷಣಾವೃತ್ತಿ ಅನಾವಶ್ಯಕ. 'ಸದೃಶ' ಎಂಬ ಅರ್ಥವು ಅಭಿಧೆಯಿಂದ ತೋರಿದ ಮುಖ್ಯಾರ್ಥವೇ. ಆಗಲೂ ವ್ಯಂಜನಾವೃತ್ತಿಯಿಂದ ಧೈರ್ಯಪರಾಕ್ರಮಗಳು ಗೋಚರಿಸುತ್ತವೆ. ಈ ವೃತ್ತಿಯು 'ಅಭಿಧಾ ಮೂಲವಾದ ವ್ಯಂಜನಾ' ಎನಿಸಿಕೊಳ್ಳುತ್ತದೆ.

ವ್ಯಂಜನೆಯ ವಿಷಯದಲ್ಲಿ ಇನ್ನೊಂದು ವಿಶೇಷ ಉಂಟು. ವ್ಯಂಜನೆಯು ಶಬ್ದದಲ್ಲಿ ಮಾತ್ರವಲ್ಲ, ಅರ್ಥದಲ್ಲಿಯೂ ಇರಬಹುದು. ಅರ್ಥವೂ ವ್ಯಂಜಕವಾಗ ಬಹುದು. 'ಸೂರ್ಯನು ಮುಳುಗಿದನು' ಎಂದರೆ 'ಕೆಲಸಮಾಡುವುದನ್ನು ನಿಲ್ಲಿಸ ಬೇಕು' ಎಂಬ ಅರ್ಥ ಪ್ರಕರಣವಶದಿಂದ ಸ್ಫುರಿಸಬಹುದು. 'ರವಿ ಅಸ್ತಂಗತ ನಾದನು, ಹೊತ್ತುಮುಳುಗಿತು, ಸಂಜೆಯಾಯಿತು' ಎಂದು ಯಾವ ಶಬ್ದಗಳಿಂದ ಹೇಳಿದರೂ ಅದೇ ವ್ಯಂಗ್ಯಾರ್ಥದ ಸ್ಫುರಣೆಯಾಗುತ್ತದೆ. ಇಲ್ಲಿ ವ್ಯಂಜನಾ ವೃತ್ತಿಯು ಶಬ್ದಗತವಲ್ಲ. ಅರ್ಥಗತ. ಅರ್ಥಗತವಾದ ವ್ಯಂಜಕತ್ವದಲ್ಲಿ ಮತ್ತೊಂದು ವಿಶೇಷ ಉಂಟು. 'ಯಾರು ಈ ಮಾತನ್ನು ಹೇಳಿದ್ದು ? ಯಾರಿಗೆ ? ಯಾವ

ಸಂದರ್ಭದಲ್ಲಿ ?' – ಮುಂತಾದ ಅಂಶಗಳಿಂದ ವ್ಯಂಗ್ಯಾರ್ಥವು ಬೇರೆ ಬೇರೆಯಾಗಿ ತೋರಬಹುದು.

ವ್ಯಂಗ್ಯಾರ್ಥ ರಮಣೀಯವಾಗಿರಬೇಕೆಂಬ ನಿಯಮವೇನೂ ಇಲ್ಲ. 'ಐದು ಘಂಟೆಯಾಯಿತು' ಎಂದಾಗ 'ಮನೆಗೆ ಹೋಗಿರಿ' ಎಂಬ ಅರ್ಥವು ಶಾಲಾಬಾಲಕರಿಗೆ ಸ್ಫುರಿಸಬಹುದು. ಇದು ರಮಣೀಯವೆನ್ನಲಾಗುವುದಿಲ್ಲ. ಕಾವ್ಯದಲ್ಲಿ ಉಪಯುಕ್ತವಾದದ್ದು ರಮಣೀಯವಾದ ವ್ಯಂಗ್ಯ. ಅದನ್ನು ಬೋಧಿಸುವ ವ್ಯಂಜನಾವ್ಯಾಪರವೇ ಕಾವ್ಯದ ಆತ್ಮ. ಅದೇ ಧ್ವನಿ. ಧ್ವನಿಶಬ್ದಕ್ಕೆ ಅಲಂಕಾರಶಾಸ್ತ್ರದಲ್ಲಿ ಐದು ಅರ್ಥಗಳುಂಟು: 1. ವ್ಯಂಜಕ ಶಬ್ದ 2. ವ್ಯಂಜಕ ಅರ್ಥ 3. ವ್ಯಂಗ್ಯ 4. ವ್ಯಂಜನಾವ್ಯಾಪಾರ 5. ವ್ಯಂಗ್ಯ ಪ್ರಧಾನವಾದ ಕಾವ್ಯ. ಇವುಗಳಲ್ಲಿ ವ್ಯಂಗ್ಯ, ವ್ಯಂಜನಾವ್ಯಾಪಾರ – ಎಂಬ ಎರಡು ಅರ್ಥಗಳಲ್ಲಿ ಧ್ವನಿಶಬ್ದದ ಬಳಕೆ ಹೆಚ್ಚು. 'ಕಾವ್ಯಸ್ಯಾತ್ಮಾ ಧ್ವನಿಃ' ಎಂಬಲ್ಲಿ ವ್ಯಂಜನಾವ್ಯಾಪಾರವು ವಿವಕ್ಷಿತ (– ಧ್ವನ್ಯಾಲೋಕದ 'ತತ್ಪರಾವೇವ ಶಬ್ದಾರ್ಥೌ....' ಎಂಬ ಕಾರಿಕೆಯ ಲೋಚನದಲ್ಲಿ ಅಭಿನವಗುಪ್ತನ ಮಾತು ಹೀಗಿದೆ : 'ಶಬ್ದನಂ ಶಬ್ದಃ ಶಬ್ದವ್ಯಾಪಾರಃ, ನಚಾಸಾವಭಿಧಾದಿರೂಪಃ, ಅಪಿತ್ವಾತ್ಮಭೂತಃ, ಸೋಽಪಿ ಧ್ವನನಂ ಧ್ವನಿಃ). ವ್ಯಂಗ್ಯವು ಕಾವ್ಯದ ಆತ್ಮ ಎಂದೂ ಆಲಂಕಾರಿಕರು ಹೇಳಿದ್ದಾರೆ. ಆ ಪಕ್ಷದಲ್ಲಿ ಧ್ವನಿ ಎಂದರೆ ವ್ಯಂಗ್ಯವೆಂದೇ ಅರ್ಥ. ವ್ಯಂಜನಾವ್ಯಾಪಾರದಿಂದ ಧ್ವನಿತವಾಗತಕ್ಕದ್ದು ಮೂರು : ರಸಧ್ವನಿ, ಅಲಂಕಾರಧ್ವನಿ, ವಸ್ತುಧ್ವನಿ. ಶೃಂಗಾರಾದಿ ಮುಖ್ಯರಸಗಳೂ ನಿರ್ವೇದಾದಿ ಭಾವಗಳೂ ರಸಧ್ವನಿಯಲ್ಲಿ ಸೇರುತ್ತವೆ. ಇಲ್ಲಿ ರಸಶಬ್ದಕ್ಕೆ ಆಸ್ವಾದ್ಯಮಾನವಾದ ಚಿತ್ತವೃತ್ತಿ ಎಂದರ್ಥ. ಭಾವಧ್ವನಿಯೂ ರಸೋಪಯೋಗಿಯಾದ್ದರಿಂದ ರಸಧ್ವನಿಯಲ್ಲಿ ಸೇರಿಸಲಾಗಿದೆ. ಉಪಮಾದ್ಯಲಂಕಾರಗಳು ಧ್ವನಿತವಾದಲ್ಲಿ ಅಲಂಕಾರಧ್ವನಿ. ರಸಾಲಂಕಾರಗಳಿಗಿಂತ ಅತಿರಿಕ್ತವಾದ ಅರ್ಥವೆಲ್ಲವೂ ವಸ್ತುಧ್ವನಿಯಲ್ಲಿ ಸೇರುತ್ತದೆ.

**ರಸೋಪಕರಣಗಳು**

ಕಾರಣಾನ್ಯಥ ಕಾರ್ಯಾಣಿ ಸಹಕಾರೀಣಿ ಯಾನಿ ಚ
ರತ್ಯಾದೇಃ ಸ್ಥಾಯಿನೋ ಲೋಕೇ ತಾನಿ ಚೇನ್ನಾಟ್ಯಕಾವ್ಯಯೋಃ
ವಿಭಾವಾ ಅನುಭಾವಾಶ್ಚ ಕಥ್ಯಂತೇ ವ್ಯಭಿಚಾರಿಣಃ
ವ್ಯಕ್ತಃ ಸ ತೈರ್ವಿಭಾವಾದ್ಯೈಃ ಸ್ಥಾಯಿಭಾವೊ ರಸಃ ಸ್ಮೃತಃ
ಕಾವ್ಯಪ್ರಕಾಶ, 4. 27–28

"ಲೋಕದಲ್ಲಿ ರತಿ, ಉತ್ಸಾಹ – ಮುಂತಾದ ಸ್ಥಾಯಿ ಚಿತ್ತವೃತ್ತಿಗಳಿಗೆ ಕಾರ

ಣಗಳೂ ಚಿತ್ತವೃತ್ತಿಗಳ ಕಾರ್ಯಗಳೂ ಸಹಕಾರಿಗಳೂ ಪ್ರಸಿದ್ಧವಾಗಿವೆಯಷ್ಟೆ. ನಾಟ್ಯಕಾವ್ಯಗಳಲ್ಲಿ ನಿಬದ್ಧವಾದಾಗ ಕಾರಣಾದಿಗಳು ಕ್ರಮವಾಗಿ ವಿಭಾವ, ಅನುಭಾವ, ವ್ಯಭಿಚಾರಿಭಾವ ಎಂದು ಹೇಳಲ್ಪಡುತ್ತವೆ. ಅವುಗಳಿಂದ ಅಭಿವ್ಯಕ್ತವಾದ ಸ್ಥಾಯಿಭಾವವು ರಸವೆಂದು ಸ್ಮೃತವಾಗಿದೆ."

ಸ್ಥಾಯಿಭಾವ :– ಭಾವವೆಂದರೆ ಚಿತ್ತವೃತ್ತಿ; ಅಂತಃಕರಣದ ವ್ಯಾಪಾರ. ಕಾಮ ಕ್ರೋಧಾದಿಗಳು ಚಿತ್ತವೃತ್ತಿಗಳು. ಸ್ಥಾಯಿಯೆಂದರೆ ದೀರ್ಘಕಾಲದವರೆಗೆ ಇರತಕ್ಕದ್ದು. ಭರತನು ಪರಿಗಣಿಸಿದ ಸ್ಥಾಯಿಭಾವಗಳು ಎಂಟು :

ರತಿರ್ಹಾಸಶ್ಚ ಶೋಕಶ್ಚ ಕ್ರೋಧೋತ್ಸಾಹೌ ಭಯಂ ತಥಾ
ಜುಗುಪ್ಸಾ ವಿಸ್ಮಯಶ್ಚೇತಿ ಸ್ಥಾಯಿಭಾವಾಃ ಪ್ರಕೀರ್ತಿತಾಃ

ನಾಟ್ಯಶಾಸ್ತ್ರ, 6 - 17

ರತಿಯೆಂದರೆ ಸ್ತ್ರೀಪುರುಷರಿಗೆ ಅನ್ಯೋನ್ಯವಾಗಿ ಸಂಭವಿಸುವ ಪ್ರೀತಿ. ಹಾಸಾದಿಗಳ ಅರ್ಥ ಸ್ಪಷ್ಟವಾಗಿದೆ. ರತ್ಯಾದಿಗಳಿಂದ ಕ್ರಮವಾಗಿ ಶೃಂಗಾರ, ಹಾಸ್ಯ, ಕರುಣ, ರೌದ್ರ, ವೀರ, ಭಯಾನಕ, ಬೀಭತ್ಸ, ಅದ್ಭುತ – ಎಂಬ ಎಂಟು ರಸಗಳು ನಿಷ್ಪನ್ನವಾಗುತ್ತವೆ. ಶಮ ಎಂಬ ಸ್ಥಾಯಿಭಾವದಿಂದ ಶಾಂತರಸವು ಹುಟ್ಟುವುದೆಂದು ಹೇಳಿ ಮುಂದಿನವರು ನವರಸಗಳನ್ನು ಒಪ್ಪಿಕೊಂಡಿದ್ದಾರೆ. ಭಕ್ತಿ ಮುಂತಾದ ಇನ್ನೂ ಕೆಲವು ರಸಗಳಿವೆಯೆಂದು ಹೇಳತಕ್ಕವರೂ ಇದ್ದಾರೆ.

ವ್ಯಭಿಚಾರಿಭಾವ :– ಶಂಕೆ, ಅಸೂಯೆ, ಲಜ್ಜೆ – ಮುಂತಾದ ಭಾವಗಳು ರತ್ಯಾದಿಗಳಂತೆ ಸ್ಥಿರವಾಗಿ ಮನಸ್ಸಿನಲ್ಲಿ ನಿಲ್ಲತಕ್ಕವುಗಳಲ್ಲ. ನಿಮಿತ್ತ ವಿಶೇಷದಿಂದ ಅವು ಸಂಭವಿಸಿ ಒಡನೆಯೇ ಲಯವಾಗುತ್ತವೆ. ಸ್ಥಾಯಿಭಾವವು ಜಾಗೃತವಾಗಿರುವಾಗ ಸಮುದ್ರದ ಅಲೆಗಳಂತೆ ಏಳುತ್ತ ಬೀಳುತ್ತ ಸಂಚರಿಸುತ್ತವೆ. ಶಕುಂತಲೆಗೆ ದುಷ್ಯಂತನನ್ನು ನೋಡಿ ರತಿಭಾವವು ಜಾಗೃತಗೊಂಡು ಸ್ಥಿರವಾಗಿ ನಿಂತಿತು. ಆಗ ಮಧ್ಯದಲ್ಲಿ ಅವಳಿಗಾದ ಶಂಕೆ, ಔತ್ಸುಕ್ಯ, ಹರ್ಷ, ಲಜ್ಜೆ ಮೊದಲಾದ ಭಾವಗಳೆಷ್ಟು ! ಇವುಗಳಿಗೆ ವ್ಯಭಿಚಾರಿಭಾವ ಅಥವಾ ಸಂಚಾರಿಭಾವ ಎಂದು ಹೆಸರು. ರಸಾಭಿವ್ಯಕ್ತಿಗೆ ಇವು ಸಹಕಾರಿಗಳು. ಇವು ಮೂವತ್ತುಮೂರು ಎಂದು ಗಣಿಸಲಾಗಿದೆ :

ಮತಿಲಜ್ಜಾವೇಗ ಶಂಕಾಮರಣ ಚಪಲತಾ ಹರ್ಷನಿರ್ವೇದದೈನ್ಯ
ಸ್ಮೃತಿ ಮೋಹಾಲಸ್ಯಗರ್ವಶ್ರಮ ಮದಜಡತಾಗ್ಲಾನಿಸಂಸುಪ್ತಿನಿದ್ರಾ
ಧೃತಿತರ್ಕೋನ್ಮಾದಬೋಧಾಮಯಸವಿಷಾದೋತ್ಸುಕಾಮರ್ಷಚಿಂತಾ
ಸತತಾಸೂಯಾವಹಿತ್ಥೋಗ್ರ ಸುವಿಲಸದಪಸ್ಮಾರಕಾಖ್ಯಾನದಿಂದಂ

ಸಾಳ್ವನ ರಸರತ್ನಾಕರ

ವಿಭಾವ:– ಸ್ಥಾಯಿಭಾವದ ಕಾರಣವು ವಿಭಾವ. ಇದರಲ್ಲಿ ಆಲಂಬನ, ಉದ್ದೀಪನ ಎಂದು ಎರಡು ಬಗೆ. ಚಿತ್ತವೃತ್ತಿಗೆ ಆಶ್ರಯಕಾರಣ ಆಲಂಬನವಿಭಾವ. ದುಷ್ಯಂತನ ರತಿಗೆ ಶಕುಂತಲೆ ಆಲಂಬನ.ಚಿತ್ತವೃತ್ತಿಯನ್ನು ಉದ್ದೀಪಿಸುವ ನಿಮಿತ್ತ ಕಾರಣ ಉದ್ದೀಪನ ವಿಭಾವ. ರತಿಸ್ಥಾಯಿಗೆ ಬೆಳದಿಂಗಳು, ತಂಗಾಳಿ ಮುಂತಾದವು ಉದ್ದೀಪನಗಳು. ಭೀಮನ ಕ್ರೋಧಕ್ಕೆ ದುಃಶಾಸನ ಆಲಂಬನ. ಆತನು ದ್ರೌಪದಿಯನ್ನು ಅವಮಾನಗೊಳಿಸಿದ್ದು, ಪಾಂಡವರನ್ನು ಲೇವಡಿಮಾಡಿದ್ದು ಉದ್ದೀಪನ.

ಅನುಭಾವ :– ಮನುಷ್ಯನಲ್ಲಿ ಭಾವವು ಉದ್ರಿಕ್ತವಾದಾಗ ಅವನ ನಡೆನುಡಿಗಳು ಭಾವದ ಕಾರ್ಯವೆನಿಸಿಕೊಳ್ಳುತ್ತವೆ. ಅವನು ಹೋಗುವುದು, ಬರುವುದು, ಅಂಗಚಲನೆ, ನೋಡುವುದು, ನುಡಿಯುವುದು – ಇವೆಲ್ಲವೂ ಅನುಭಾವಗಳು. ಕೆಳಗೆ ಕಂಡ ಎಂಟು ಸಾತ್ತ್ವಿಕ ಭಾವಗಳನ್ನೂ ಅನುಭಾವಗಳೆಂದು ಗಣಿಸಿದ್ದಾರೆ.

ಸ್ತಂಭಃ ಸ್ವೇದೋಽಥ ರೋಮಾಂಚಃ ಸ್ವರಭೇದೋಽಥ ವೇಪಥುಃ
ವೈವರ್ಣ್ಯಮಶ್ರು ಪ್ರಲಯ ಇತ್ಯಷ್ಟೌ ಸಾತ್ತ್ವಿಕಾ ಮತಾಃ
ನಾಟ್ಯಶಾಸ್ತ್ರ, 6 – 22

ಸ್ತಂಭ=ಮೈಮರೆತು ನಿಶ್ಚೇಷ್ಟನಾಗುವುದು. ವೇಪಥು=ನಡುಕ. ಪ್ರಲಯ=ಮೂರ್ಛೆ.

ಸಾತ್ತ್ವಿಕಭಾವಗಳು ಚಿತ್ತವೃತ್ತಿಗಳೇ. ಸತ್ತ್ವವೆಂದರೆ ಏಕಾಗ್ರತೆಯನ್ನು ಮುಟ್ಟಿರುವ ಚಿತ್ತ. ಇದರಿಂದ ಸಂಭವಿಸಿದವು ಸಾತ್ತ್ವಿಕಗಳು. ಸ್ವೇದ, ರೋಮಾಂಚಾದಿಗಳು ಈ ಚಿತ್ತವೃತ್ತಿಯ ಕಾರ್ಯಗಳು. ಆದ್ದರಿಂದ ಸ್ತಂಭ, ಸ್ವೇದಾದಿಗಳಿಗೆ ಕಾರಣವಾದ ಚಿತ್ತವೃತ್ತಿಯನ್ನು ಸಾತ್ತ್ವಿಕಭಾವ ಎಂದು ಗ್ರಹಿಸಬೇಕು.

ಸ್ಥಾಯಿಗೆ ಅನುಗುಣವಾಗಿ ವಿಭಾವಾದಿಗಳು ವಿಭಿನ್ನವಾಗುತ್ತವೆ. ಈ ವಿಭಾವಾದಿಗಳಿಂದ ಅಭಿವ್ಯಕ್ತವಾದ ರತ್ಯಾದಿಸ್ಥಾಯಿಭಾವವು ರಸವೆನಿಸಿಕೊಳ್ಳುತ್ತದೆ. ಇಲ್ಲಿ ಇನ್ನೊಂದು ವಿಷಯ ಪ್ರಸ್ತುತವಾಗಬಹುದು. ದೃಶ್ಯಕಾವ್ಯದಲ್ಲಿ ನಟರ ಅಭಿನಯ, ಗೀತ, ವಾದ್ಯಾದಿಗಳಿಂದ ಉದ್ದೀಪನ ವಿಭಾವಾದಿಗಳು ಸ್ಫುಟವಾಗಿ ಗೋಚರಿಸುತ್ತವೆ. ಅವುಗಳಿಂದ ರಸಾಭಿವ್ಯಕ್ತಿ ಸಾಧ್ಯ. ಶ್ರವ್ಯ ಕಾವ್ಯದಲ್ಲಿ ಈ ಸೌಕರ್ಯವಿಲ್ಲ ಅಲ್ಲಿ ವಿಭಾವಾದಿಗಳು ಸ್ಪಷ್ಟವಾಗಿ ಗೋಚರಿಸದೆ ಇರುವುದರಿಂದ ರಸಾಭಿವ್ಯಕ್ತಿ ಹೇಗೆ ? ಎಂಬ ಪ್ರಶ್ನೆ ಹುಟ್ಟಬಹುದು. ಚಿತ್ತವೃತ್ತಿಯ ಅಭಿವ್ಯಕ್ತಿಗೆ ನಟರ ಅಭಿನಯಾದಿಗಳು ಬಾಹ್ಯನಿಮಿತ್ತಗಳು. ಸಾಮಾಜಿಕನು ಸಹೃದಯನಲ್ಲದೆ ಹೋದರೆ ನಾಟಕವನ್ನು ನೋಡುತ್ತಿದ್ದಾಗಲೂ ರಸೋದಯವಾಗಲಾರದು. ಅವನು ಸಹೃದಯನಾದರೆ ತನ್ನ ಚಿತ್ತಭೂಮಿಕೆಯನ್ನೇ ರಂಗಸ್ಥಳವಾಗಿ ಪರಿವರ್ತಿಸಿಕೊಳ್ಳಬಲ್ಲನು.

ಬಾಹ್ಯವಾದ ಅಭಿನಯಾದಿಗಳು ಇಲ್ಲದಿದ್ದರೂ ಕವಿಪ್ರತಿಭಾನಿರ್ಮಿತವಾದ ಕಾವ್ಯವನ್ನೂ ಓದುವಾಗಲೂ ಕೇಳುವಾಗಲೂ ಸಹೃದಯನು ತನ್ನ ಮನಸ್ಸಿನಲ್ಲಿಯೇ ಸಕಲವನ್ನು ಕಲ್ಪಿಸಿಕೊಳ್ಳುತ್ತಾನೆ. ಕಾಲ್ಪನಿಕವಾದ ಮಾನಸಸೃಷ್ಟಿ ಬಾಹ್ಯಸೃಷ್ಟಿಗಿಂತ ಮನೋಹರವಾಗಬಲ್ಲದು. ನಾಟಕದಲ್ಲಿ ನಟರ ವೇಷಭೂಷಾದಿಗಳೂ ಅಭಿನಯವೂ ಸಮೀಚೀನವಾಗದಿದ್ದಲ್ಲಿ ಸಾಮಾಜಿಕನಿಗೆ ರಸಚರ್ವಣೆಯ ಆನಂದ ದೊರೆಯದು. ಬದಲಾಗಿ ರಸಭಂಗವಾಗುವ ಸಂದರ್ಭಗಳೇ ಅಧಿಕ. ಈ ದೋಷವು ಶ್ರವ್ಯಕಾವ್ಯದಲ್ಲಿಲ್ಲ. ನಾಟಕವನ್ನು ಓದಿಕೊಂಡರೆ ಅದು ಶ್ರವ್ಯಕಾವ್ಯವೇ.

ರಸಸ್ವರೂಪ :– ಭರತನು ಶೃಂಗಾರಾದಿರಸಗಳನ್ನು ಭೋಜ್ಯವಸ್ತುಗಳಲ್ಲಿರುವ ಮಾಧುರ್ಯಾದಿ ರಸಗಳಿಗೆ ಹೋಲಿಸಿದ್ದಾನೆ. ಮಸಾಲೆ – ಮುಂತಾದ ನಾನಾದ್ರವ್ಯಗಳಿಂದ ಸಂಮಿಶ್ರವಾದ ಅನ್ನವನ್ನು ಊಟ ಮಾಡುವಾಗ ಭೋಜನರಸವನ್ನು ಆಸ್ವಾದಿಸಿ ಹೇಗೆ ಆನಂದಿಸುವರೋ ಹಾಗೆ ವಿವಿಧ ಭಾವಗಳಿಂದ ಸಂಮಿಶ್ರವಾದ ಕಾವ್ಯರಸವನ್ನು ಆಸ್ವಾದಿಸಿ ಸಹೃದಯರು ಆನಂದಿಸುತ್ತಾರೆ ಎಂದಿದ್ದಾನೆ. ಆಸ್ವಾದ್ಯವಾದದ್ದು ರಸ. ರಸ – ಆಸ್ವಾದನ ಸ್ನೇಹನಯೋಃ ಎಂಬ ಧಾತುವಿನಿಂದ ರಸಶಬ್ದವು ನಿಷ್ಪನ್ನವಾಗಿದೆ. ವಿಭಾವಾದಿಗಳಿಂದ ರಸ ನಿಷ್ಪತ್ತಿಯಾಗುವ ಪ್ರಕಾರದಲ್ಲಿ ಮತಭೇದ ಉಂಟು. ಜಗನ್ನಾಥನು ರಸಗಂಗಾಧರದಲ್ಲಿ 11 ಮತಗಳನ್ನು ವಿವರಿಸಿ, ಅವುಗಳಲ್ಲಿ 3 ಮತಗಳು ಭರತಸೂತ್ರಕ್ಕೆ ವಿರುದ್ಧವಾಗಿವೆಯೆಂದಿದ್ದಾನೆ. ಕಾವ್ಯಪ್ರಕಾಶದಲ್ಲಿ ಮಮ್ಮಟನು ಭಟ್ಟಲೋಲ್ಲಟ, ಶ್ರೀಶಂಕುಕ, ಭಟ್ಟನಾಯಕ ಮತ್ತು ಅಭಿನವಗುಪ್ತ – ಇವರ ನಾಲ್ಕು ಸಿದ್ಧಾಂತಗಳನ್ನು ವಿವರಿಸಿದ್ದಾನೆ. ಇವುಗಳಲ್ಲಿ ಅಭಿನವಗುಪ್ತನ ಸಿದ್ಧಾಂತವೇ ಉತ್ತಮವೆಂದು ಅಲಂಕಾರಶಾಸ್ತ್ರದಲ್ಲಿ ಗಣ್ಯವಾಗಿದೆ. ಈ ಸಿದ್ಧಾಂತವನ್ನನುಸರಿಸಿ ರಸನಿಷ್ಪತ್ತಿಯನ್ನು ಸಂಕ್ಷೇಪವಾಗಿ ತಿಳಿಸಲು ಇಲ್ಲಿ ಯತ್ನಿಸಿದೆ :

ಮೊದಲನೆಯದಾಗಿ ರಸವನ್ನು ಆಸ್ವಾದಿಸತಕ್ಕವನಿಗೆ ಒಂದು ಅಧಿಕಾರಸಂಪತ್ತು ಇರಬೇಕು. ಅವನು ಲೋಕವ್ಯವಹಾರವನ್ನು ತಿಳಿದವನೂ ಕಾವ್ಯಾನುಶೀಲನ ಪರಿಷ್ಕೃತಬುದ್ಧಿಯೂ ಆಗಿರಬೇಕು. ರತಿ, ಶೋಕ, ಕ್ರೋಧ – ಮೊದಲಾದ ಚಿತ್ತವೃತ್ತಿಗಳಿಗೆ ಕಾರಣಗಳೇನೆಂಬುದನ್ನು ಅವು ಉದ್ಬುದ್ಧವಾದಾಗ ಸ್ತ್ರೀಪುರುಷರ ನಡೆನುಡಿಗಳು ಹೇಗೆ ವರ್ತಿಸುತ್ತವೆಯೆಂಬುದನ್ನು ಊಹಿಸುವ ನೈಪುಣ್ಯ ಅವನಿಗಿರಬೇಕು. ಅಂಥ ಸಹೃದಯನು ನಾಟಕವನ್ನು ನೋಡುವಾಗ ಅಥವಾ ಕಾವ್ಯವನ್ನು ಓದುವಾಗ ತನ್ಮಯೀಭಾವದಿಂದ ರಸವನ್ನು ಆಸ್ವಾದಿಸಲು ಸಮರ್ಥನಾಗುತ್ತಾನೆ. ಅವನ ಹೃದಯದಲ್ಲಿ ರತ್ಯಾದಿಭಾವಗಳು ಸೂಕ್ಷ್ಮವಾಗಿ ವಾಸನಾರೂಪದಿಂದ ಇದ್ದೇ ಇರುತ್ತವೆ. ಕವಿನೈಪುಣ್ಯದಿಂದ ವರ್ಣಿತವಾದ ವಿಭಾವಾದಿಗಳಿಂದ ಸಹೃದಯನ ಸ್ಥಾಯಿಭಾವವು

ಉದ್ಬುದ್ಧವಾಗುತ್ತದೆ. ದುಷ್ಯಂತನು ಶಕುಂತಲೆಯನ್ನು ನೋಡಿದಾಗ ಅವಳ ಸೌಂದರ್ಯದಿಂದ ಮುಗ್ಧನಾದನೆಂದೂ ಅವನಲ್ಲಿ ಹರ್ಷ, ಔತ್ಸುಕ್ಯ ಮುಂತಾದ ಭಾವಗಳು ಪ್ರಕಟವಾದವೆಂದೂ ಕವಿಯು ವರ್ಣಿಸಿರುತ್ತಾನೆ. ಕುಶಲನಾದ ಸಹೃದಯನು ದುಷ್ಯಂತನಿಗೆ ಶಕುಂತಲೆಯಲ್ಲಿ ಅನುರಾಗ ಉಂಟಾಗಿದೆಯೆಂದು ತಿಳಿಯಬಲ್ಲನು. ಆ ಸಮಯದಲ್ಲಿ ದುಷ್ಯಂತನ ರತಿಭಾವಕ್ಕೆ ಸಂವಾದಿಯಾದ ರತಿಸ್ಥಾಯಿಯು ಸಹೃದಯನಲ್ಲಿ ಅಭಿವ್ಯಕ್ತವಾಗುವುದು-ಎಂದರೆ ಕಾವ್ಯದ ವ್ಯಂಜನಾವ್ಯಾಪಾರ ಮಹಿಮೆಯಿಂದ ಅನುಭವ ಗೋಚರವಾಗುವುದು. ಈ ಅನುಭವದಲ್ಲಿ ರತ್ಯಾದಿಸ್ಥಾಯಿ ಭಾವವು ವಿಭಾವಾದಿಗಳಿಂದ ಸಂವಲಿತವಾಗಿಯೇ ತೋರುತ್ತದೆ. ಈ ಅನುಭವವೇ ರಸ. ಇದು ಆನಂದಾತ್ಮಕವಾದದ್ದು.

ಇದರಮೇಲೆ ಅನೇಕ ಶಂಕೆಗಳು ತಲೆದೋರುತ್ತವೆ. ರಾಮ, ಸೀತೆ, ದುಷ್ಯಂತ, ಶಕುಂತಲೆ – ಮೊದಲಾದವರು ಕಾಲಾಂತರದಲ್ಲಿ ದೇಶಾಂತರದಲ್ಲಿ ಇದ್ದವರು. ಕೆಲವರು ಕವಿಕಲ್ಪಿತ ವ್ಯಕ್ತಿಗಳೂ ಆಗಿರಬಹುದು. ಬೆಳದಿಂಗಳು ಮುಂತಾದ ಉದ್ದೀಪನಗಳೂ ಸಹ ವಾಸ್ತವವಾಗಿ ಇಲ್ಲ. ಅವು ಕವಿಕಲ್ಪಿತಗಳಾಗಿ ಮನಸ್ಸಿನಲ್ಲಿ ಸುಳಿದರೂ ರಾಮಾದಿವ್ಯಕ್ತಿಗಳಿಗೆ ಉದ್ದೀಪಕಗಳೇ ಹೊರತು ಸಾಮಾಜಿಕರಿಗಲ್ಲ. ಅಲ್ಲದೆ ಶಕುಂತಲೆಯು ದುಷ್ಯಂತನಿಗೆ ಕಾಮನೀಯಳೇ ಹೊರತು ನಮಗಲ್ಲ. ಮತ್ತು ರಾಮಾಯಣದ ಸೀತೆ, ಕುಮಾರಸಂಭವದ ಪಾರ್ವತಿ ಪೂಜ್ಯರೆಂಬ ಭಾವನೆ ಜಾಗ್ರತವಾಗಿರುವಾಗ ಅವರ ವಿಷಯದಲ್ಲಿ ರತಿಯು ಎಂದಿಗಾದರೂ ಉದ್ಭವಿಸೀತೆ ? ಇತ್ಯಾದಿ.

ಈ ಶಂಕೆಗಳಿಗೆ ಸಮಾಧಾನವೇನೆಂದರೆ, ಅನುಭವಬಲದಿಂದ ಕಾವ್ಯವ್ಯಾಪಾರದಲ್ಲಿ ಒಂದು ಅಸಾಧಾರಣವಾದ ಸಾಮರ್ಥ್ಯವನ್ನು ಒಪ್ಪಬೇಕು. ಈ ಕಾವ್ಯವ್ಯಾಪಾರವೇ ವ್ಯಂಜನಾವೃತ್ತಿ. ಮೊದಲು ಅಭಿಧಾವ್ಯಾಪಾರದಿಂದ ಇವನು ರಾಮ, ಇವಳು ಸೀತೆ, ಇವಳು ಸ್ತ್ರೀ, ಇವನು ವೃದ್ಧ - ಇತ್ಯಾದಿ ವಾಚ್ಯಾರ್ಥವು ಉಪಸ್ಥಿತವಾಗುತ್ತದೆ. ಅನಂತರ ವ್ಯಂಜನಾವೃತ್ತಿಯು ಸಹೃದಯತಾ ಸಹಕಾರದಿಂದ ಕಾರ್ಯೋನ್ಮುಖವಾಗಿ ರಾಮಾದಿಗಳ ರಾಮತ್ವಾದಿಗಳನ್ನೂ ದೇಶಕಾಲ ಸಂಬಂಧಗಳನ್ನು ಕಳಚಿ ಕೇವಲ ವಿಭಾವಾದಿ ರೂಪದಿಂದ ಅವರು ಗೋಚರಿಸುವಂತೆ ಮಾಡುತ್ತದೆ. ಆ ವ್ಯಕ್ತಿಗಳು ದೇಶಾಂತರದಲ್ಲಿ ಕಾಲಾಂತರದಲ್ಲಿ ಇದ್ದರೆಂಬ ಭಾವನೆ ಅಳಿಸಿಹೋಗುತ್ತದೆ. ನಾನು ರಾಮನಲ್ಲ, ನಾನು ಸೀತೆಯಲ್ಲ, ನಾನು ತಟಸ್ಥ ಎಂಬ ಭೇದಜ್ಞಾನವೂ ಉಳಿಯುವುದಿಲ್ಲ. ಭಾವನೋಪನೀತಳಾದ ಸೀತೆ ಆ ಸಮಯದಲ್ಲಿ ಸೀತೆಯಾಗಿ ತೋರದೆ 'ಕಾಂತೆ'ಯ ರೂಪದಲ್ಲಿಯೇ ಸಹೃದಯನಿಗೆ ಗೋಚರಿಸುವಳು. ರಾಮನಲ್ಲಿ ಸಂಭವಿಸಿದ ರತಿ, ಭೀಮನಲ್ಲಿ ಸಂಭವಿಸಿದ ಕ್ರೋಧ – ಅವರಿಬ್ಬರಿಗೆ

ಮಾತ್ರ ಸಂಬಂಧಿಸಿದ್ದೆಂಬ ಭಾವವೂ ಉಳಿಯುವುದಿಲ್ಲ. ಹೀಗೆ ವಿಭಾವಾದಿಗಳ ದೇಶಕಾಲ ಸಂಬಂಧಾದಿಪರಿತ್ಯಾಗಕ್ಕೆ 'ಸಾಧಾರಣೀಕರಣ'* ಎಂದು ಹೆಸರು. ವಿಭಾವಾದಿಗಳು ಸಾಧಾರಣೀಕೃತವಾದಾಗ ಶಕುಂತಲೆಯನ್ನು ನೋಡಿ ದುಷ್ಯಂತನಲ್ಲಿ ರತಿಯು ಅಭಿವ್ಯಕ್ತವಾಗುವಂತೆ ಸಹೃದಯನಲ್ಲಿಯೂ ಅಭಿವ್ಯಕ್ತವಾಗುತ್ತದೆ. ಏಕೆಂದರೆ, ವಿಭಾವಾದಿಗಳು ಸಹೃದಯನಿಗೆ ಸಂಬಂಧಿಸಿದವೂ ಆಗಿರುತ್ತವೆ.

ರಸಗಂಗಾಧರದಲ್ಲಿ ಜಗನ್ನಾಥನು 'ನವ್ಯಾಸ್ತು' ಎಂದು ಆರಂಭಿಸಿ ನವ್ಯರ ಮತವನ್ನು ಉದಾಹರಿಸಿದ್ದಾನೆ. ದುಷ್ಯಂತನಿಗೆ ಶಕುಂತಲೆಯಲ್ಲಿ ರತಿಭಾವ ಉದಯಿಸಿದೆಯೆಂದು ವ್ಯಂಜನಾವ್ಯಾಪಾರದಿಂದ ಮೊದಲು ಗೊತ್ತಾಗುತ್ತದೆ. ಅನಂತರ ಸಾಮಾಜಿಕನಲ್ಲಿ ಸಹೃದಯತಾಬಲದಿಂದ ಭಾವನಾ ಎಂಬ ಮನೋವ್ಯಾಪಾರ ಉಂಟಾಗುತ್ತದೆ. ಇದರಿಂದ ಸಾಮಾಜಿಕನಲ್ಲಿ ನಾನೇ ದುಷ್ಯಂತ ಎಂಬ ಅಭೇದ ಬುದ್ಧಿಯುಂಟಾಗುತ್ತದೆ. ಇದು ಭ್ರಮೆಯೇ. ಆದ್ದರಿಂದಲೇ ಆತನಲ್ಲಿ ಶಕುಂತಲಾ ವಿಷಯಕವಾದ ರತಿ ಉದ್ಬುದ್ಧವಾಗುತ್ತದೆ. ಭ್ರಮಜನಕವಾದ ಈ ಭಾವನಾರೂಪವಾದ ದೋಷವಿಲ್ಲದೆ ವಿಭಾವಾದಿಗಳ ಸಾಧಾರಣೀಕರಣ ಸಾಧ್ಯವಾಗದು. ರತಿ ಭಾವವು ಅಭಿವ್ಯಕ್ತವಾಗುವುದು ಭಾವನೋಪನೀತನಾದ ದುಷ್ಯಂತನಲ್ಲಿಯೇ. ನಾನು ದುಷ್ಯಂತ ಎಂಬ ಅಭೇದಬುದ್ಧಿಯು ಭಾವನಾಖ್ಯದೋಷದಿಂದ ಉತ್ಪನ್ನವಾದೊಡನೆ ದುಷ್ಯಂತನ ರತಿಯು ನನ್ನದೇ ಎಂಬ ಭ್ರಮೆಯೊದಗಿ, ಸಂವಾದಿಯಾದ ಭಾವವು ಸಹೃದಯನಲ್ಲಿ ಜಾಗೃತವಾಗುತ್ತದೆ. ಅದು ವಾಸ್ತವವಾಗಿ ವಿಭಾವಾದಿವ್ಯಂಗ್ಯವಲ್ಲದಿದ್ದರೂ ದುಷ್ಯಂತನಲ್ಲಿ ವ್ಯಂಗ್ಯವಾಗಿದ್ದ ಭಾವದೊಡನೆ ಅಭಿನ್ನವಾಗಿ ತೋರುವುದರಿಂದ ವ್ಯಂಗ್ಯ ಎಂದು ಹೇಳುತ್ತಾರೆ.

ಜಗನ್ನಾಥನು ಹೇಳಿದ ಈ ಸಿದ್ಧಾಂತವು ವಿದ್ವಾಂಸರ ಪರಿಶೀಲನೆಗೆ ಅರ್ಹವಾದದ್ದು. ಅಭಿನವಗುಪ್ತನ ಸಾಧಾರಣೀಕರಣ ಸಿದ್ಧಾಂತದಲ್ಲಿ ಸಂಭವಿಸುವ ಕೆಲವು ಶಂಕೆಗಳಿಗೆ ಇಲ್ಲಿ ಉತ್ತರ ಉಂಟು. ಸಾಮಾಜಿಕರಲ್ಲಿ ಸ್ತ್ರೀಯರೂ ಇರುತ್ತಾರಷ್ಟೆ. ನಾಟಕದಲ್ಲಾಗಲಿ ಕಾವ್ಯದಲ್ಲಾಗಲಿ ಸಾಧಾರಣೀಕೃತಳಾದ ಶಕುಂತಲೆ ಕಾಮಿನೀ ರೂಪದಿಂದ ಉಪಸ್ಥಿತಳಾದರೂ ಸ್ತ್ರೀಯರಿಗೆ ರತಿಯು ಉದ್ಬೋಧವಾಗುವುದು ಹೇಗೆ ? ದುಷ್ಯಂತವಿಷಯಕವಾದ ಶಕುಂತಲೆಯ ರತಿಯೂ ಪುರುಷರಿಗೆ ಚರ್ವಣಾ ವಿಷಯವಾಗಬೇಕಷ್ಟೆ. ದುಷ್ಯಂತನು ಸಾಧಾರಣೀಕೃತನಾಗಿ ಧೀರೋದಾತ್ತನೂ

---

* ವ್ಯಕ್ತಿಗಳಾಗಿ, ಪಾತ್ರಗಳಾಗಿ ಇವರು ಇಂಥಿಂಥವರು ಎಂದು ಭಾವಿಸಿದರೂ ಆಯಾ ಸನ್ನಿವೇಶದಲ್ಲಿ ಅವರಲ್ಲಿ ತೋರುವ ವ್ಯಾಪಾರ, ನುಡಿ, ನಡೆ, ಮನುಷ್ಯಸಾಮಾನ್ಯ. ಅದರಲ್ಲಿಯೂ ಅವರಿಗೆ ಸಮಾನವಾದ ಸಂಸ್ಕಾರ, ಅಂತಃಕರಣ ಉಳ್ಳವರಿಗೆ ವಿಶೇಷವಾಗಿ. ಭಾವನೆ ಹಾಗೆ, ಆಗ ಅದು ನಿಜವಾದ ಪರಿಸ್ಥಿತಿಯ ರೂಪಣ ಎಂದು ಮುಂದಟ್ಟಾಗುತ್ತದೆ — ಸಂ.

ಸುಂದರನೂ ಆದ ಪುರುಷನಾಗಿ ಉಪಸ್ಥಿತನಾದಾಗ, ಪುರುಷರಿಗೆ ಅವನಲ್ಲಿ ರತಿಯು ಉದ್ಬುದ್ಧವಾಗುವುದು ಹೇಗೆ ? ಕಾವ್ಯಾಸ್ವಾದದಲ್ಲಿ ತಲ್ಲೀನರಾದಾಗ ನಾವು ತಟಸ್ಥರಾಗಿ ನಾಯಕನಾಯಿಕೆಯರನ್ನು ಗ್ರಹಿಸುವುದಿಲ್ಲ. ದುಷ್ಯಂತನ ಕಣ್ಣುಗಳಿಂದ ಶಕುಂತಲೆಯನ್ನು ನೋಡುತ್ತೇವೆ. ಶಕುಂತಲೆಯ ಕಣ್ಣುಗಳಿಂದ ದುಷ್ಯಂತನನ್ನು ನೋಡುತ್ತೇವೆ. ಪ್ರತಿಯೊಂದು ಪಾತ್ರದೊಡನೆಯೂ ನಾವು ತಾದಾತ್ಮ್ಯವನ್ನು ಪಡೆದಿರುತ್ತೇವೆ. ಆದ್ದರಿಂದ ಸಹೃದಯನಿಗೆ ದುಷ್ಯಂತಾದಿಗಳೊಡನೆ ಅಭೇದಬುದ್ಧಿಯುಂಟಾಗುತ್ತದೆಯೆಂಬ ಈ ಸಿದ್ಧಾಂತ ಹೆಚ್ಚಿನ ವಿಮರ್ಶೆಗೆ ಅರ್ಹವಾದದ್ದು.

ಸಾಹಿತ್ಯದರ್ಪಣದಲ್ಲಿ ವಿಶ್ವನಾಥನು ವಿಭಾವಾದಿಗಳ ಸಾಧಾರಣೀಕರಣ ವ್ಯಾಪಾರದಿಂದಲೇ ಸಾಮಾಜಿಕನಿಗೆ ಈ ಅಭೇದಬುದ್ಧಿಯುಂಟಾಗುತ್ತದೆ ಎಂದು ಹೇಳಿದ್ದಾನೆ (ಸಾ. ದ. 3 – 9). ಈ ವ್ಯಾಪಾರವು ವಂಜನಾವೃತ್ತಿಯೇ. ವ್ಯಂಜನಾವೃತ್ತಿಗೆ ಅಜ್ಞಾತಾರ್ಥವನ್ನು ಬೋಧಿಸುವ ಸಾಮರ್ಥ್ಯವಿದೆಯೇ ಹೊರತು, ಜ್ಞಾತಾರ್ಥದಲ್ಲಿ ಏಕಾಂಶವನ್ನು ತೊಲಗಿಸಿ ಸಾಧಾರಣೀಕರಣ ಮಾಡುವ ಸಾಮರ್ಥ್ಯವಿದೆಯೇ ಎಂಬುದು ವಿಚಾರಣೀಯ. ಭ್ರಮೆಯಿಂದ ಸಾಧಾರಣೀಕರಣವಾಗುತ್ತದೆ ಎಂದರೆ ಬಾಧಕವಿಲ್ಲ.

ಏಕಾಗ್ರತೆಯಿಂದ ಆಸ್ವಾದ್ಯವಾಗುವ ಭಾವವೇ ರಸ. ಭಾವವು ವಿಭಾವಾದಿಗಳಿಂದ ಸಂವಲಿತವಾಗಿಯೇ ಗೋಚರಿಸುವುದು. ಅವು ಲಯಿಸಿದೊಡನೆ ರಸವೂ ಲಯಿಸುವುದು. ಬೆಲ್ಲ, ನಿಂಬೆಹುಳಿ, ಏಲಕ್ಕಿ – ಮುಂತಾದವುಗಳಿಂದ ಸಿದ್ಧವಾದ ಪಾನಕದಂತೆ ವಿಭಾವಾದಿಸಂವಲಿತವಾದ ರಸದಲ್ಲಿ ಅಖಂಡವಾದ ರುಚಿ ಗೋಚರಿಸುತ್ತದೆ. ರಸಾಸ್ವಾದದಿಂದಾಗುವ ಆನಂದ ಲೋಕೋತ್ತರವಾದುದು. ಅದು ಬ್ರಹ್ಮಾನಂದ ಸೋದರ. ರಸದಿಂದ ಆನಂದವಾಗುತ್ತದೆಯೆಂಬ ನುಡಿ ವ್ಯವಹಾರದಲ್ಲಿ; ಸಿದ್ಧಾಂತದಲ್ಲಾದರೊ ರಸವೇ ಆನಂದ. ಇದು ಚಿತ್ (ಶುದ್ಧಜ್ಞಾನ) ಸ್ವರೂಪ. ಬ್ರಹ್ಮಾನಂದದಲ್ಲಿ ಜ್ಞಾನವು ನಿರ್ವಿಷಯವಾಗಿರುತ್ತದೆಯೆಂದೂ ರಸಾನಂದದಲ್ಲಿ ವಿಭಾವಾದಿಗಳು ಗೋಚರಿಸುವುದರಿಂದ ಸವಿಷಯಕವಾಗಿರುತ್ತದೆಯೆಂದೂ ಭೇದವನ್ನು ಹೇಳುತ್ತಾರೆ. ಆದ್ದರಿಂದ ಸ್ಥಾಯಿವಿಶಿಷ್ಟವಾದ ಚಿತ್ ಎಂಬುದೇ ರಸವೆಂದು ಶಾಸ್ತ್ರಕಾರರ ಪ್ರಕ್ರಿಯೆ.

ರಸವು ಯಾವ ಸಂದರ್ಭದಲ್ಲಿಯೂ ವಾಚ್ಯವಾಗದು. ಶೃಂಗಾರಾದಿಶಬ್ದಗಳನ್ನಾಗಲಿ ರತಿ, ಕ್ರೋಧ ಮುಂತಾದ ಪದಗಳನ್ನು ಉಪಯೋಗಿಸಿದರಾಗಲಿ ವಿಭಾವಾದಿಗಳಿಲ್ಲದಿದ್ದರೆ ರಸವು ಗೋಚರಿಸುವುದಿಲ್ಲ. ವಿಭಾವಾದಿಗಳ ವರ್ಣನೆ ಇದ್ದರೆ ಶೃಂಗಾರಾದಿ ಶಬ್ದಗಳಿಲ್ಲದಿದ್ದರೂ ಅದು ಸ್ಫುರಿಸುತ್ತದೆ. ಆದ್ದರಿಂದ ರಸವು ಸದಾ ವ್ಯಂಗ್ಯವಾಗಿಯೇ ಗೋಚರಿಸುತ್ತದೆ.

ಈಗ ಕೆಲವು ಉದಾಹರಣೆಗಳನ್ನು ನೋಡೋಣ –

1. **ಶೃಂಗಾರ :**

ಶಯಿತಾ ಸವಿಧೇಽಪ್ಯನೀಶ್ವರಾ ಸಫಲೀಕರ್ತುಮಹೋ ಮನೋರಥಾನ್
ದಯಿತಾ ದಯಿತಾನನಾಂಬುಜಂ ದರಮೀಲನ್ನಯನಾ ನಿರೀಕ್ಷತೇ

ರಸಗಂಗಾಧರ, ಪುಟ 12

'(ಇನಿಯನ) ಸನಿಹದಲ್ಲಿ ಮಲಗಿದ್ದರೂ ಆ ದಯಿತೆ, ತನ್ನ ಮನದ ಬಯಕೆಗಳನ್ನು ಪೂರೈಸಿಕೊಳ್ಳಲು ಅಸಮರ್ಥಳಾಗಿ, ಆಹಾ ! ಕಣ್ಣುಗಳನ್ನು ಅರೆಮುಚ್ಚಿ ಅವನ ಮುಖಕಮಲವನ್ನು ನೋಡುತ್ತಲಿರುವಳು'

ಇಲ್ಲಿ ಇನಿಯನು ಆಲಂಬನವಿಭಾವ. 'ಸನಿಹದಲ್ಲಿ ಮಲಗಿದ್ದರೂ' ಎಂಬುದರಿಂದ ಏಕಾಂತ ಸ್ಥಳವೆಂಬುದು ಆಕ್ಷಿಪ್ತವಾಗುತ್ತದೆ. ಅದು ಉದ್ದೀಪನವಿಭಾವ. 'ನೋಡುವುದು' ಅನುಭಾವ. ಕಣ್ಣುಗಳನ್ನು 'ಅರೆಮುಚ್ಚಿ' ಎಂಬ ಮಾತಿನಿಂದ ನಾಯಿಕೆಯ ಲಜ್ಜೆಯೂ 'ನೋಡುತ್ತಲಿರುವಳು' ಎಂಬ ನುಡಿಯಿಂದ ಆಕೆಯ ಔತ್ಸುಕ್ಯವೂ ಅಭಿವ್ಯಕ್ತವಾಗುತ್ತಿವೆ. ಲಜ್ಜೆ, ಔತ್ಸುಕ್ಯಗಳು ಸಂಚಾರಿಭಾವಗಳು. ಈ ವಿಭಾವಾದಿಗಳ ಸಂಯೋಗದಿಂದ ನಾಯಿಕೆಯ ರತಿಸ್ಥಾಯಿಭಾವವು ವ್ಯಂಗ್ಯವಾಗುತ್ತದೆ.

ವಿಭಾವಾದಿಗಳೆಲ್ಲವನ್ನೂ ಕವಿಯು ವರ್ಣಿಸಿರಬೇಕೆಂಬ ನಿಯಮವೇನೂ ಇಲ್ಲ. ಒಂದೆರಡು ಅಂಶಗಳು ನಿರೂಪಿತವಾಗದಿದ್ದರೂ ರಸಿಕನು ಅವನ್ನು ಊಹಿಸಿಕೊಳ್ಳಬಲ್ಲನು. ಶೃಂಗಾರದಲ್ಲಿ ಸಂಯೋಗ, ವಿಪ್ರಲಂಭ ಎಂದು ಎರಡು ವಿಧ. ನಾವು ಒಟ್ಟಿಗಿದ್ದೇವೆ ಎಂಬ ಭಾವ ನಾಯಕನಾಯಿಕೆಯರಿಗಿದ್ದಾಗ ಸಂಯೋಗಶೃಂಗಾರ. 'ಅಗಲಿದ್ದೇವೆ' ಎಂಬ ಭಾವವಿದ್ದಾಗ ವಿಪ್ರಲಂಭಶೃಂಗಾರ. ಗುರುದೇವತಾ ಪುತ್ರಮಿತ್ರಾದಿಗಳಲ್ಲಿರುವ ಪ್ರೇಮವು ಸಂಚಾರಿಭಾವವೆಂದೂ ಅದು ರಸವೆನಿಸದೆಂದೂ ಹೇಳಿದ್ದಾರೆ. ಪ್ರೇಮದಲ್ಲಿ 'ಕಾಮ'ದ ಸ್ಪರ್ಶವಿದ್ದರೆ ರಸವಾಗುವುದೆಂದೂ ಇಲ್ಲದಿದ್ದಲ್ಲಿ ಭಾವಮಾತ್ರವೇ ಎಂದೂ ವಿಭಾಗಿಸಬಹುದು. ಭಕ್ತಿ, ವಾತ್ಸಲ್ಯ, ಸ್ನೇಹ – ಇವು ರಸಗಳಾಗಬಲ್ಲವೆಂದೂ ಅಭಿಪ್ರಾಯ ಭೇದಗಳಿವೆ.

2. **ಹಾಸ್ಯ :**

ವಿಕೃತವೇಷ, ವಿಷಯಚಾಪಲ್ಯ, ಕುಚೇಷ್ಟೆ, ಕುತ್ಸಿತವಾದ ನುಡಿ, ಅಂಗವೈಕಲ್ಯ ಮುಂತಾದವುಗಳಿಂದ ಹಾಸ್ಯ ಹುಟ್ಟುವುದು. 'ಶೃಂಗಾರ ಪ್ರಭವೋ

ಹಾಸ್ಯಃ' ಎಂದು ಆಲಂಕಾರಿಕರು ಹೇಳಿದ್ದರೂ ಹಾಸ್ಯದಲ್ಲಿ ಶೃಂಗಾರವೇ ಮೂಲವಾಗಿರುತ್ತದೆಯೆಂದು ಹೇಳುವುದು ಕಷ್ಟ. ಅಭಿನವಗುಪ್ತನು ಅಭಿನವ ಭಾರತೀ ವ್ಯಾಖ್ಯಾನದಲ್ಲಿ 'ಅನೌಚಿತ್ಯ ಪ್ರವೃತ್ತಿ ಕೃತಮೇವ ಹಿ ಹಾಸ್ಯವಿಭಾವತ್ವಂ' ಎಂದಿದ್ದಾನೆ.* ಹಾಸ್ಯದ ವಿಭಾವದಲ್ಲಿ ಅನೌಚಿತ್ಯವಿರುತ್ತದೆಯೆಂದು ಆತನ ಆಶಯ. ಅನೌಚಿತ್ಯವೆಂದರೇನೆಂಬುದು ಸ್ಪಷ್ಟವಾಗಿಲ್ಲ. ಹಾಸ್ಯದ ಮೀಮಾಂಸೆ ನಮ್ಮ ಲಕ್ಷಣ ಗ್ರಂಥಗಳಲ್ಲಿ ಸಾಕಷ್ಟು ಬೆಳೆದಿಲ್ಲ.

### 3. ಕರುಣ :

ಇದರಲ್ಲಿ ಶೋಕವು ಸ್ಥಾಯಿ. ದಯೆಯಲ್ಲ. ಇದು ಕರುಣ ರಸ. 'ಕರುಣಾ' ರಸವಲ್ಲ. ಪತಿಪುತ್ರಾದಿ ಬಂಧುಗಳ ಮರಣ ಆಲಂಬನ. ಹರಿಶ್ಚಂದ್ರಕಾವ್ಯದಲ್ಲಿ ರೋಹಿತಾಶ್ವನ ಮರಣದಿಂದ ಶೋಕಾಕ್ರಾಂತಳಾದ ಚಂದ್ರಮತಿಯ ವಿಲಾಪ :

ಹಡೆದೊಡಲು ಹುಡಿಯಾಯ್ತು ಮಗನೆ ಮಗನುಂಟೆಂದು
ಕಡಗಿ ಹೆಚ್ಚುವ ಮನಂ ಹೊತ್ತಿ ಹೊಗೆಯಿತ್ತು ಬಿಡ
ದಡರಿ ನಿಟ್ಟಿಸಿ ನಲಿವ ದಿಟ್ಟಿ ಕೆಟ್ಟವು ಸೋಂಕಿ ಪುಳಕಿಸುವ ಕರಣಂಗಳು
ಕಡಿವಡೆದುವೊಸೆದು ಹೆಸರ್ಗೊಳುತಿಪ್ಪ ನಾಲಗೆಯು
ಕುಡಿ ಮುರುಟಿತೊಮ್ಮೊಮ್ಮೆ ನುಡಿಯನಾಲಿಪ ಕಿವಿಯು
ಹಡಿಗೆತ್ತುದೆಲೆ ಕಂದ ಎಂದೆನುತ್ತಿಂದುಮುಖಿ ಮರುಗಿ ಬಾಯ್ಬಿಟ್ಟಳೆಂದು

ಇಲ್ಲಿ ರೋಹಿತಾಶ್ವನ ಮರಣ ಆಲಂಬನ. ಮೃತಕಳೇವರದ ದರ್ಶನ, ಬಾಲಕನ ಗುಣಗಳ ಸ್ಮರಣೆ ಮುಂತಾದವು ಉದ್ದೀಪನ. ವಿವಿಧ ಪ್ರಕಾರದ ವಿಲಾಪ, ಅಶ್ರುಪಾತಗಳು ಅನುಭಾವ. ಗಮ್ಯವಾದ ಗ್ಲಾನಿ, ಚಿಂತೆ, ವಿಷಾದ, ದೈನ್ಯದಿಗಳು ಸಂಚಾರಿ.

ಪ್ರಿಯಪ್ರೇಯಸಿಯರ ದೀರ್ಘವಿಯೋಗದಲ್ಲಿ ಶೋಕವಿದ್ದರೂ ಅದು ಸ್ಥಾಯಿಯಲ್ಲ. ಅದು ಸಂಚಾರಿಯಾಗಿ ವಿಪ್ರಲಂಭಶೃಂಗಾರದ ಪೋಷಕವಾಗುತ್ತದೆ. ಈ ಶೃಂಗಾರವನ್ನು ವಿಶ್ವನಾಥನು ಕರುಣ ವಿಪ್ರಲಂಭವೆಂದು ಕರೆದಿದ್ದಾನೆ. ಅವರಲ್ಲೊಬ್ಬರು ಮೃತರಾಗಿದ್ದರೂ ಪುನಃ ಸಮಾಗಮವಾಗುವುದೆಂಬ ಪ್ರತ್ಯಾಶೆಯಿದ್ದಾಗಲೂ ವಿಪ್ರಲಂಭಶೃಂಗಾರವೇ. ಈ ವಿಷಯವಾಗಿ ಲಾಕ್ಷಣಿಕರಲ್ಲಿ ಭಿನ್ನಾಭಿಪ್ರಾಯ ಉಂಟು.

---

* ಅಸಂಗತತೆ ಕಂಡಾಗಲೂ ಹಾಗೇ. ಮಾತಿನಲ್ಲಿ, ನುಡಿತದಲ್ಲಿ, ನುಡಿಯಲ್ಲಿ ನಡೆಯಲ್ಲಿ, ಸೂಚನೆಯಲ್ಲಿ, ಸನ್ನಿವೇಶದಲ್ಲಿ ಇದು ಕಾಣಿಸಬಹುದು — ಸಂ.

### 4. ರೌದ್ರ:

ಇದರಲ್ಲಿ ಕ್ರೋಧ ಸ್ಥಾಯಿ. ಅಪರಾಧಿ ಆಲಂಬನ. ಅವನ ಅಪರಾಧ ಉದ್ದೀಪನ. ನೇತ್ರಾರುಣ್ಯ, ಹಲ್ಲು ಕಡಿಯುವುದು, ಹುಬ್ಬು ಗಂಟಿಕ್ಕುವುದು, ಕಠೋರ ನುಡಿ, ಹೊಡೆಯುವುದು, ಕೊಲ್ಲುವುದು ಅನುಭಾವಗಳು. ಅಮರ್ಷ, ವೇಗ, ಉಗ್ರತೆ ಮೊದಲಾದವು ಸಂಚಾರಿಗಳು. ರನ್ನನ ಗದಾಯುದ್ಧದಲ್ಲಿ ಭೀಮಸೇನನು ದುರ್ಯೋಧನನನ್ನು ಗದೆಯಿಂದ ಅಪ್ಪಳಿಸುತ್ತಾನೆ :

ಇದು ಲಾಕ್ಷಾಗೇಹದಾಹಕ್ಕಿದು ವಿಷಮ ವಿಷಾನ್ನಕ್ಕಿದಾ ನಾಡ ಜೂದಿಂ
ಗಿದು ಪಾಂಚಾಲೀಪ್ರಪಂಚಕ್ಕಿದು ಕೃತಕಸಭಾಲೋಕನಭ್ರಾಂತಿಗೆಂದೋ
ವದೆ ಪೊಯ್ದುಂ ಕಾಲ್ಗಳಂ ಕೆಯ್ಗಳನಗಲ್ದುರಮಂ ಕೆನ್ನೆಯಂ ನೆತ್ತಿಯಂ ಕೋ
ಪದಿನಯ್ದುಂ ದುರ್ಣಯಕ್ಕೈದೆಡೆಯನುರುಗದಾದಂಡದಿಂ ಭೀಮಸೇನಂ

### 5. ವೀರ:

ಇದರಲ್ಲಿ ಉತ್ಸಾಹ ಸ್ಥಾಯಿ. ಉತ್ಸಾಹವು ಧೀರೋದಾತ್ತನಾಯಕನ ಚಿತ್ತವೃತ್ತಿ. ಕ್ರೋಧವು ಧೀರೋದ್ಧತನದು. ಸಾಮಾನ್ಯವಾಗಿ ಯುದ್ಧವೀರವು ರೌದ್ರದಂತೆಯೇ ತೋರಿದರೂ ಸ್ಥಾಯಿಯಾವುದೆಂದು ಆಲೋಚಿಸಿ ವೀರವೆ ಕ್ರೋಧವೆ– ಎಂಬುದನ್ನು ನಿರ್ಣಯಿಸಬೇಕು. ವೀರರಸದಲ್ಲಿ ಕ್ರೋಧವು ಸಂಚಾರಿಭಾವವಾಗಿ ವೀರರಸಕ್ಕೆ ಪೋಷಕವಾಗಬಹುದು. ಉತ್ಸಾಹವು ಪರೋಪಕಾರಾದಿ ಧರ್ಮಕಾರ್ಯ, ದಾನ ಮೊದಲಾದುವುಗಳಲ್ಲಿ ಪ್ರವರ್ತಿಸಬಹುದು. ಯುದ್ಧವೀರ, ಧರ್ಮವೀರ, ದಾನವೀರ, ದಯಾವೀರ – ಎಂದು ಕೆಲವರು ವಿಂಗಡಿಸಿದ್ದಾರೆ.

ಹೀಗೆಯೇ ಉಳಿದ ರಸಗಳು. ಒಂದು ಅಂಶವನ್ನು ಮತ್ತೊಮ್ಮೆ ಸ್ಪಷ್ಟೀಕರಿಸುವುದು ಆವಶ್ಯಕವೆನಿಸುತ್ತದೆ. ಸ್ಥಾಯಿಭಾವವು ಮೊದಲು ದುಷ್ಯಂತಾದಿನಿಷ್ಠವಾಗಿಯೇ ಅಭಿವ್ಯಕ್ತವಾಗುತ್ತದೆ. ಅದು ರಸರೂಪವನ್ನು ಹೊಂದುವುದು ಸಹೃದಯನಲ್ಲಿ ಸ್ಥಾಯಿಯು ವ್ಯಂಜನೆಯಿಂದ ಸ್ಫುರಿಸಿದರೂ ಕಾವ್ಯದಲ್ಲಿ ದುಷ್ಯಂತಾದಿ ಶಬ್ದಗಳಿರುವ ಕಾರಣ, ಅಭಿಧಾಬಲದಿಂದ ಅದರಲ್ಲಿ ದುಷ್ಯಂತಾದಿ ಸಂಬಂಧವು ತೋರಲೇಬೇಕು. ವ್ಯಂಜನಾಬಲದಿಂದ ವಿಭಾವಾದಿಗಳು ಸಾಧಾರಣೀಕೃತವಾದ್ದರಿಂದ, ಅನಂತರ ಸ್ಥಾಯಿಯಲ್ಲಿ ದುಷ್ಯಂತಾದಿ ಸಂಬಂಧಜ್ಞಾನವು ಅಳಿಸುತ್ತದೆ. ಆಗ ಸಹೃದಯನಿಗೆ ಸ್ಥಾಯಿಯು ತನ್ನದೆಂಬ ಜ್ಞಾನವಾಗುತ್ತದೆ. ಸ್ಥಾಯಿಯು ಅನ್ಯಸಂಬಂಧಿಯೆಂಬ ಅರಿವಿಲ್ಲದಿರುವುದೇ, ಅದು ತನ್ನ ಸಂಬಂಧಿಯೆಂಬ ಅರಿವಿಗೆ ನಿಮಿತ್ತ. ಈ ರತ್ಯಾದಿಭಾವವು ತನ್ನದೆಂಬ ಜ್ಞಾನವೇ ಸಹೃದಯನಿಷ್ಠವಾದ ಸ್ಥಾಯಿಯ ಅಭಿ

ವ್ಯಕ್ತಿ. ಅಭಿವ್ಯಕ್ತವಾಗುವ ಸ್ಥಾಯಿ ದುಷ್ಯಂತಾದಿನಿಷ್ಠವೆಂದೂ ಸಹೃದಯನಿಷ್ಠವೆಂದೂ ಲಕ್ಷಣಗ್ರಂಥಗಳಲ್ಲಿ ಬರೆದಿರುವುದುಂಟು. ಅದರಲ್ಲಿ ವಿರೋಧವೇನೂ ಇಲ್ಲ.

*

ರಸವು ಆನಂದೈಕರೂಪವೆನ್ನುತ್ತಾರೆ. ಅದು ವಿಗಲಿತವೇದ್ಯಾಂತರ. ರಸಾನುಭವಕಾಲದಲ್ಲಿ ಆಯಾ ರಸದ ವಿಭಾವಾದಿಗಳನ್ನು ಬಿಟ್ಟು ಇನ್ನು ಯಾವುದೂ ಅನುಭವಕ್ಕೆ ಗೋಚರಿಸದು. ಎಲ್ಲವೂ ಸುಖರೂಪವಾಗಿದ್ದರೂ ಕೆಲವು ರಸಗಳು ಕೆಲವರಿಗೆ ಅತ್ಯಂತಪ್ರಿಯವಾಗಬಹುದು. ಅವರ ಚಿತ್ತಸಂಸ್ಕಾರದ ವೈಚಿತ್ರ್ಯವೇ ಅದಕ್ಕೆ ನಿಮಿತ್ತ. ರಸಚರ್ವಣೆಯಿಂದ ಚಿತ್ತದಮೇಲೆ ವಿಶಿಷ್ಟವಾದ ಪರಿಣಾಮವಾಗುವುದು. ಧ್ವನಿಪ್ರಸ್ಥಾನದವರು ಮಾಧುರ್ಯ, ಓಜಸ್ಸು, ಪ್ರಸಾದ ಎಂಬ ಮೂರು ಗುಣಗಳನ್ನು ಅಂಗೀಕರಿಸುತ್ತಾರೆಂದು ಹಿಂದೆ ಹೇಳಿದೆ. ಇವು ರಸಧರ್ಮಗಳು. ಶೃಂಗಾರ, ಕರುಣ, ಶಾಂತಗಳಲ್ಲಿ ಚಿತ್ತವು ಆರ್ದ್ರವಾಗಿ ಕರಗಿಹೋಗುವಂತೆ ಕಾಣುತ್ತದೆ. ಹೀಗಾಗುವುದು ಅವುಗಳಲ್ಲಿರುವ ಮಾಧುರ್ಯಗುಣದಿಂದ. ವೀರ, ಬೀಭತ್ಸ,ರೌದ್ರಗಳನ್ನು ಆಸ್ವಾದಿಸುವಾಗ ಹೃದಯವು ಪ್ರಜ್ವಲಿಸುವಂತೆ ಆಗುವುದು. ಇದಕ್ಕೆ ಕಾರಣ ರಸದ ಓಜೋಗುಣ. ಅದ್ಭುತ, ಹಾಸ್ಯ, ಭಯಾನಕಗಳಲ್ಲಿ ಚಿತ್ತವು ಅರಳಿದಂತೆ ಭಾಸವಾಗುವುದು. ಇದು ಪ್ರಸಾದಗುಣದಿಂದ ಆಗುವ ಪರಿಣಾಮ. ಪ್ರಸಾದವು ಸರ್ವರಸಗಳಲ್ಲಿಯೂ ಇರುತ್ತದೆ. ಚಿತ್ತದ ವಿಕಾಸವಿಲ್ಲದೆ ರಸಾನುಭವವೇ ಇಲ್ಲ. ಈ ಮೂರು ಗುಣಗಳು ರಸದಲ್ಲಿರುವಂತೆ ಶಬ್ದಾರ್ಥಗಳಲ್ಲಿಯೂ ಇವೆಯೆಂದು ಜಗನ್ನಾಥಪಂಡಿತನು ಹೇಳುತ್ತಾನೆ.

ರಸವೆಲ್ಲವೂ ಸುಖರೂಪವೆನ್ನುವುದಾದರೆ, ಕರುಣ ಬೀಭತ್ಸ ಭಯಾನಕಗಳಲ್ಲಿ ಸುಖದ ಅನುಭವ ಆಗುವುದೆ ? ಸ್ಥಾಯಿಗಳಾದ ಶೋಕ, ಜುಗುಪ್ಸೆ, ಭಯಗಳ ಅಭಿವ್ಯಕ್ತಿಯಿಂದ ಸುಖವಾಗುತ್ತದೆಯೆನ್ನಲಾದೀತೆ ? ಲೋಕದಲ್ಲಂತೂ ಇವುಗಳಿಂದ ದುಃಖವೇ ಉತ್ಪನ್ನವಾಗುತ್ತದೆ – ಎಂಬ ಶಂಕೆಯೊಂದುಂಟು. 'ನಾಟ್ಯದರ್ಪಣ' ದಲ್ಲಿ ರಸಗಳನ್ನು ಸುಖಾತ್ಮಕ, ದುಃಖಾತ್ಮಕ ಎಂದು ವಿಂಗಡಿಸಲಾಗಿದೆ: ಶೃಂಗಾರ, ಹಾಸ್ಯ, ವೀರ, ಅದ್ಭುತ, ಶಾಂತ – ಈ ಐದು ಸುಖಾತ್ಮಕ. ಕರುಣ, ರೌದ್ರ, ಭೀಭತ್ಸ, ಭಯಾನಕ – ಈ ನಾಲ್ಕು ದುಃಖಾತ್ಮಕ ಕರುಣಾದಿ ರಸಗಳ ಆಸ್ವಾದದಲ್ಲಿ ಸುಖವು ಗೋಚರಿಸುವುದಿಲ್ಲ. ರಸಾಸ್ವಾದವು ನಿಂತಾಗ ರಸಾಭಿವ್ಯಂಜನೆಯಲ್ಲಿ ಕವಿಯು ತೋರಿಸಿದ ವರ್ಣನಾನೈಪುಣ್ಯವನ್ನು ಕಂಡು ನಮಗೆ ಚಮತ್ಕಾರ ಕಾಣು

ತ್ತದೆ. ಅದನ್ನು ಮೆಚ್ಚಿ ಆನಂದಿಸುತ್ತೇವೆ. ಪಾನಕವನ್ನು ಕುಡಿಯುವಾಗ ಮೆಣಸು ಶುಂಠಿಗಳು ಕಾರದ ರುಚಿಯಿಂದ ಪಾನಕದ ಸವಿ ಹೇಗೆ ಹೆಚ್ಚುವುದೋ ಹಾಗೆ ದುಃಖದ ಅನುಭವವಾದೊಡನೆ ಕವಿನೈಪುಣ್ಯದ ಚಮತ್ಕಾರ* ನಮಗೆ ಮಧುರ ತರವಾಗಿ ತೋರುವುದು. ಆದ್ದರಿಂದಲೇ ಶೋಕಪ್ರಸಂಗಗಳು ಅಧಿಕವಾಗಿರುವ ರಾಮಾಯಣಾದಿ ಕಾವ್ಯಗಳಲ್ಲಿ ಸಹೃದಯರು ಪ್ರವರ್ತಿಸುತ್ತಾರೆ. ಶೋಕಪ್ರಸಂಗ ಗಳಿಂದ ಸಹೃದಯರಿಗೆ ಆಗುವ ದುಃಖ ಮಿತವಾದದ್ದು, ಆನಂದ ಅಮಿತವಾದದ್ದು. ಆದ್ದರಿಂದ ಜನರು ಇಂತಹ ಕಾವ್ಯಗಳನ್ನು ಪ್ರೀತಿಸುತ್ತಾರೆ – ಎಂಬುದು ಈ ಪಕ್ಷ ದವರ ಆಶಯ.

ಕರುಣಾದಿ ರಸಗಳಲ್ಲಿಯೂ ದುಃಖದ ಸ್ಪರ್ಶವೇ ಇಲ್ಲವೆಂದೂ ಅಲ್ಲಿ ಆನಂದ ಮಾತ್ರವೇ ಆಸ್ವಾದ್ಯವೆಂದೂ ಆನಂದವರ್ಧನಾದಿಗಳ ಅಭಿಪ್ರಾಯ. ಶೋಕ, ಭಯ, ಜುಗುಪ್ಸೆಗಳು ಲೋಕದಲ್ಲಿ ದುಃಖಾತ್ಮಕವಾಗಿರುತ್ತವೆ. ಅವು ಲೌಕಿಕಭಾವ ಗಳು. ನಾವು ವಿಚಾರಿಸುತ್ತಿರುವುದು ಲೋಕೋತ್ತರವಾದ ಕಾವ್ಯಪ್ರಪಂಚದಲ್ಲಿ ರುವ ಅಲೌಕಿಕಭಾವಗಳನ್ನು. ದುಃಖವೆಂದರೆ ಆಸೆ ನಿರಾಸೆಗಳಿಂದ ಉಂಟಾಗುವ ಚಿತ್ತಚಾಂಚಲ್ಯ. ರಸಾಸ್ವಾದಸಮಯದಲ್ಲಿ ಆಸೆ ನಿರಾಸೆಗಳಾವುವೂ ಇರುವುದಿಲ್ಲ. ಚಿತ್ತವು ಏಕಾಗ್ರವಾಗಿ ಸ್ಥಾಯಿಯ ಚರ್ವಣೆಯಲ್ಲಿ ವಿಶ್ರಾಂತವಾಗಿರುವುದು. ಚಿತ್ತ ವಿಶ್ರಾಂತಿಲಕ್ಷಣವಾದ ರಸದಲ್ಲಿ ದುಃಖದ ಸ್ಪರ್ಶಲೇಶವೂ ಇರಲು ಶಕ್ಯವಿಲ್ಲ. ಇದು ಅನುಭವಸಿದ್ಧ. ಕಾವ್ಯರಸವನ್ನು ಆಸ್ವಾದಿಸುವಾಗ ಕೆಲವು ಪ್ರಸಂಗಗಳಲ್ಲಿ ರೋಮಾಂಚವಾಗಬಹುದು; ಕಣ್ಣೀರು ಹರಿಯಬಹುದು; ಅವಡುಗಚ್ಚಬಹುದು. ಇದಕ್ಕೆ ಲೌಕಿಕ ಸುಖವಾಗಲಿ, ಶೋಕವಾಗಲಿ, ಕ್ರೋಧವಾಗಲಿ ಕಾರಣವಲ್ಲ. ವಿಭಾ ವಾದಿಗಳಿಂದ ಅಭಿವ್ಯಕ್ತವಾದ ಅಲೌಕಿಕಸ್ಥಾಯಿ ನಮ್ಮದೆಂದೇ ತಿಳಿದು ಆಸ್ವಾದಿಸು ವಾಗ, ಲೌಕಿಕ ಚಿತ್ತವೃತ್ತಿಯಿಂದ ಜನಿಸುವಂತೆ ರೋಮಾಂಚಾದಿ ದೇಹಧರ್ಮಗಳು ನಮಗೆ ಅರಿವಿಲ್ಲದಂತೆ ನಡೆದು ಹೋಗುತ್ತವೆ.

ಯಾವುದೊಂದು ಪ್ರಾಚೀನಮತವನ್ನೂ ತೂಗಿ ತೂಗಿ ಒರೆಹಚ್ಚಿ ನಿರ್ಣಯಿ ಸುವ ಸಾಮರ್ಥ್ಯ ಜಗನ್ನಾಥಪಂಡಿತನದು. ಆತನೂ ಈ ವಿಷಯದಲ್ಲಿ ಒಂದು ನಿಶ್ಚಯಕ್ಕೆ ಬರಲಾರದೆ ಹೋಗಿದ್ದಾನೆ. 'ಕರುಣಪ್ರಧಾನಕಾವ್ಯದಿಂದ ಕೇವಲ ಸುಖವೇ ದೊರೆಯುವುದು ಸಹೃದಯರ ಅನುಭವಸಿದ್ಧವಾದರೆ, ಕಾವ್ಯವ್ಯಾಪಾರವು ದುಃಖವನ್ನು ಪ್ರತಿಬಂಧಿಸುತ್ತದೆ ಎನ್ನಬೇಕಾಗುವುದು. ದುಃಖವೂ ಅನುಭವಸಿದ್ಧ

* ಅಷ್ಟೇನೆ ? — ಸಂ.

ವಾದರೆ, ದುಃಖವು ಅಲ್ಪ, ಸುಖವು ಅಪರಿಮಿತ ಎಂದು ಒಪ್ಪಬೇಕಾಗುವುದು' ಎಂದು ಆತನ ಅಭಿಪ್ರಾಯ.

ಭರತನು ಎಂಟು ರಸಗಳನ್ನು ಹೇಳಿದ್ದರೂ ಶಾಂತರಸವು ಆತನಿಗೆ ಸಂಮತವಾದ್ದೆಂದು ಮುಂದಿನವರು ಚಾತುರ್ಯದಿಂದ ನಿರೂಪಿಸಿದರು. ಹೀಗೆ ನವರಸಗಳು ಪ್ರಸಿದ್ಧವಾದವು. ರತಿಯೇ ಮೊದಲಾದ ಒಂಬತ್ತು ಚಿತ್ತವೃತ್ತಿಗಳನ್ನು ಸ್ಥಾಯಿಗಳೆಂದು ಲಾಕ್ಷಣಿಕರು ಅಂಗೀಕರಿಸಿದರು. ಆದರೆ ಮಿತ್ರರ ಅನ್ಯೋನ್ಯ ಸ್ನೇಹ, ದೇವರಲ್ಲಿ ಭಕ್ತಿ, ಮಕ್ಕಳಲ್ಲಿ ತಂದೆತಾಯಿಗಳ ವಾತ್ಸಲ್ಯ – ಇವೂ ಸ್ಥಾಯಿಗಳಾಗಲಾರವೇ ? ಎಂಬ ಪ್ರಶ್ನೆಗೆ ಸರಿಯಾದ ಉತ್ತರ ದೊರೆಯದು. ಇವು ಸ್ಥಾಯಿಗಳೆಂದು ಅಂಗೀಕರಿಸಿ ಅತಿರಿಕ್ತರಸಗಳನ್ನು ಒಪ್ಪಿದ ಲಾಕ್ಷಣಿಕರೂ ಇದ್ದಾರೆ.

ರತ್ಯಾದಿ ಸ್ಥಾಯಿಯಂತೆ ಸಂಚಾರಿಭಾವವೂ ಪ್ರಧಾನವಾಗಿ ವ್ಯಕ್ತವಾಗಬಹುದು. ಅದು ಭಾವಧ್ವನಿಯೆನಿಸುತ್ತದೆ. ರಸಭಾವಗಳಂತೆ ರಸಾಭಾಸ, ಭಾವಾಭಾಸ, ಭಾವೋದಯ, ಭಾವಶಾಂತಿ, ಭಾವಸಂಧಿ, ಭಾವಶಬಲತಾ ಎಂಬ ಪ್ರಭೇದಗಳೂ ಇವೆ. ಇವೆಲ್ಲವೂ ರಸದಂತೆ ಆಸ್ವಾದ್ಯವಾಗಿ ಆಹ್ಲಾದವನ್ನುಂಟುಮಾಡತಕ್ಕವು.

## 2. ಅಲಂಕಾರಧ್ವನಿ

ರಸಾದಿಗಳಂತೆ ಉಪಮಾದ್ಯಲಂಕಾರಗಳೂ ಕಾವ್ಯದಲ್ಲಿ ಧ್ವನಿತವಾಗಬಹುದು. ರಘುರಾಜನ ದಂಡಯಾತ್ರಾವರ್ಣನೆಯಲ್ಲಿ ಬರುವ ಶ್ಲೋಕ :

ದಿಶಿ ಮಂದಾಯತೇ ತೇಜೋ ದಕ್ಷಿಣಸ್ಯಾಂ ರವೇರಪಿ
ತಸ್ಯಾಮೇವ ರಘೋಃ ಪಾಂಡ್ಯಾಃ ಪ್ರತಾಪಂ ನ ವಿಷೇಹಿರೇ
ರಘುವಂಶ, 5

'ದಕ್ಷಿಣದಿಕ್ಕಿನಲ್ಲಿ ಸೂರ್ಯನ ತೇಜಸ್ಸು ಕೂಡ ಮೃದುವಾಗುತ್ತದೆ. ಅದೇ (ದಕ್ಷಿಣ) ದಿಕ್ಕಿನಲ್ಲಿ ರಘುವಿನ ಪ್ರತಾಪವನ್ನು ಪಾಂಡ್ಯರು ಸಹಿಸಿಕೊಳ್ಳಲಾರದೆ ಹೋದರು.'

'ಸೂರ್ಯನ ದಕ್ಷಿಣಾಯನದ ಸಮಯ ಮಳೆಗಾಲ ಮತ್ತು ಚಳಿಗಾಲ. ಆಗ ಬಿಸಿಲಿನ ಬೇಗೆ ಮಂದವಾಗುತ್ತದಯಷ್ಟೆ. ಈ ಸಂದರ್ಭವನ್ನು ಕವಿಯು ಜಾಣ್ಮೆಯಿಂದ ಉಪಯೋಗಿಸಿಕೊಂಡಿದ್ದಾನೆ. ಇಲ್ಲಿ ರವಿ ಉಪಮಾನವೆಂದೂ ರಘು ಉಪಮೇಯವೆಂದೂ ಗಮ್ಯವಾಗುವುದಲ್ಲದೆ, ರವಿಯ ತೇಜಸ್ಸಿಗಿಂತ ರಘುವಿನ ಪ್ರತಾಪ ತೀವ್ರತರವಾದ್ದೆಂದು ವ್ಯಂಜನಾವೃತ್ತಿಯಿಂದ ಧ್ವನಿತವಾಗುತ್ತದೆ. ಉಪಮಾನ

ಕ್ಕಿಂತ ಉಪಮೇಯದಲ್ಲಿ ಆಧಿಕ್ಯವೊ ನ್ಯೂನತೆಯೊ ವರ್ಣಿತವಾದರೆ ವ್ಯತಿರೇಕಾಲಂಕಾರವೆನಿಸುತ್ತದೆ. ಅಲಂಕಾರಧ್ವನಿಯೆನ್ನುವುದು ಗೌಣವ್ಯವಹಾರ. ಏಕೆಂದರೆ, ಧ್ವನಿಯು ಅಲಂಕಾರ್ಯವೇ ಹೊರತು ಅಲಂಕಾರವಲ್ಲ. ಅಲಂಕಾರದ ಛಾಯೆ ಇರುವುದರಿಂದ ಅಲಂಕಾರಧ್ವನಿ ಎಂಬ ಹೆಸರು ರೂಢವಾಗಿದೆ.

### 3. ವಸ್ತುಧ್ವನಿ

ರಸಾಲಂಕಾರಗಳಿಗೆ ಅತಿರಿಕ್ತವಾದುದೆಲ್ಲವೂ ವಸ್ತು. ಶ್ರೀರಾಮನು ಋಷ್ಯಮೂಕಪರ್ವತದಲ್ಲಿ ಮಳೆಗಾಲವನ್ನು ಕಳೆದನು. ಸುಗ್ರೀವನು ಮಾತುಕೊಟ್ಟಂತೆ ಸೀತಾನ್ವೇಷಣೆಗೆ ನೆರವಾಗಲು ಬರಲಿಲ್ಲ. ಕ್ರುದ್ಧನಾದ ಶ್ರೀರಾಮನು ಸುಗ್ರೀವನಿಗೆ ಈ ಮಾತನ್ನು ತಿಳಿಸುವಂತೆ ಲಕ್ಷ್ಮಣನಿಗೆ ಹೇಳುತ್ತಾನೆ :

ನ ಚ ಸಂಕುಚಿತಃ ಪಂಥಾ ಯೇನ ವಾಲೀ ಹತೋ ಗತಃ

ಕಿಷ್ಕಿಂಧಾ XXX – 81

'(ನನ್ನಿಂದ) ಹತನಾದ ವಾಲಿ ಯಾವ ದಾರಿಯನ್ನು ಹಿಡಿದು ಹೋದನೋ ಆ ದಾರಿ (ನೀನು ಹಿಡಿಸದಷ್ಟು) ಇಕ್ಕಟ್ಟಾಗಿಲ್ಲ – ಮುಚ್ಚಿಹೋಗಿಲ್ಲ!' ಎಂದು ತಿಳಿಸು.

'ವಾಲಿಯನ್ನು ವಧಿಸಿದಂತೆ ನಿನ್ನನ್ನೂ ವಧಿಸುತ್ತೇನೆ' ಎಂಬ ವಸ್ತುಧ್ವನಿ ಇಲ್ಲಿ ಗೋಚರಿಸುತ್ತದೆ.

ಇನ್ನೊಂದು ಉದಾಹರಣೆ : ರಾವಣನ ಸಂಹಾರವಾದ ಮೇಲೆ ಆತನ ಉತ್ತರಕ್ರಿಯೆಯನ್ನು ನಡೆಸಲು ವಿಭೀಷಣನು ಹಿಂದೆಗೆದನು. ವಿಭೀಷಣನಿಗೆ ಬುದ್ಧಿವಾದ ಹೇಳುತ್ತ ಶ್ರೀರಾಮನು ಹೀಗೆನ್ನುತ್ತಾನೆ :

ಮರಣಾಂತಾನಿ ವೈರಾಣಿ ನಿರ್ವೃತ್ತಂ ನಃ ಪ್ರಯೋಜನಂ
ಕ್ರಿಯತಾಮಸ್ಯ ಸಂಸ್ಕಾರೋ ಮಮಾಪ್ಯೇಷ ಯಥಾತವ

ಯುದ್ಧ. CXIV– 101

'ಸಕಲ ವೈರಗಳಿಗೂ ಮರಣವೇ ಗಡಿ. ನಮ್ಮ ಉದ್ದೇಶ ಸಿದ್ಧಿಸಿತು. ಈತನ ಉತ್ತರಕ್ರಿಯೆಯನ್ನು ಮಾಡು. ಇವನು (ರಾವಣನು) ನಿನಗೆ ಹೇಗೋ ನನಗೂ ಹಾಗೆಯೋ.'

ಮಮಾಪ್ಯೇಷ ಯಥಾ ತವ=ರಾವಣನು ನಿನಗೆ ಹೇಗೆ ಸಹೋದರನೊ ಹಾಗೆಯೇ ನನಗೂ ಸಹೋದರನೆಂದೇ ಭಾವಿಸುತ್ತೇನೆ. ನೀನು ಉತ್ತರಕ್ರಿಯೆ

ಯನ್ನು ಮಾಡದಿದ್ದರೆ ನಾನು ಮಾಡುತ್ತೇನೆ ಎಂಬ ವಸ್ತು ಇಲ್ಲಿ ಧ್ವನಿತವಾಗುತ್ತದೆ.

**ಗುಣೀಭೂತವ್ಯಂಗ್ಯ**

ಧ್ವನಿಕಾವ್ಯದಲ್ಲಿ ವ್ಯಂಜನಾಗಮ್ಯಗಳಾದ ರಸಭಾವಗಳೂ ವಸ್ತ್ವಲಂಕಾರಗಳೂ ಪ್ರಧಾನವಾಗಿ ಚಮತ್ಕಾರಿಗಳು. ಅವು ಕಾವ್ಯದಲ್ಲಿ ಆತ್ಮಸ್ಥಾನೀಯ. ವ್ಯಂಗ್ಯವಾದ ಈ ಆತ್ಮವನ್ನು ಗುಣಾಲಂಕಾರಗಳು ಭೂಷಿಸುತ್ತವೆ. ಅವುಗಳಿಂದ ವ್ಯಂಗ್ಯದ ಚಮತ್ಕಾರಿತೆ ಅಧಿಕವಾಗುವುದು. ರಸಾದಿಗಳು ಕೆಲವು ಸಂದರ್ಭಗಳಲ್ಲಿ ಅಪ್ರಧಾನವಾಗುವುದುಂಟು. ಆಗಲೂ ಚಮತ್ಕಾರಜನಕಗಳೇ. ಆದರೆ ಸ್ವತಃ ಅಲ್ಲ. ಇನ್ನೊಂದು ಅರ್ಥವನ್ನು ಪೋಷಿಸಿ ಅದರ ಮೂಲಕ ತನ್ನ ಪ್ರಭೆಯನ್ನು ಬೀರಿ ಕಾವ್ಯವನ್ನು ಉಜ್ವಲಗೊಳಿಸುವುವು. ಇನ್ನೊಂದು ಅರ್ಥವನ್ನು ಪೋಷಿಸುವುದೇ ಅವುಗಳ ಅಪ್ರಾಧಾನ್ಯ. ವ್ಯಂಗ್ಯವು ಅಪ್ರಧಾನವಾಗುವುದೆಂದರೆ ಕಾವ್ಯದಲ್ಲಿ ಗುಣೀಭೂತವಾಗಿ ಪ್ರಧಾನಸ್ಥಾನವನ್ನು ಇನ್ನೊಂದಕ್ಕೆ ಬಿಟ್ಟುಕೊಡುವುದು. ರಸಭಾವಗಳು ಗುಣೀಭೂತವಾಗಿ ಪರಾಂಗವಾದರೆ ರಸವದಾದ್ಯಲಂಕಾರಗಳೆನಿಸುತ್ತವೆ. ನಾಗವರ್ಮನು ಹಾಸ್ಯರಸಕ್ಕೆ ಈ ಪದ್ಯವನ್ನು ಉದಾಹರಿಸಿದ್ದಾನೆ :

ಶ್ರೀ ತನ್ನಂದಿನ ರೂಪೆ ಕೌಸ್ತುಭದೊಳಚ್ಛೊತ್ತಿರ್ದವೋಲ್ ತೋಱೆ ಕಂ
ಡೇತರ್ಕೀಕೆ ಮದೀಯವಾಸಗೃಹಮಂ ತಾಂಪೊಕ್ಕಳೆಂದೇವದಿಂ
ದಾ ತಾಮ್ರಾಕ್ಷಿಯನೀಕ್ಷಿಸುತ್ತುಮಿರೆ ತನ್ಮುಗ್ಧತ್ವಮಂ ಕಂಡು ಸಂ
ಜಾತಾಂತಸ್ಮಿತನಾದ ಕೃಷ್ಣನೆಮಗೀಗಾನಂದಸಂದೋಹಮಂ

ಶ್ರೀರಂಗಪಟ್ಟಣದ 64 ನೆಯ ಶಾಸನ

ಈ ಪದ್ಯದ ಪ್ರಧಾನವಾದ ವಾಕ್ಯಾರ್ಥದಲ್ಲಿ ಕವಿಗೆ ಕೃಷ್ಣನಲ್ಲಿರುವ ಭಕ್ತಿ (ರತಿ) ವ್ಯಂಗ್ಯವಾಗಿದೆ. ಇದಕ್ಕೆ ಹಾಸ್ಯರಸವು ಪೋಷಕ. ಹಾಸ್ಯವು ಪ್ರಧಾನವಾಕ್ಯಾರ್ಥವಲ್ಲ. ಆದರೂ ತನ್ನ ರಮಣೀಯತೆಯಿಂದ ಭಕ್ತಿಭಾವವನ್ನು ಉಜ್ವಲಗೊಳಿಸುತ್ತದೆ.

ವ್ಯಂಗ್ಯವಾದ ವಸ್ತ್ವಲಂಕಾರಗಳೂ ವಾಚ್ಯಾರ್ಥದಲ್ಲಿ ಗುಣೀಭೂತವಾಗುತ್ತವೆ.

ರಾಘವವಿರಹಜ್ವಾಲಾ ಸಂತಾಪಿತ ಸಹ್ಯಶೈಲ ಶಿಖರೇಷು
ಶಿಶಿರೇ ಸುಖಂ ಶಯಾನಾಃ ಕಪಯಃ ಕುಪ್ಯಂತಿ ಪವನತನಯಾಯ

ರಸಗಂಗಾಧರ, ಪು. 20

'ಶ್ರೀರಾಮನ (ಸೀತಾ)ವಿರಹಜ್ವಾಲೆಯಿಂದ ಬಿಸಿಯಾದ ಸಹ್ಯಪರ್ವತದ ಶಿಖರಗಳಲ್ಲಿ, ಚಳಿಗಾಲದಲ್ಲಿ ಸುಖವಾಗಿ ಮಲಗಿದ್ದ ಕಪಿಗಳು ಹನುಮಂತನ ಮೇಲೆ ಕೋಪಗೊಳ್ಳುತ್ತವೆ!'

ಹನುಮಂತನು ಲಂಕೆಯಿಂದ ಸೀತಾವೃತ್ತಾಂತವನ್ನು ತಂದು ತಿಳಿಸಲು, ಶ್ರೀರಾಮನ ವಿರಹಜ್ವಾಲೆ ನಂದಿತು. ವಿರಹಜ್ವಾಲೆಯಿದ್ದಾಗ ಪರ್ವತಶಿಖರ ಬೆಚ್ಚಗಿತ್ತು! ಶ್ರೀರಾಮನು ಶೀತಲನಾಗಲು, ಚಳಿಯ ಬಾಧೆಯಿಂದ ನೊಂದ ಕಪಿಗಳು, ಇದಕ್ಕೆ ಹನುಮಂತನೇ ಕಾರಣನೆಂದು ಅವನ ಮೇಲೆ ಕೋಪಗೊಂಡವು ! – ಎಂದು ತಾತ್ಪರ್ಯ. ಇಲ್ಲಿ ಕಪಿಗಳ ಕೋಪಕ್ಕೆ ನಿಮಿತ್ತವೇನೆಂಬುದು ಥಟ್ಟನೆ ಹೊಳೆಯುವುದಿಲ್ಲ. 'ಶ್ರೀರಾಮನ ವಿರಹಜ್ವಾಲೆ ಆರಿ, ಅವನು ಶೀತಲನಾದನು' ಎಂಬ ವ್ಯಂಗ್ಯಾರ್ಥವು ಹೊಳೆದಾಗ ವಾಚ್ಯಾರ್ಥವು ಉಪಪನ್ನವಾಗುತ್ತದೆ. ವ್ಯಂಗ್ಯಾರ್ಥಕ್ಕಿಂತಲೂ ಅದರಿಂದ ಉಪಸ್ಕೃತವಾದ ವಾಚ್ಯಾರ್ಥವೇ ಇಲ್ಲಿ ಮನೋಹರವಾಗಿದೆ.

ಅಮೃತಸ್ಯ ಚಂದ್ರಿಕಾಯಾ ಲಲಿತಾಯಾಶ್ಚಾಪಿ ಕವಿತಾಯಾಃ
ಸುಜನಸ್ಯ ಚ ನಿರ್ಮಾಣಂ ಜನಯತಿ ನ ಹಿ ಕಸ್ಯ ಸಂತೋಷಂ

ರಸಗಂಗಾಧರ, ಪು. 430

'ಅಮೃತ, ಬೆಳುದಿಂಗಳು, ಮನೋಜ್ಞವಾದ ಕವಿತೆ, ಸಜ್ಜನ – ಇವರ ನಿರ್ಮಾಣ ಯಾರಿಗೆ ತಾನೇ ಆನಂದವನ್ನುಂಟುಮಾಡದು?'

ಇಲ್ಲಿ ವಾಚ್ಯವಾದದ್ದು ದೀಪಕಾಲಂಕಾರ. ವರ್ಣನೀಯನಾದ ಸಜ್ಜನನಿಗೂ ಅಮೃತಾದಿಗಳಿಗೂ ಸಾದೃಶ್ಯ ವ್ಯಂಗ್ಯ. ಉಪಮಾಲಂಕಾರವು ದೀಪಕದಲ್ಲಿ ಗುಣೀಭೂತವಾಗಿದೆ.

ಧ್ವನಿಪ್ರಸ್ಥಾನದಲ್ಲಿ ವ್ಯಂಗ್ಯವೇ ಕಾವ್ಯದ ಆತ್ಮವಾದ್ದರಿಂದ ವ್ಯಂಗ್ಯಸ್ಪರ್ಶವಿಲ್ಲದೆ ಕಾವ್ಯವು ರಮಣೀಯವಾಗದು. ಆದ್ದರಿಂದ ಧ್ವನಿ, ಗುಣೀಭೂತವ್ಯಂಗ್ಯ – ಎಂದು ಎರಡೇ ಕಾವ್ಯಭೇದಗಳು. ಉಪಮಾ, ದೀಪಕ, ಆಕ್ಷೇಪ, ಪರ್ಯಾಯೋಕ್ತ, ಸಮಾಸೋಕ್ತಿ – ಮುಂತಾದ ಅಲಂಕಾರವರ್ಗದಲ್ಲಿ ವ್ಯಂಗ್ಯವು ವಾಚ್ಯಾಲಂಕಾರಕ್ಕೆ ಸೌಂದರ್ಯವನ್ನೀಯುವುದರಿಂದ ಅದೆಲ್ಲವೂ ಗುಣೀಭೂತವ್ಯಂಗ್ಯದಲ್ಲಿ ಸೇರುತ್ತದೆ. ಯಾವ ಚಿತ್ರಾಲಂಕಾರವರ್ಗದಲ್ಲಿ ವ್ಯಂಗ್ಯವಿಲ್ಲವೊ ಇದ್ದರೂ ಸುಂದರವಲ್ಲವೊ – ಎಂದರೆ ವಾಚ್ಯಾರ್ಥಕ್ಕೆ ಪೋಷಕವಲ್ಲವೊ ಅದು ಕಾವ್ಯವಲ್ಲ. ಅದನ್ನು ಕಾವ್ಯವೆನ್ನುವುದು ಗೌಣವ್ಯವಹಾರ.

ಇನ್ನೊಂದು ವಿಷಯ. ರಾಮಾಯಣದಂಥ ಮಹಾಕಾವ್ಯದಲ್ಲಿ ಸ್ತ್ರೀಪುರುಷರ, ಗಿರಿನದೀನಗರಗಳ, ಮೃಗಪಕ್ಷಿಗಳ ಸ್ವರೂಪಮಾತ್ರ ಕೀರ್ತನ ಅಲ್ಲಲ್ಲಿ ಇರುತ್ತದೆ.

ಆಗ ಒಂದೆರಡು ಶ್ಲೋಕಗಳನ್ನು ಮುಂದಿಟ್ಟುಕೊಂಡು 'ಇದು ಕಾವ್ಯವೆ? ಅಲ್ಲವೆ?' ಎಂದು ವಿಚಾರಿಸ ಹೊರಟರೆ ಸಾಹಸವಾದೀತು. ರಸೈಕದೃಷ್ಟಿಯುಳ್ಳ ಮಹಾಕವಿ ಕಥಾಪ್ರಸಂಗಗಳನ್ನು ಉಚಿತರೀತಿಯಲ್ಲಿ ಸಂಘಟಿಸುವುದಕ್ಕೋಸ್ಕರ ಚಮತ್ಕಾರಿಗಳಲ್ಲದ ವಾಕ್ಯಗಳನ್ನೂ ಅಲ್ಲಲ್ಲಿ ಸೇರಿಸಿರುತ್ತಾನೆ. ಚೇತನವರ್ಗದ ವಿವಿಧ ಚಿತ್ತವೃತ್ತಿಗಳನ್ನು ವರ್ಣಿಸುವುದೇ ಕವಿಯ ಪ್ರಧಾನೋದ್ದೇಶವಾಗಿರುತ್ತದೆ. ಮಹಾಪ್ರಬಂಧದಲ್ಲಿ ಪ್ರತಿಯೊಂದು ಪದಾರ್ಥವೂ ಅದರ ಸ್ವರೂಪಕೀರ್ತನವೂ ವಿಭಾವಾನುಭವಗಳ ರೂಪದಿಂದ ಚಿತ್ತವೃತ್ತಿಗಳ ಅಭಿವ್ಯಂಜನೆಗೆ ನಿಮಿತ್ತಗಳಾಗಿರುತ್ತದೆ. ಜೇನು ಹುಳುವಿಗೆ ಜೇನೊಂದೇ ಮುಖ್ಯ ಉದ್ದಿಷ್ಟವಾದರೂ ಅದನ್ನು ಭರಿಸುವುದಕ್ಕಾಗಿ ಮೇಣದ ಗೂಡನ್ನು ನಿರ್ಮಿಸುತ್ತದೆ. ಹಣ್ಣಿನಲ್ಲಿ ರಸವನ್ನು ರಕ್ಷಿಸುವುದಕ್ಕಾಗಿ ಪ್ರಕೃತಿಯೇ ಸಿಪ್ಪೆಯನ್ನು ನಿರ್ಮಿಸಿರುತ್ತದೆ. ಜೇನು ಹುಟ್ಟಿನಂತೆಯೂ ಹಣ್ಣಿನಂತೆಯೂ ಇರತಕ್ಕದ್ದು ಮಹಾಕಾವ್ಯ. ಸಹೃದಯನು ಅದನ್ನು ಅಖಂಡದೃಷ್ಟಿಯಿಂದ ನೋಡುತ್ತಾನೆ. ಲಾಕ್ಷಣಿಕರು ಒಂದು ಶ್ಲೋಕವನ್ನೊ ವಾಕ್ಯಖಂಡವನ್ನೊ ಉದಾಹರಿಸಿ 'ಇದು ಧ್ವನಿ, ಇದು ಕಾವ್ಯ, ಇದು ಕಾವ್ಯವಲ್ಲ' ಎಂದು ಹೇಳುವುದು ಕಾವ್ಯಾಭ್ಯಾಸಿಗಳ ವ್ಯುತ್ಪತ್ತಿಶಿಕ್ಷಣಕ್ಕಾಗಿ.

**ಔಚಿತ್ಯ**

ಕವಿ ನೆನಪಿನಲ್ಲಿಡಬೇಕಾದ ಪರಮರಹಸ್ಯ ಔಚಿತ್ಯ. ಗುಣಾಲಂಕಾರಗಳಾಗಲಿ ರಸಭಾವಗಳಾಗಲಿ – ಉಚಿತ ಸನ್ನಿವೇಶದಲ್ಲಿ ಉಚಿತ ರೀತಿಯಿಂದ ನಿಬದ್ಧವಾದರೆ ಮಾತ್ರ ಕಾವ್ಯವು ಸುಂದರವಾಗುತ್ತದೆ. ಅವುಗಳಲ್ಲಿ ಔಚಿತ್ಯ ತಪ್ಪಿತೆಂದರೆ, ಸೌಂದರ್ಯದ ಮಾತಿರಲಿ, ಕಾವ್ಯವು ಹಾಸ್ಯಾಸ್ಪದವಾದೀತು. ಮುತ್ತಿನ ಸರವನ್ನು ಕೊರಳಲ್ಲಿ ಧರಿಸಿದಾಗ, ಅದು ಉಚಿತ; ಭೂಷಣ. ಅದನ್ನು ಕಾಲಿಗೆ ಸುತ್ತಿದರೆ? ಉಚಿತವೆಂದರೆ ಅನುರೂಪ; ಯೋಗ್ಯ; ಅರ್ಹ. ಸುಸಂಸ್ಕೃತನಾದ ಮನುಷ್ಯನಿಗೆ ಯಾವುದರ ವಿಷಯದಲ್ಲಿ 'ಇದು ಸರಿ' ಯುಕ್ತ ಇಲ್ಲಿಗೆ ಹೊಂದುತ್ತದೆ ಎಂಬ ಜ್ಞಾನ ಉದಯಿಸುತ್ತದೆಯೊ ಅದು ಉಚಿತ. ಉಚಿತದ ಭಾವ ಔಚಿತ್ಯ. ಔಚಿತ್ಯವಿಲ್ಲದಾಗ ರಸಾದಿಗಳು ಸಹ ಮನೋಜ್ಞವಾಗವು. ಈ ಅಭಿಪ್ರಾಯದಿಂದಲೇ ಕ್ಷೇಮೇಂದ್ರನು,

> ಔಚಿತ್ಯಂ ರಸಸಿದ್ಧಸ್ಯ ಸ್ಥಿರಂ ಕಾವ್ಯಸ್ಯ ಜೀವಿತಂ
>
> ಔಚಿತ್ಯವಿಚಾರಚರ್ಚಾ, – 5

ಎಂದು ಹೇಳಿದ್ದಾನೆ. ಕಾವ್ಯವು 'ರಸಸಿದ್ಧ'ವೇ. ಸಹೃದಯರಿಗೆ ಅದು ಗ್ರಾಹ್ಯವಾಗುವುದು ಔಚಿತ್ಯದಿಂದ. ಶಬ್ದಾರ್ಥಾದಿ ಕಾವ್ಯಾಂಗಗಳನ್ನು ಸಮಂಜಸವಾಗಿ ಸೇರಿ

ಸುವ ಹೊಂದಾಣಿಕೆ ಇದು. ಇದರಿಂದ ಕಾವ್ಯಕ್ಕೆ ನೂತನಸೌಂದರ್ಯವೇನೂ ಬರದಿದ್ದರೂ ಇರುವ ಸೌಂದರ್ಯ ಅಪಕೃಷ್ಟವಾಗದಂತೆ, ಕಾವ್ಯವು ಹಾಸ್ಯಾಸ್ಪದವಾಗದಂತೆ ನೋಡಿಕೊಳ್ಳುವ ಮುಖ್ಯಧರ್ಮವಾದ ಇದನ್ನು ಕಾವ್ಯಜೀವಿತವೆಂದು ಕ್ಷೇಮೇಂದ್ರನು ಹೇಳಿರುವುದು ಇದಕ್ಕಾಗಿ. ಲೋಕಶಾಸ್ತ್ರಗಳ ಅವೇಕ್ಷಣೆಯಿಂದಲೂ ಕಾವ್ಯಾನುಶೀಲನಜನ್ಯವಾದ ನೈಪುಣ್ಯದಿಂದಲೂ ಔಚಿತ್ಯ - ಅನೌಚಿತ್ಯಗಳನ್ನರಿಯಲು ಸಾಧ್ಯ. ಲಾಕ್ಷಣಿಕರು ಹೇಳುವ ಕಾವ್ಯದೋಷಗಳೆಲ್ಲವನ್ನೂ ಅನೌಚಿತ್ಯದ ವ್ಯಾಪಕಾರ್ಥದಲ್ಲಿ ಅಳವಡಿಸಬಹುದು.

ರಸಭಾವಗಳಂತೆ ರಸಾಭಾಸ, ಭಾವಾಭಾಸ ಎಂಬ ವ್ಯಂಗ್ಯಪ್ರಕಾರಗಳುಂಟು. ರಸದಂತೆ ತೋರತಕ್ಕದ್ದು ರಸಾಭಾಸ. ಹೀಗೆಯೇ ಭಾವಾಭಾಸ. ವ್ಯಂಗ್ಯವಾದ ಚಿತ್ತವೃತ್ತಿಯಲ್ಲಿ ಅನೌಚಿತ್ಯವಿದ್ದಾಗ ಈ ಹೆಸರು. ಪರಸ್ತ್ರೀಯಲ್ಲಿ, ಅನುರಾಗವಿಲ್ಲದವಳಲ್ಲಿ, ಅಭಿವ್ಯಕ್ತವಾಗುವ ರತಿ ಶೃಂಗಾರಾಭಾಸವೆನಿಸುತ್ತದೆ. ರಾವಣನಿಗೆ ಸೀತೆಯಲ್ಲಿ, ಕೀಚಕನಿಗೆ ದ್ರೌಪದಿಯಲ್ಲಿ ಉಂಟಾದ ಆಸಕ್ತಿ ಶೃಂಗಾರಾಭಾಸದ ಉದಾಹರಣೆ. ಉತ್ತರಕುಮಾರನ ಯುದ್ಧೋತ್ಸಾಹ ವೀರಾಭಾಸ. ತಂದೆಯ ಮೇಲೆ ಕ್ರೋಧ, ಗುರುವನ್ನು ನೋಡಿ ಹಾಸ, ಇಂದ್ರಜಾಲದಿಂದಾಗುವ ವಿಸ್ಮಯ, ಮಹಾವೀರನಲ್ಲಿ ಭಯ – ಈ ಬಗೆಯ ಚಿತ್ತವೃತ್ತಿಗಳು ಅನುಚಿತವಾದವು. ಇವುಗಳ ವರ್ಣನೆಯಲ್ಲಿ ವಿಭಾವಾದಿಗಳ ಪೋಷಣೆ ಇದ್ದರೂ 'ಇದು ಅನುಚಿತ' ಎಂಬ ಭಾವನೆ ಸಹೃದಯನಲ್ಲಿರುವುದರಿಂದ ಆಸ್ವಾದದಲ್ಲಿ ನ್ಯೂನತೆಯುಂಟಾಗುತ್ತದೆ. ಆದ್ದರಿಂದ ಇದು 'ಆಭಾಸ.' ರಸಾಭಾಸವೆಂದರೆ 'ರಸಭಂಗ' ವೆಂಬ ಲೋಕರೂಢಿಯ ಅರ್ಥವನ್ನಿಲ್ಲಿ ಇಟ್ಟುಕೊಳ್ಳಬಾರದು. ಅನೌಚಿತ್ಯವು ದೋಷವಾದರೂ ರಸಾಭಾಸ ಭಾವಾಭಾಸಗಳನ್ನು ದೋಷಪ್ರಕರಣದಲ್ಲಿ ಆಲಂಕಾರಿಕರು ಗಣಿಸಿಲ್ಲ. ರಾಮಾಯಣಾದಿ ಕಥಾಶರೀರದಲ್ಲಿಯೇ ಈ 'ಆಭಾಸ' ಪ್ರಕರಣಗಳು ಬಂದಿರುವುದರಿಂದಲೋ ಏನೊ ಇವನ್ನು ಕಾವ್ಯಮಾರ್ಗದಲ್ಲಿಯೇ ಅಂಗೀಕರಿಸಿದರು. ಇವು ಪ್ರಧಾನವಾಗಿ ಧ್ವನಿತವಾದಾಗ ರಸಾಭಾಸಧ್ವನಿ ಭಾವಾಭಾಸಧ್ವನಿ ಎಂದು ವ್ಯವಹರಿಸಬಹುದು. ಔಚಿತ್ಯವು ಗುಣಾಲಂಕಾರಭಾವಗಳಲ್ಲಿ ಮಾತ್ರವಲ್ಲ, ಪದ ವಾಕ್ಯಪ್ರಬಂಧಾದಿಗಳಲ್ಲಿಯೂ ಇರಬೇಕಾದದ್ದು. ಒಂದು ವಿಶೇಷಣವನ್ನು ಕೊಡುವಾಗ, ಒಂದು ಕ್ರಿಯಾಪದವನ್ನು ಪ್ರಯೋಗಿಸುವಾಗ ಅದರ ಔಚಿತ್ಯವನ್ನು ಕವಿ ಆಲೋಚಿಸಬೇಕಾಗುತ್ತದೆ. ಕುಂತಕನು ಹೇಳುವ ವಕ್ರೋಕ್ತಿಯಂತೆ ಔಚಿತ್ಯವು ಸಮಗ್ರಕಾವ್ಯವನ್ನೂ ವ್ಯಾಪಿಸಿರುತ್ತದೆ. ಕ್ಷೇಮೇಂದ್ರನು ಕೊಡುವ ಉದಾಹರಣೆಗಳನ್ನು ನೋಡಿದಾಗ ಔಚಿತ್ಯ ವಕ್ರೋಕ್ತಿಗಳಿಗಿರುವ ಭೇದವೇನೆಂಬ ಶಂಕೆ ಮೂಡಬಹುದು. ಇವೆರಡರ ಭೇದವನ್ನು ಸಂಕ್ಷೇಪವಾಗಿ ಇಷ್ಟು ಹೇಳಬಹುದು: ವಕ್ರೋಕ್ತಿ ವರ್ಣನೀಯ ವಸ್ತುವನ್ನು

ಅವಲಂಬಿಸುತ್ತದೆ. ವಸ್ತುಗತವಾದ ಸೌಂದರ್ಯವನ್ನು ಗ್ರಹಿಸಿ ಕವಿಪ್ರತಿಭೆ ಕಾರ್ಯೋನ್ಮುಖವಾಗುತ್ತದೆ. ಸೌಂದರ್ಯಗ್ರಾಹಿಯಾದ ಕವಿಪ್ರತಿಭೆಯ ನಿರ್ಮಾಣ ವಕ್ರೋಕ್ತಿ. ಔಚಿತ್ಯವು ವಸ್ತುದ್ವಯಸಾಪೇಕ್ಷ. ಅದು ಕವಿಯ ವಿವೇಚನಾ ಶಕ್ತಿಗೆ ಗೋಚರಿಸಿ ಆ ಶಕ್ತಿಯಿಂದ ಉಂಟಾಗತಕ್ಕದ್ದು. ವಕ್ರೋಕ್ತಿಯ ಕೆಲಸ ಸೌಂದರ್ಯಾಧಾನ. ಔಚಿತ್ಯದ ಕೆಲಸ ಸೌಂದರ್ಯರಕ್ಷಣೆ. ವಕ್ರೋಕ್ತಿ ಸುಂದರ ವಸ್ತುವನ್ನು ನಿರ್ಮಿಸುತ್ತದೆ. ಔಚಿತ್ಯವು ಅದನ್ನು ಯುಕ್ತಸ್ಥಾನದಲ್ಲಿ ಜೋಡಿಸುತ್ತದೆ. ವಕ್ರೋಕ್ತಿಯ ಉದ್ದೇಶ ಸಫಲವಾಗುವುದು ಔಚಿತ್ಯದ ಸಹಕಾರದಿಂದ.

*

ರಸಗಳಲ್ಲಿ ಕೆಲವು ಪರಸ್ಪರ ವಿರೋಧಿಗಳು. ಶೃಂಗಾರವು ಬೀಭತ್ಸ ಕರುಣ ಶಾಂತರಸಗಳಿಗೆ ವಿರುದ್ಧ. ವೀರವು ಶಾಂತಭಯಾನಕಗಳಿಗೆ ವಿರುದ್ಧ. ಈ ವಿರೋಧಿ ರಸಗಳನ್ನು ಒಂದೆಡೆ ಸೇರಿಸುವುದು ಅನುಚಿತ. ಈ ಅನೌಚಿತ್ಯದಿಂದ ರಸಭಂಗವಾಗುತ್ತದೆ; ರಸಾಭಾಸವಲ್ಲ. ಔಚಿತ್ಯಜ್ಞಾನವುಳ್ಳ ಕವಿಯ ವಿವೇಚನಾಶಕ್ತಿಗೆ ವಿರೋಧವು ಗೋಚರಿಸುತ್ತದೆ. ವಿರೋಧಿರಸಗಳ ಸಮಾವೇಶ ರಸದೋಷ. ಹೀಗೆಯೇ ಅರ್ಥದೋಷ ಶಬ್ದದೋಷಗಳೂ ಅನೌಚಿತ್ಯದಿಂದ ಸಂಭವಿಸುತ್ತವೆ. ಇಂತಹ ವಿಷಯದಲ್ಲಿ ಲಕ್ಷಣಗ್ರಂಥಗಳಿಂದಾಗುವುದು ದಿಕ್ಪ್ರದರ್ಶನ. ಅನೌಚಿತ್ಯವು ವಸ್ತುದ್ವಯ ಸಾಪೇಕ್ಷವಾದ್ದರಿಂದ ದೋಷವು ಸಾಪೇಕ್ಷವೇ. ಯಾವುದೂ ಸ್ವತಃ ದುಷ್ಟವಲ್ಲ. ಉದಾಹರಣೆಗೆ, ಶೃಂಗಾರ ಬೀಭತ್ಸಗಳ ಮೇಳನ ದೋಷವಾದರೂ ಪ್ರಧಾನರಸವು ಶಾಂತವಾಗಿದ್ದಲ್ಲಿ ದೋಷವಾಗದು. ಶೃಂಗಾರದಲ್ಲಿ ಜುಗುಪ್ಸೆಯನ್ನು ವ್ಯಕ್ತಪಡಿಸುವುದರಿಂದ ಶಾಂತದ ಸ್ಥಾಯಿಯಾದ ನಿರ್ವೇದ ಪುಷ್ಟಿಗೊಳ್ಳುವುದು. ಕರ್ಕಶವರ್ಣಗಳಿಂದಾಗುವ ಶ್ರುತಿಕಟುತ್ವವೆಂಬುದು ರೌದ್ರ ಬೀಭತ್ಸಗಳಲ್ಲಿ ಗುಣವಾಗಿ* ಪರಿಣಮಿಸುವುದು. ಅಪಶಬ್ದವು ದೋಷವಾದರೂ ಮದ್ಯಪಾನ ಪ್ರಮತ್ತನ ಮಾತಿನಲ್ಲಿ ದೋಷವಾಗದು.

### ವಿವಿಧ ಪ್ರಸ್ಥಾನಗಳ ಸಾರಾಂಶ

ರುಯ್ಯಕನು† ಅಲಂಕಾರಸರ್ವಸ್ವದ ಉಪೋದ್ಘಾತದಲ್ಲಿ ವಿವಿಧ ಪ್ರಸ್ಥಾನಗಳ ಸಾರಾಂಶವನ್ನು ನಿಷ್ಕೃಷ್ಟವಾಗಿ ತಿಳಿಸಿದ್ದಾನೆ. ಅವನ ಉಪೋದ್ಘಾತವನ್ನು

* ಆದ್ದರಿಂದಲೇ ನಿತ್ಯಗುಣ ನಿತ್ಯದೋಷ ಎಂಬ ಮಾತು ಸಲ್ಲದು ಎಂದು ಕೆಲವರು ಹೇಳಿರುವುದು — ಸಂ.

† ಅಲಂಕಾರಸೂತ್ರವನ್ನು ಬರೆದವನು ರುಯ್ಯಕನೆಂದು ಅದರ ವೃತ್ತಿಯಾದ ಅಲಂಕಾರ ಸರ್ವಸ್ವವನ್ನು ರುಯ್ಯಕನ ಶಿಷ್ಯನಾದ ಮಂಖುಕನು ಬರೆದನೆಂದೂ ಕೆಲವರ ಅಭಿಪ್ರಾಯ.

ಸ್ವಲ್ಪ ವಿವರಣೆಯೊಂದಿಗೆ ಕನ್ನಡದಲ್ಲಿ ಅನುವಾದಿಸಲಾಗಿದೆ. ವಿವರಣೆಗೆ ಸಮುದ್ರ ಬಂಧನ ವ್ಯಾಖ್ಯಾನ ಆಧಾರ. "ಭಾಮಹ ಉದ್ಭಟ ಮೊದಲಾದ ಪ್ರಾಚೀನಾಲಂಕಾರಿಕರು ಕಾವ್ಯದಲ್ಲಿ ಪ್ರತೀಯಮಾನಾರ್ಥವು (ವ್ಯಂಗ್ಯ) ವಾಚ್ಯಾರ್ಥಕ್ಕೆ ಉಪಸ್ಕಾರಿಯಾದ್ದರಿಂದ ಅದು ಅಲಂಕಾರದ ಗುಂಪಿನಲ್ಲಿ ಸೇರುತ್ತದೆ ಎಂದು ತಿಳಿದಿದ್ದಾರೆ. ಉಪಸ್ಕಾರಿಯೆಂದರೆ ಸೌಂದರ್ಯಾಧಾಯಕ. ಹೇಗೆಂದರೆ, ಪರ್ಯಾಯೋಕ್ತ, ಅಪ್ರಸ್ತುತಪ್ರಶಂಸಾ, ಸಮಾಸೋಕ್ತಿ, ಆಕ್ಷೇಪ, ವ್ಯಾಜಸ್ತುತಿ, ಉಪಮೇಯೋಪಮಾ, ಅನನ್ವಯ – ಮುಂತಾದ ಸ್ಥಳಗಳಲ್ಲಿ ವ್ಯಂಗ್ಯವಾದ ವಸ್ತು ವಾಚ್ಯಾರ್ಥಕ್ಕೆ ಸೌಂದರ್ಯವನ್ನು ಕೊಡುತ್ತದೆ. ರುದ್ರಟನು ಸಹ ಭಾವಾಲಂಕಾರವನ್ನು ಎರಡು ವಿಧವಾಗಿ ಹೇಳಿದ್ದಾನೆ. ಅದು ವಾಸ್ತವಾಲಂಕಾರದ ಒಂದು ಭೇದ. ಎರಡು ಬಗೆಯ ಭಾವಾಲಂಕಾರದಲ್ಲಿಯೂ ವ್ಯಂಗ್ಯವಾದ ವಸ್ತು ವಾಚ್ಯಾರ್ಥಕ್ಕೆ ಪೋಷಕವಾಗಿರುತ್ತದೆ. ರಸವತ್, ಪ್ರೇಯ, ಊರ್ಜಸ್ವಿ – ಮುಂತಾದ ಅಲಂಕಾರಗಳಲ್ಲಿ ರಸಭಾವಾದಿಗಳೂ ವಾಚ್ಯಾರ್ಥಕ್ಕೆ ಪೋಷಕವೆಂದು ಆತನು ಹೇಳಿದ್ದಾನೆ. ಇವಾದಿ ಉತ್ಪ್ರೇಕ್ಷಾ ಬೋಧಕ ಶಬ್ದವಿಲ್ಲದಾಗ ತೋರುವ ಉತ್ಪ್ರೇಕ್ಷೆಯೂ ವಾಚ್ಯಕ್ಕೆ ಉಪಸ್ಕಾರಕವೆಂದು ಹೇಳಿದ್ದಾನೆ. ಆದ್ದರಿಂದ ರುದ್ರಟನ ಮತದಲ್ಲಿ ವ್ಯಂಗ್ಯಗಳಾದ ವಸ್ತು, ರಸ, ಭಾವ, ಅಲಂಕಾರಗಳೂ ವಾಚ್ಯಾರ್ಥಕ್ಕೆ ಪೋಷಕಗಳಾದ್ದರಿಂದ ಅಲಂಕಾರದ ಗುಂಪಿನಲ್ಲಿ ಇವೆಲ್ಲ ಸೇರುತ್ತವೆ.

ವಾಮನನು ಸಾದೃಶ್ಯದಿಂದ ಸಂಭವಿಸುವ ಲಕ್ಷಣೆ ವಕ್ರೋಕ್ತಿ ಎಂದು ಹೇಳಿ 'ಉನ್ಮೀಮೀಲ ಕಮಲಂ ಸರಸೀನಾಂ ಕೈರವಂ ಚ ನಿಮಿಮೀಲ ಮುಹೂರ್ತಾತ್' ಎಂದು ಉದಾಹರಿಸಿದ್ದಾನೆ. ಉನ್ಮೀಲನ ನಿಮೀಲನಗಳು ನೇತ್ರಧರ್ಮಗಳು. ಅವು ಕಮಲ ಕೈರವಗಳಲ್ಲಿ ಸಂಭವಿಸುವುದಿಲ್ಲವಾದ್ದರಿಂದ ಕ್ರಮವಾಗಿ ವಿಕಾಸ ಸಂಕೋಚಗಳೆಂಬ ಅರ್ಥಗಳು ಲಕ್ಷಣೆಯಿಂದ ಗೋಚರಿಸುತ್ತವೆ. ಅವಯವ ವಿಶ್ಲೇಷ ಸಂಶ್ಲೇಷಗಳು ವ್ಯಂಜನೆಯಿಂದ ತೋರುತ್ತವೆ. ಈ ಧ್ವನಿ ಅಲಂಕಾರವೆಂದು ವಾಮನನ ಅಭಿಪ್ರಾಯ. ವಿಶೇಷವೇನೆಂದರೆ, ಗುಣವಿಶಿಷ್ಟ ಪದರಚನಾರೂಪವಾದ ರೀತಿ ಕಾವ್ಯದ ಆತ್ಮವೆಂದು ಅವನು ಹೇಳುತ್ತಾನೆ. ಉದ್ಭಟಾದಿಗಳಾದರೊ ಗುಣಾಲಂಕಾರಗಳೆರಡೂ ಕಾವ್ಯಶೋಭಾಹೇತುವಾದ್ದರಿಂದ ಅವೆರಡೂ ಸಮಾನವೆಂಬ ಅಭಿಪ್ರಾಯವನ್ನು ವ್ಯಕ್ತಪಡಿಸಿದ್ದಾರೆ. ವಿಷಯಭೇದದಿಂದ ಗುಣಾಲಂಕಾರಗಳು ಭಿನ್ನವಾಗುತ್ತವೆಯೇ ಹೊರತು ಇನ್ನೇನೂ ವ್ಯತ್ಯಾಸವಿಲ್ಲ. ಹೇಗೆಂದರೆ, ಗುಣಗಳು ಸಂಘಟನಾಧರ್ಮಗಳು, ಅಲಂಕಾರಗಳು ಶಬ್ದಾರ್ಥಧರ್ಮಗಳು. ಹೀಗೆಂದು ಅವರ

ಆಶಯ. ಭಾಮಹ, ದಂಡಿ, ವಾಮನ, ಉದ್ಭಟ, ರುದ್ರಟ ಮೊದಲಾದ ಪ್ರಾಚೀನರ ಮತದಲ್ಲಿ ಅಲಂಕಾರಗಳೇ ಕಾವ್ಯದಲ್ಲಿ ಪ್ರಧಾನ.

ವಕ್ರೋಕ್ತಿಜೀವಿತಕಾರನಾದರೊ ಬಹುಪ್ರಕಾರವುಳ್ಳ (ವೈದಗ್ಧ್ಯಭಂಗೀ ಭಣಿತಿ ರೂಪವಾದ) ವಕ್ರೋಕ್ತಿಯೇ ಕಾವ್ಯಜೀವಿತವೆಂದು ಹೇಳಿದನು. ಕಾವ್ಯದಲ್ಲಿ ಅಭಿಧಾವ್ಯಾಪಾರವೇ ಪ್ರಧಾನವೆಂದು ಅಭಿಪ್ರಾಯಪಟ್ಟನು. ಅವನ ಅಭಿಪ್ರಾಯದಲ್ಲಿ ಅಲಂಕಾರಗಳೆಲ್ಲವೂ ಅಭಿಧಾಪ್ರಕಾರಗಳೇ. ಕಾವ್ಯದಲ್ಲಿ ವಸ್ತು, ರಸ, ಅಲಂಕಾರವೆಂಬ ಮೂರು ಬಗೆಯ ವ್ಯಂಗ್ಯಾರ್ಥವಿದ್ದರೂ ವಕ್ರೋಕ್ತಿಯೆಂಬ ಅಭಿಧಾವ್ಯಾಪಾರವೇ ಕವಿಸಂರಂಭಕ್ಕೆ ಗೋಚರವಾದದ್ದು. ಕುಂತಕನು ಸಮಸ್ತ ಧ್ವನಿ ಪ್ರಪಂಚವನ್ನೂ ಉಪಚಾರವಕ್ರತಾ ಮುಂತಾದ ಹೆಸರುಗಳನ್ನಿಟ್ಟು ಸ್ವೀಕರಿಸಿಯೇ ಇದ್ದಾನೆ. ಒಟ್ಟಿನಲ್ಲಿ ಅವನ ಸಿದ್ಧಾಂತ ಇಷ್ಟು: ಕಾವ್ಯದ ಜೀವಿತ ಉಕ್ತಿವೈಚಿತ್ರ್ಯವೇ ಹೊರತು ವ್ಯಂಗ್ಯಾರ್ಥವಲ್ಲ.

ಭಟ್ಟನಾಯಕನು ಕಾವ್ಯದಲ್ಲಿ ವ್ಯಂಜನಾವ್ಯಾಪಾರವನ್ನು ಒಪ್ಪುತ್ತಾನೆ. ಆ ವ್ಯಂಜನಾವ್ಯಾಪಾರವನ್ನೇ ರಸಚರ್ವಣಾವಸ್ಥೆಯಲ್ಲಿ ಭೋಗಕೃತ್ತ್ವ ಅಥವಾ ಭೋಗವ್ಯಾಪಾರವೆಂದು ಹೇಳುತ್ತಾನೆ. ಆತನು ಕಾವ್ಯದಲ್ಲಿ ಅಭಿಧಾ, ಭಾವಕತ್ತ್ವ, ಭೋಗಕೃತ್ತ್ವ – ಎಂಬ ಮೂರು ವ್ಯಾಪಾರಗಳನ್ನು ಅಂಗೀಕರಿಸಿದ್ದಾನೆ. ಅವನ ಮತದಲ್ಲಿ ಅಭಿಧಾ ಎಂದರೆ ಮುಖ್ಯವ್ಯಾಪಾರವಾದ ಅಭಿಧಾಶಕ್ತಿ ಲಕ್ಷಣಾ ಇವೆರಡೂ ಅಭಿಧೆಯಿಂದ ವಾಚ್ಯಾರ್ಥ ಲಕ್ಷ್ಯಾರ್ಥಗಳು ತಿಳಿಯುತ್ತವೆ. ಭಾವಕತ್ತ್ವವ್ಯಾಪಾರವು ವಿಭಾವಾದಿಗಳನ್ನು ಸಾಧಾರಣೀಕರಿಸುತ್ತದೆ. ಭೋಗಕೃತ್ತ್ವವ್ಯಾಪಾರದ ಮಹಿಮೆಯಿಂದ ರಜಸ್ತಮೋಗುಣಗಳು ನಿಗೀರ್ಣವಾಗಿ ಸತ್ತ್ವಗುಣವು ಉದ್ರಿಕ್ತವಾಗಲು ರಸಾಸ್ವಾದವಾಗುತ್ತದೆ. ಈತನ ಮತದಲ್ಲಿ ವಿಭಾವಾದಿಗಳ ಸಾಧಾರಣೀಕರಣಕ್ಕಾಗಿ ಭಾವಕತ್ತ್ವ ಎಂಬ ವ್ಯಾಪಾರಾಂತರವನ್ನು ಸ್ವೀಕರಿಸಬೇಕೆಂಬುವೊಂದೇ ವಿಶೇಷ. ಭೋಗಕೃತ್ತ್ವವು ವ್ಯಂಜನೆಯೇ. ಕಾವ್ಯದಲ್ಲಿ ವ್ಯಂಜನಾವೃತ್ತಿ ಪ್ರಧಾನವೆಂಬುದು ಭಟ್ಟನಾಯಕನಿಗೆ ಸಂಮತ.

ಧ್ವನಿಕಾರನಾದರೊ: – "(ಭಾಮಹಾದಿಗಳೆಲ್ಲರ ಮತದಲ್ಲಿಯೂ) ಕಾವ್ಯದಲ್ಲಿ ವ್ಯಂಜನಾವ್ಯಾಪಾರವನ್ನು ಒಪ್ಪಿಕೊಳ್ಳಲೇಬೇಕಾಗಿದೆ. ವ್ಯಂಜನಾಗಮ್ಯವಾದ ವ್ಯಂಗ್ಯಾರ್ಥವೇ ಕಾವ್ಯದಲ್ಲಿ ಮುಖ್ಯ. ಗುಣಾಲಂಕಾರಗಳು ಅದನ್ನು ಭೂಷಿಸುತ್ತವೆ. ವ್ಯಂಗ್ಯವೇ ಸಹೃದಯನ ಚಿತ್ತವಿಶ್ರಾಂತಿಸ್ಥಾನ. ವ್ಯಂಗ್ಯವನ್ನು ಪ್ರತಿಪಾದಿಸುವುದರಿಂದ ವ್ಯಂಜನಾವ್ಯಾಪಾರವೂ ಸಿದ್ಧವಾಗುತ್ತದೆ. ಪ್ರಧಾನವಾದ್ದನ್ನು

ಬೋಧಿಸುವುದರಿಂದ ವ್ಯಂಜನಾವ್ಯಾಪಾರವನ್ನು ಮುಖ್ಯವೆಂದೆಣಿಸಬಹುದೇ ಹೊರತು ಸ್ವತಃ ಅದನ್ನು ಪ್ರಧಾನವೆನ್ನಲು ಸಾಧ್ಯವಿಲ್ಲ. ವ್ಯಂಗ್ಯವು ಗುಣಾಲಂಕಾರಗಳಿಂದಾದ ಸೌಂದರ್ಯವನ್ನು ಧರಿಸಿ ತಾನೇ ತಾನಾಗಿ ಮೆರೆಯುತ್ತದೆ. ಆದ್ದರಿಂದ ವ್ಯಂಗ್ಯವಾದ ರಸಭಾವಾದಿಗಳು ಕಾವ್ಯ ಜೀವಿತಗಳು. ಅವನ್ನು ಅಲಂಕಾರಗಳೆನ್ನುವುದು ಸರಿಯಲ್ಲ. ಅಲಂಕಾರಗಳು ಅನ್ಯೋಪಕಾರಿಗಳು. ರಸಾದಿಗಳು ಉಪಕಾರ್ಯಗಳು. ಅವೇ ಕಾವ್ಯದಲ್ಲಿ ಪ್ರಧಾನವಾದವು" ಎಂದು ಪ್ರತಿಪಾದಿಸಿದ್ದಾನೆ.

ಧ್ವನಿಕಾರನ ಈ ಸಿದ್ಧಾಂತವೇ ವಾಕ್ಯಾರ್ಥಗಳನ್ನು ಬಲ್ಲ ಸಹೃದಯರಿಗೆ ಆವರ್ಜಕವಾಗಿದೆ. ಏಕೆಂದರೆ, ವ್ಯಂಜನಾವ್ಯಾಪಾರವನ್ನು ಎಲ್ಲರೂ ಒಪ್ಪಿದ್ದಾರೆ. ಅದು ಇಲ್ಲವೆಂದು ಯಾರೂ ತಿರಸ್ಕರಿಸಿಲ್ಲ. ವ್ಯಂಜನೆಯನ್ನೊಪ್ಪಿದಮೇಲೆ ವ್ಯಂಗ್ಯವು ಪ್ರಧಾನವೆಂದು ತಾನಾಗಿಯೇ ಸಿದ್ಧವಾಗುತ್ತದೆ. ಪಕ್ಷಾಂತರವು ಹುಟ್ಟುವುದೇ ಇಲ್ಲ.

ವ್ಯಕ್ತಿವಿವೇಕಕಾರನಾದ ಮಹಿಮಭಟ್ಟನು "ವ್ಯಂಗ್ಯಾರ್ಥವೆನ್ನುವುದು ಅನುಮಾನ ಪ್ರಮಾಣಸಿದ್ಧವಾಗುತ್ತದೆ; ವ್ಯಂಜನಾವೃತ್ತಿಯೆನ್ನುವುದು ಅನುಮಾನವೇ ಸರಿ" ಎನ್ನುತ್ತಾನೆ. ಅದು ವಿಚಾರಸಹವಲ್ಲ. ಈ ವಿಷಯವು ಗಹನವಾದ್ದರಿಂದ ಇಲ್ಲಿ ಬೆಳಸುವುದಿಲ್ಲ. ಒಟ್ಟಾರೆ ವ್ಯಂಜನಾವ್ಯಾಪಾರ ಉಂಟು. ಅದರಿಂದ ಗಮ್ಯವಾದ ವ್ಯಂಗ್ಯವು ವಾಚ್ಯಾರ್ಥಕ್ಕಿಂತಲೂ ಪ್ರಧಾನವಾದಲ್ಲಿ ಧ್ವನಿಕಾವ್ಯವಾಗುತ್ತದೆ. ಅಪ್ರಧಾನವಾದಲ್ಲಿ ಗುಣೀಭೂತವ್ಯಂಗ್ಯವಾಗುತ್ತದೆ. ವ್ಯಂಗ್ಯವು ಅಸ್ಫುಟವಾಗಿ ಗುಣಾಲಂಕಾರಗಳು ಪ್ರಧಾನ ಚಮತ್ಕಾರಿಗಳಾಗಿದ್ದರೆ ಚಿತ್ರ ಎಂಬ ಮೂರನೆಯ ಕಾವ್ಯಭೇದವಾಗುತ್ತದೆ. ಇವುಗಳಲ್ಲಿ ಧ್ವನಿ ಉತ್ತಮ."

**ಕಾವ್ಯಹೇತು**

ಶಕ್ತಿರ್ನಿಪುಣತಾ ಲೋಕಶಾಸ್ತ್ರಕಾವ್ಯದ್ಯವೇಕ್ಷಣಾತ್
ಕಾವ್ಯಜ್ಞ ಶಿಕ್ಷಯಾಭ್ಯಾಸ ಇತಿ ಹೇತುಸ್ತದುದ್ಭವೇ

ಕಾವ್ಯಪ್ರಕಾಶ, 1 – 3

"ಶಕ್ತಿ, ಲೋಕಶಾಸ್ತ್ರ ಕಾವ್ಯಾದಿಗಳನ್ನು ಪರಿಶೀಲಿಸುವುದರಿಂದ ಉಂಟಾಗುವ ನೈಪುಣ್ಯ, ಕಾವ್ಯಜ್ಞರ ನೇತೃತ್ವದಲ್ಲಿ ಮತ್ತೆ ಮತ್ತೆ ಅಭ್ಯಾಸಮಾಡುವುದು – ಇವು ಮೂರೂ ಸೇರಿ ಕಾವ್ಯೋತ್ಪತ್ತಿಗೆ ಹೇತುವಾಗುತ್ತದೆ." ಇದು ಮಮ್ಮಟನ ಹೇಳಿಕೆ. ಇದನ್ನು ಒಂದೊಂದಾಗಿ ವಿಮರ್ಶಿಸಬಹುದು.

ಶಕ್ತಿ : ಇದು ಕವಿತ್ವಕ್ಕೆ ಬೀಜವಾದ ಒಂದು ಸಂಸ್ಕಾರ. ಇದೇ ಪ್ರತಿಭೆ. ಚಮತ್ಕಾರಿಯಾದ ವಿಷಯ ಕವಿಗೆ ಮೊದಲು ಹೊಳೆಯುತ್ತದೆ. ಅದನ್ನು ತಿಳಿಸಲು

ಅನುರೂಪಗಳಾದ ಶಬ್ದಗಳು ಸ್ಫುರಿಸುತ್ತವೆ. ಸುಂದರಶಬ್ದಾರ್ಥಗಳ ಸ್ಫುರಣೆಯನ್ನು ಪ್ರತಿಭೆ ಎನ್ನಬಹುದು. 'ಕವಿತ್ವಬೀಜಂ ಪ್ರತಿಭಾನಂ' ಎಂದು ವಾಮನನು ಸೂತ್ರಿಸಿದ್ದಾನೆ. (ಕಾ. ಸೂ. 13 – 16).

ನಿಪುಣತಾ : ಚೇತನಾಚೇತನಾತ್ಮಕವಾದ ಲೋಕವೃತ್ತವನ್ನು ಕವಿ ತಿಳಿದಿರಬೇಕು. ಕಾವ್ಯವು ಲೋಕವೃತ್ತದ ಇನ್ನೊಂದು ರೂಪವಷ್ಟೆ. ಛಂದಶ್ಶಾಸ್ತ್ರ,ವ್ಯಾಕರಣ, ನಿಘಂಟು, ವಿವಿಧ ಕಲಾಗ್ರಂಥಗಳು, ಇತಿಹಾಸ, ಪ್ರಸಿದ್ಧ ಕವಿಗಳ ಕಾವ್ಯಗಳು – ಮೊದಲಾದವನ್ನು ಅಭ್ಯಾಸಮಾಡಿದಾಗ ಬುದ್ಧಿಯು ಸಂಸ್ಕಾರವನ್ನು ಹೊಂದಿ ನೈಪುಣ್ಯವನ್ನು ಪಡೆಯುತ್ತದೆ. ಈ ನೈಪುಣ್ಯವನ್ನೇ ವ್ಯುತ್ಪತ್ತಿ ಎನ್ನುತ್ತಾರೆ. ಇದೂ ಒಂದು ದೃಢವಾದ ಸಂಸ್ಕಾರವೇ. ಶೂರನಾದ ಯೋಧನಿಗೆ ಆಯುಧ ಸಂಪತ್ತು ಇದ್ದಂತೆ ಪ್ರತಿಭಾಸಂಪನ್ನನಾದ ಕವಿಗೆ ವ್ಯುತ್ಪತ್ತಿ. ವ್ಯುತ್ಪತ್ತಿಯಿಲ್ಲದಾಗ ಪ್ರತಿಭೆಯಿಂದಾಗುವ ಸಾಧನೆ ಅತ್ಯಲ್ಪ.

ಅಭ್ಯಾಸ : ಕಾವ್ಯವನ್ನು ರಚಿಸಲೂ ವಿಮರ್ಶಿಸಲೂ ಯಾರು ಸಮರ್ಥರೊ ಅವರ ಬಳಿ ಶಿಕ್ಷಣವನ್ನು ಪಡೆಯುವುದೂ ಕವಿಯಾಗತಕ್ಕವನಿಗೆ ಆವಶ್ಯಕ. ವಿದ್ಯೆಯಾಗಲಿ ಕಲೆಯಾಗಲಿ ಗುರೂಪದೇಶದಿಂದಲೇ ಪರಿಷ್ಕೃತವೂ ದೃಢವೂ ಆಗುತ್ತದೆಯೆಂದು ಪೂರ್ವದವರ ನಂಬಿಕೆ. ಈ ನಂಬಿಕೆಯಿಂದ ಅಭ್ಯಾಸವನ್ನು ಕಾವ್ಯಹೇತುವೆಂದು ಪ್ರಾಚೀನರು ಗಣಿಸಿದ್ದಾರೆ. ದಂಡಿಯು ಸಹ

> ನೈಸರ್ಗಿಕೀ ಚ ಪ್ರತಿಭಾ ಶ್ರುತಂಚ ಬಹು ನಿರ್ಮಲಂ
> ಅಮಂದ ಶ್ಚಾಭಿಯೋಗೋऽಸ್ಯಾಃ ಕಾರಣಂ ಕಾವ್ಯಸಂಪದಃ
>
> ಕಾವ್ಯಾದರ್ಶ, I – 103

ಎಂದು ಹೇಳಿದ್ದಾನೆ. ಪ್ರತಿಭೆ, ವ್ಯುತ್ಪತ್ತಿ, ಅಭ್ಯಾಸ – ಇವು ಮೂರು ಸೇರಿ ಸಮುದಿತವು ಕಾವ್ಯಹೇತು.

ಜಗನ್ನಾಥನು ಪ್ರತಿಭೆಯೊಂದೇ ಕಾವ್ಯಹೇತು ಎನ್ನುತ್ತಾನೆ. ವ್ಯುತ್ಪತ್ತಿ, ಅಭ್ಯಾಸಗಳಿಂದ ಕೆಲವರಿಗೆ ಪ್ರತಿಭೆಯುಂಟಾಗಬಹುದು. ಕೆಲವರ ಪ್ರತಿಭೆಗೆ ಅದೃಷ್ಟ ಕಾರಣವಿರಬಹುದು. ವ್ಯುತ್ಪತ್ತಿ ಅಭ್ಯಾಸಗಳಿಲ್ಲದ ಹಳ್ಳಿಗರು, ಬಾಲಕರು, ಅಂಧರು – ಕಾವ್ಯನಿರ್ಮಾಣಮಾಡುವುದು ಕಂಡು ಬರುತ್ತದೆ. ಕಾವ್ಯರಚನೆಗೆ ಲೋಕವೃತ್ತದ ಜ್ಞಾನ ಬೇಕೆನ್ನುವುದು ಸರಿಯೇ. ಲೋಕಜ್ಞಾನವೆಂದರೆ ವಾರ್ತಾಪತ್ರಿಕೆಗಳನ್ನೋದುವುದರಿಂದಲೊ ದೇಶವಿದೇಶಗಳಲ್ಲಿ ಸಂಚರಿಸುವುದರಿಂದಲೊ ಬರುವ ಅನುಭವವಲ್ಲ. ಅದು ಕಾವ್ಯರಚನೆಗೆ ಉಪಯುಕ್ತವೆನ್ನಲು ಶಕ್ಯವಿಲ್ಲ. ಕವಿಗೆ ಬೇಕಾದ್ದು ಲೋಕದ ಚಿತ್ತವೃತ್ತಿಗಳ ಅರಿವು. ಚಿತ್ತವೃತ್ತಿಗಳ ತುಮುಲ

ಕವಿಪ್ರತಿಭಾಗೋಚರವೇ. ಕಾವ್ಯದಲ್ಲಿ ಶಾಸ್ತ್ರದ ಉಪಯೋಗ ಪರಿಮಿತ. ಶಾಸ್ತ್ರಾಭ್ಯಾಸವನ್ನು ಮಾಡದಿದ್ದರೂ ಸಾಮಾನ್ಯಜ್ಞಾನದಿಂದಲೇ ಕಾವ್ಯದ ನಿರ್ಮಾಣ ಸಾಧ್ಯವಾಗುತ್ತದೆ. ಕಾವ್ಯಜ್ಞರಿಂದ ಶಿಕ್ಷಣ ಪಡೆಯುವುದೂ ಅಷ್ಟೆ. ಕವಿಗಳೆಲ್ಲರೂ ಶಿಕ್ಷಣವನ್ನು ಪಡೆದಿದ್ದಾರೆಂದು ಹೇಳಲಾಗುವುದಿಲ್ಲ. ಆದ್ದರಿಂದ ಪ್ರತಿಭೆಯೊಂದೇ ಕಾವ್ಯಜನನಿ ಎನ್ನುವುದು ಯುಕ್ತ. ಅಭ್ಯಾಸ ವ್ಯುತ್ಪತ್ತಿಗಳು ಸಹಕಾರಿಗಳು.

ಹೀಗೆ ಕಾವ್ಯಹೇತುವನ್ನು ಪರಿಶೀಲಿಸುವಾಗ ಎರಡು ಪಕ್ಷಗಳು ಬಂದು ನಿಲ್ಲುತ್ತವೆ. ದೀರ್ಘವಾದ ವಿಮರ್ಶೆ ಈ ಲೇಖನದ ವ್ಯಾಪ್ತಿಗೆ ಮೀರಿದ್ದು. ಎರಡು ಪಕ್ಷಗಳನ್ನೂ ತೂಗಿದಾಗ ಹೀಗೆನಿಸುತ್ತದೆ: ಶಾಸ್ತ್ರಪಾಂಡಿತ್ಯವಾಗಲಿ ವ್ಯವಹಾರ ಕುಶಲತೆಯಾಗಲಿ ಪ್ರತಿಭೆಯಲ್ಲ. ಅವುಗಳಿಂದ ಪ್ರತಿಭೆ ಜನಿಸುವುದೆಂಬುದೂ ಒಪ್ಪತಕ್ಕದ್ದಲ್ಲ. ನವನವೋಲ್ಲೇಖ*ಶಾಲಿನಿಯಾದ ಪ್ರಜ್ಞೆ ಪ್ರತಿಭೆ. ಅದೊಂದು ಅನಿರ್ವಚನೀಯವಾದ ಶಕ್ತಿ. ಅದು ನೈಸರ್ಗಿಕವೆನ್ನಬಹುದು; ದೇವದತ್ತವೆನ್ನಬಹುದು. ಅದು ಕಾವ್ಯಹೇತುವೆನ್ನುವುದು ಯುಕ್ತವೇ. ಆದರೆ ಹಿಂದೆ ಹೇಳಿದ ವ್ಯುತ್ಪತ್ತಿಯು ಸಹಕಾರವಿದ್ದರೆ ಮಾತ್ರ ಅದು ಉತ್ಕೃಷ್ಟಕಾವ್ಯವನ್ನು ನಿರ್ಮಿಸಬಲ್ಲುದು. ಛಂದೋವ್ಯಾಕರಣಾದಿ ಶಾಸ್ತ್ರಜ್ಞಾನವಿಲ್ಲದೆ ನಿರ್ದೋಷವಾದ ಕಾವ್ಯವನ್ನು ರಚಿಸುವುದು ಸಾಧ್ಯವೆ ? ಲೋಕಶಾಸ್ತ್ರಗಳ ಅರಿವಿಲ್ಲದ ಅವ್ಯುತ್ಪನ್ನನಿಂದ ಮಹಾಕಾವ್ಯದ ರಚನೆ ಶಕ್ಯವೆ ? 'ಹಳ್ಳಿಯ ಹಾಡು' ಗಳಲ್ಲಿ ಕಾವ್ಯಾಂಶವಿಲ್ಲವೆಂದು ಯಾರೂ ಹೇಳರು. ಅವನ್ನು ಬರೆದವರು ಲೋಕಾನುಭವವಿದ್ದವರೇ. ಕ್ರಮಪರಿತು ಶಾಸ್ತ್ರಾಧ್ಯಯನ ಮಾಡದಿದ್ದರೂ ಬಲ್ಲವರ ಸಂಪರ್ಕದಿಂದ ತಕ್ಕಮಟ್ಟಿಗೆ ಶಾಸ್ತ್ರದ ತಿರುಳನ್ನು ತಿಳಿದವರೇ. ಛಂದಶ್ಶಾಸ್ತ್ರವನ್ನರಿಯದಿದ್ದರೂತಾಳಗತಿಯಿಂದಲೇ ಪದ್ಯಗಳನ್ನು ನಿರ್ಮಿಸಬಲ್ಲವರು. ಚೇತನಗಳ ಚಿತ್ತವೃತ್ತಿಗಳಾಗಲಿ ಅಚೇತನಗಳ ವಸ್ತು ಸೌಂದರ್ಯವಾಗಲಿ ಅವುಗಳ ನಿಕಟಸಂಪರ್ಕದಿಂದ ಗೋಚರಿಸತಕ್ಕವು. ಜಾತ್ಯಂಧನುಎಂತಹ ಪ್ರತಿಭಾಶಾಲಿಯಾದರೂ ದೃಶ್ಯವಾದ ಪ್ರಕೃತಿ ಸೌಂದರ್ಯವನ್ನೆಂದಿಗೂ ಚಿತ್ರಿಸಲಾರ. ಕಾವ್ಯರಚನೆಯನ್ನು ಸಂಗೀತಕಲೆಗೆ ಹೋಲಿಸಬಹುದು. ಸಂಗೀತಗಾರನಾಗಲು ಜನ್ಮತಃ ಬಂದ ಒಂದು ಸಂಸ್ಕಾರವಿರಬೇಕು. ಸಂಸ್ಕಾರಸಂಪನ್ನವಾದ ಪ್ರಜ್ಞಾವಿಶೇಷವನ್ನು ಪ್ರತಿಭೆಯೆನ್ನೋಣ. ಅದೊಂದರಿಂದಲೇ ಅವನು ಸಂಗೀತ ಕಲಾನಿಪುಣನಾಗಲಾರ. ಆ ಕಲೆಗೆ ಸಂಬಂಧಿಸಿದ ಸಾಹಿತ್ಯವನ್ನು ಅಭ್ಯಾಸಮಾಡಿ ಗುರುವಿನಿಂದ ಶಿಕ್ಷಣವನ್ನು ಪಡೆಯಬೇಕಾಗುತ್ತದೆ. ಆದ್ದರಿಂದ ವ್ಯುತ್ಪತ್ತಿ, ಅಭ್ಯಾಸ – ಇವುಗಳಿಂದ ಸಹಕೃತವಾದ ಪ್ರತಿಭೆ ಕಾವ್ಯಹೇತುವೆನ್ನುವುದು ಯುಕ್ತವಾಗಿ ತೋರುತ್ತದೆ.

* ನವನವೋನ್ಮೇಷಶಾಲಿನೀ ಎಂಬ ಪಾಠವೂ ಇದೆ — ಸಂ.

**ಕಾವ್ಯಪ್ರಯೋಜನ**

ಕಾವ್ಯವನ್ನು ಬರೆಯುವ ಕವಿ, ಅದನ್ನು ಓದುವ ಸಹೃದಯ – ಇವರಿಬ್ಬರಿಗೆ ಕಾವ್ಯದಿಂದಾಗುವ ಪ್ರಯೋಜನವೇನು ? – ಈ ಪ್ರಶ್ನೆಗೆ ಮಮ್ಮಟನು ಹೀಗೆ ಉತ್ತರಕೊಡುತ್ತಾನೆ :

> ಕಾವ್ಯಂ ಯಶಸೇऽರ್ಥಕೃತೇ ವ್ಯವಹಾರವಿದೇ ಶಿವೇತರಕ್ಷತಯೇ
> ಸದ್ಯಃಪರನಿರ್ವೃತಯೇ ಕಾಂತಾಸಂಮಿತತಯೋಪದೇಶಯುಜೇ
>
> ಕಾವ್ಯಪ್ರಕಾಶ, I – 2

'ಕಾವ್ಯವು ಕೀರ್ತಿಗೆ, ಧನಸಂಪಾದನೆಗೆ, ವ್ಯವಹಾರಜ್ಞಾನಕ್ಕೆ, ಅಮಂಗಳ ಪರಿಹಾರಕ್ಕೆ, ತತ್ಕಾಲದಲ್ಲಿ ಪರಮಾನಂದವನ್ನು ಪಡೆಯುವುದಕ್ಕೆ, ಕಾಂತಾಸಂಮಿತೆಯಿಂದ ಉಪದೇಶಿಸುವುದಕ್ಕೆ ಉಪಯುಕ್ತವಾಗುತ್ತದೆ.'

ಈ ಪ್ರಯೋಜನಗಳ ಪಟ್ಟಿಯಲ್ಲಿ ಕೆಲವು ಕವಿಗೆ, ಕೆಲವು ಸಹೃದಯನಿಗೆ ಉಪಯುಕ್ತವಾದವು. ಕೀರ್ತಿ, ಧನ – ಇವೆರಡು ಕವಿಗೆ ದೊರಕಬೇಕಾದ ಫಲಗಳು. ದೊರಕುವುದು ನಿಯತವೇನಲ್ಲ. ಕವಿ ಪುಣ್ಯಶಾಲಿಯಾದರೆ ಕೀರ್ತಿ ಬಂದೀತು; ಧನವೂ ಲಭಿಸೀತು. ವ್ಯವಹಾರಜ್ಞಾನವು ಸಹೃದಯನಿಗೆ ಆಗುವ ಲಾಭ. ಲೋಕದ ನಡೆವಳಿಕೆಯನ್ನೂ ವಿವಿಧಶಾಸ್ತ್ರಗಳನ್ನೂ ಸೂಕ್ಷ್ಮವಾಗಿ ಪರಿಶೀಲಿಸಿದ ಕವಿ ತನ್ನ ಜ್ಞಾನಕೋಶವನ್ನು ಕಾವ್ಯದಲ್ಲಿ ಅಳವಡಿಸಿರುತ್ತಾನೆ. ಆ ಕಾವ್ಯವನ್ನು ವ್ಯಾಸಂಗ ಮಾಡಿದಾಗ ನಮ್ಮ ಜ್ಞಾನಭಂಡಾರ ಬೆಳೆಯುವುದು ಸಹಜವೇ. ಮಯೂರನೆಂಬ ಕವಿ ತನಗೆ ಬಂದ ತೊನ್ನುರೋಗವನ್ನು 'ಸೂರ್ಯಶತಕ'ದ ನಿರ್ಮಾಣದಿಂದ ಪರಿಹರಿಸಿಕೊಂಡನಂತೆ. ಕೇರಳದ ನಾರಾಯಣಕವಿ 'ಭಾಗವತಸಾರ'ವನ್ನು ರಚಿಸಿ ತನ್ನ ವಾತರೋಗವನ್ನು ಗುಣಪಡಿಸಿಕೊಂಡನಂತೆ. ಈ ಕಾವ್ಯವು 'ನಾರಾಯಣೀಯ'ವೆಂದು ಪ್ರಸಿದ್ಧವಾಗಿದೆ. ಆಸ್ತಿಕ ಜನರು ರಾಮಾಯಣಾದಿ ಕಾವ್ಯಗ್ರಂಥಗಳನ್ನು ಶ್ರೇಯಸ್ಸಿಗಾಗಿ ಈಗಲೂ ಪಠಿಸುತ್ತಾರೆ. ಈ ರೀತಿಯಲ್ಲಿ ಅಮಂಗಳ ಪರಿಹಾರವೆಂಬ ಫಲ ಕವಿವಾಚಕರಿರ್ವರಿಗೂ ಲಭಿಸಬಹುದು. ಮುಖ್ಯವಾದ ಫಲ ಕಾವ್ಯಾಸ್ವಾದನೆಯಿಂದಾಗುವ ಪರಮಾನಂದ. ಇದು ಸದ್ಯದಲ್ಲಿಯೇ ಸಹೃದಯರಿಗೆ ದೊರಕುವ ನಿಯತವಾದ ಫಲ. ಮನೋರಂಜನೆಯೊಂದಿಗೆ ಧರ್ಮಾಧರ್ಮಗಳ ನೀತಿನಿಯಮಗಳ ಪರಿಜ್ಞಾನವನ್ನುಂಟುಮಾಡುವುದು ಸಾಹಿತ್ಯದ ಗುರಿಯಾಗಿರುತ್ತದೆ. ಗುರಿಯಾಗಿರಬೇಕು. 'ಕತ್ತಿಯ ಬಲಕ್ಕಿಂತ ಲೇಖನಿಯ ಬಲ ಅಧಿಕ' ಎಂಬ ನುಡಿ ಸುಳ್ಳಲ್ಲ. ವಾಚಕರ ಅಂತಃಕರಣದಮೇಲೆ ಕಾವ್ಯದಿಂದಾಗುವ ಪರಿಣಾಮವು ಅಲ್ಪವಲ್ಲ. ವೈಚಾರಿಕ ಲೇಖನಗಳಿಗಿಂತಲೂ ಕಾವ್ಯವು ಸುಕುಮಾರಮತಿಗಳಿಗೆ ಹಿಡಿಸುತ್ತದೆ.

ಕಾವ್ಯವು ಕಾಂತಾಸಂಮಿತ. ಕಾಂತೆಗೆ ಸದೃಶವಾದದ್ದು. ರಸಮಯವಾದ ಕಾವ್ಯ ಕಾಂತೆಯ ನಲ್ನುಡಿಯಂತೆ ಮನೋಹರವಾಗಿ ಹೃದಯವನ್ನು ಆರ್ದ್ರಗೊಳಿಸುತ್ತದೆ. ಹೃದಯವನ್ನು ಸಂಸ್ಕರಿಸಿ ಸನ್ಮಾರ್ಗದತ್ತ ಮನುಷ್ಯನನ್ನು ಪ್ರವರ್ತಿಸುತ್ತದೆ.

ಕೀರ್ತಿ, ಧನ ಮೊದಲಾದವು ಕಾವ್ಯದಿಂದಲೇ ಲಭಿಸುವ ನಿಯತಫಲಗಳೂ ಅಲ್ಲ. ಸದ್ಗುಣಗಳಿಂದಲೂ ಸತ್ಕಾರ್ಯಗಳಿಂದಲೂ ಕೀರ್ತಿ ಬರಬಹುದು. ಕೃಷಿ ವಾಣಿಜ್ಯಗಳಿಂದ ಧನವನ್ನು ಆರ್ಜಿಸಬಹುದು. ಹೀಗೆಯೇ ವ್ಯವಹಾರ ಜ್ಞಾನಾದಿಗಳು ಮಾರ್ಗಾಂತರದಿಂದಲೂ ಲಭಿಸುತ್ತವೆ. ವಿಗಲಿತವೇದ್ಯಾಂತರವಾದ ಆಹ್ಲಾದ ಒಂದೇ ಕಾವ್ಯದ ನಿಯತಫಲ. ವಾಮನನು 'ಕಾವ್ಯಂ ಗ್ರಾಹ್ಯಮಲಂಕಾರಾತ್ ಸೌಂದರ್ಯಮಲಂಕಾರಃ' ಎಂದು ಸೂತ್ರಿಸಿರುವುದು ಇದಕ್ಕಾಗಿಯೇ. ಅನ್ಯದುರ್ಲಭವಾದ ಸೌಂದರ್ಯವಿಶೇಷವಿರುವುದರಿಂದಲೇ ಸಹೃದಯನಿಗೆ ಕಾವ್ಯವು ಗ್ರಾಹ್ಯವಾಗಿದೆ.

ಕೀರ್ತಿ, ಧನಾದಿಗಳು ಕವಿಗೆ ನಿಯತವಾಗಿ ಲಭಿಸಲಾರವು. ನಿಯತವಾಗಿ ಲಭಿಸುವ ಆನಂದ ಸಹೃದಯನಿಗೆ! – ಎಂದ ಮೇಲೆ ಕವಿ ಕಾವ್ಯವನ್ನು ರಚಿಸುವುದಾದರೂ ಏಕೆ ? ಕವಿಗೂ ಆನಂದ ಉಂಟು. ಅದು ಇಮ್ಮಡಿಯಾದದ್ದು. ಒಂದು ಸೃಷ್ಟಿಯಿಂದ, ಇನ್ನೊಂದು ದೃಷ್ಟಿಯಿಂದ. ಕಾವ್ಯಸೃಷ್ಟಿಯಿಂದ ಕವಿ ಆನಂದಿಸುವನು. ಹೃದಯದಲ್ಲಿ ತುಂಬಿದ ರಸ ವಾಗ್ರೂಪದಲ್ಲಿ ಹರಿದಾಗ ಅವನಿಗೆ ಸಂತುಷ್ಟಿ. ಪ್ರಜ್ಞಾಶಾಲಿಯಾದ ಕವಿಗೆ ಯಾವುದಾದರೊಂದು ವಸ್ತುಸೌಂದರ್ಯವು ಗೋಚರಿಸಿದಾಗ, ವಸ್ತುಭೇದವನ್ನನುಸರಿಸಿ ಅವನ ಅಂತಃಕರಣವು ದ್ರುತವೊ ದೀಪ್ತವೊ ವಿಕಸಿತವೊ ಆಗುವುದು. ಆ ಸ್ಥಿತಿಯಲ್ಲಿರುವ ಅಂತಃಕರಣವನ್ನು ಕವಿಯ ಭಾವವೆನ್ನಬಹುದು. ಮತ್ತೆ ಮತ್ತೆ ಅದರ ಅನುಸಂಧಾನದಿಂದ ಭಾವವು ಉಜ್ವಲಿಸುವುದು. ಕೆಳಗೆ ಬೆಂಕಿ ಉರಿಯುವಾಗ ಪಾತ್ರೆಯಲ್ಲಿರುವ ಹಾಲು ಉಕ್ಕುವಂತೆ, ಭಾವವು ಉಕ್ಕಿ ವಾಗ್ರೂಪದಲ್ಲಿ ಹರಿಯುವುದು. ಆಗಲೇ ಕವಿಗೆ ಕೃತಕೃತ್ಯನಾದೆನೆಂಬ ಆತ್ಮತೃಪ್ತಿ. ಹೃದಯದ ಭಾರ ಹಗುರಾಯಿತೆಂಬ ಸಂತಸ. ಇದು ಸೃಷ್ಟಿಯ ಆನಂದ. ಕವಿಯು ಸಹೃದಯನಾಗಿ ದೃಷ್ಟಿಕಾರ್ಯದ ಆನಂದವನ್ನೂ ಸವಿಯುವನು.

## ಸಹೃದಯ

ಸಮಾನವಾದ ಹೃದಯ ಉಳ್ಳವನು ಸಹೃದಯ. ಕವಿಯ ಹೃದಯದೊಡನೆ ಓದುಗನ ಹೃದಯವು ತಾದಾತ್ಮ್ಯವನ್ನು ಪಡೆದಲ್ಲದೆ ರಸಾನುಭವವಾಗದು. ವಾಚಕನು ತನ್ನ ಶಂಕಾಸಂದೇಹಗಳನ್ನು ಬದಿಗಿಟ್ಟು, ಕವಿಯ ಹೇಳಿಕೆಯನ್ನು ಪೂರ್ಣವಾಗಿ

ನಂಬಿ, ಅವನ ಅನುಭವ ತನ್ನದೇ ಎಂದರಿಯುವುದು ಸಹೃದಯತೆ. ಮತ್ತು ವರ್ಣನೀಯರಾದ ದುಷ್ಯಂತಾದಿಗಳ ಹೃದಯದೊಂದಿಗೆ ಸಮಾನವಾದ ಹೃದಯವುಳ್ಳವನು ಸಹೃದಯ. ಭಾವಗಳ ಸಾಧಾರಣೀಕರಣವಾಗುವುದು ಸಹೃದಯತೆ ಇದ್ದರೆ ಮಾತ್ರ. ಇದಿಲ್ಲದೆ ವ್ಯಂಜನಾವೃತ್ತಿ ಕಾರ್ಯೋನ್ಮುಖವಾಗದು. ಸಹೃದಯತೆ ವ್ಯಂಜನಾವೃತ್ತಿಯ ರೆಕ್ಕೆ. ಸಹೃದಯನು ಯಾರೆಂಬುದನ್ನು ಅಭಿನವಗುಪ್ತನು ಹೀಗೆ ತಿಳಿಸುತ್ತಾನೆ : "ಯೇಷಾಂ ಕಾವ್ಯಾನುಶೀಲನಾಭ್ಯಾಸವಶಾತ್ ವಿಶದೀಭೂತೇ ಮನೋಮುಕುರೇ ವರ್ಣನೀಯ ತನ್ಮಯೀಭವನಯೋಗ್ಯತಾ ತೇ ಹೃದಯ ಸಂವಾದಭಾಜಃ ಸಹೃದಯಾಃ" (ಲೋಚನ – ಧ್ವನ್ಯಾಲೋಕದ 'ಕಾವ್ಯಸ್ಯಾತ್ಮಾ ಧ್ವನಿರಿತಿ' ಎಂಬ ಶ್ಲೋಕದ ವೃತ್ತಿ) – 'ಕಾವ್ಯಗಳನ್ನು ಪರಿಶೀಲಿಸುವುದರಿಂದ ಮನಸ್ಸೆಂಬ ಕನ್ನಡಿ ನಿರ್ಮಲವಾದಾಗ, ವರ್ಣನೀಯ ವಿಷಯದಲ್ಲಿ ತನ್ಮಯವಾಗುವ ಯೋಗ್ಯತೆ ಯಾರಿಗಿದೆಯೊ, ಅಂಥ ಹೃದಯಸಂವಾದ ಉಳ್ಳವರು ಸಹೃದಯರು."

ಕವಿಯೂ ಸಹೃದಯನಾಗುತ್ತಾನೆ. ಕಾವ್ಯವನ್ನು ರಚಿಸುವಾಗ ಒಮ್ಮೆ, ರಚಿಸಿದ ಕಾವ್ಯವನ್ನು ತಾನೇ ಪಠಿಸುವಾಗ ಮತ್ತೊಮ್ಮೆ. ಕಾವ್ಯವನ್ನು ರಚಿಸುವಾಗ ವರ್ಣನೀಯ ದುಷ್ಯಂತಾದಿಗಳ ಹೃದಯದೊಡನೆ ಕವಿಯ ಹೃದಯ ಸಂವಾದಿಯಾಗಿರುತ್ತದೆ. ರಚಿಸಿದ ಕಾವ್ಯವನ್ನು ತಾನು ಪಠಿಸುವಾಗ ಕವಿ ಮತ್ತು ದುಷ್ಯಂತಾದಿಗಳ ಹೃದಯದೊಡನೆ ಸಂವಾದಿಯಾಗಿರುತ್ತದೆ.

ವಸ್ತುತಃ ಕಾವ್ಯರಚನೆ ಕವಿಯ ಸ್ವಭಾವ. ಸೂರ್ಯೋದಯವಾದಾಗ ಚಿಲಿಪಿಲಿಗುಟ್ಟುವುದು ಹಕ್ಕಿಯ ಸ್ವಭಾವ. ಮುಗಿಲಲ್ಲಿ ಮೋಡವನ್ನು ಕಂಡಾಗ ಕೇಕಾರವದೊಡನೆ ಕುಣಿಯುವುದು ನವಿಲಿನ ಸ್ವಭಾವ. ಆನಂದೋತ್ಸಾಹಗಳು ತುಂಬಿದಾಗ ಜನರು ತಾವಾಗಿ ಹಾಡಿಕೊಳ್ಳುವುದುಂಟು. ಹೃದ್ಗತವಾದ ಆನಂದದ ಅಭಿವ್ಯಕ್ತಿ ಇದು. ಕವಿಯ ಆನಂದದ ಅಭಿವ್ಯಕ್ತಿ ಕಾವ್ಯರೂಪದಲ್ಲಿ ಕಾಣುವುದು. ಬಳ್ಳಿಯಲ್ಲಿ ಹೂವರಳುವುದೂ ಹೂವಿನಿಂದ ಪರಿಮಳ ಹರಡುವುದೂ ಕವಿಯಿಂದ ಕಾವ್ಯರಚನೆಯಾಗುವುದೂ ಸಹಜಕ್ರಿಯೆ. ಅದರಿಂದ ಜನರಿಗಾಗುವ ಆನಂದ ಆನುಷಂಗಿಕ. ಕವಿಯು ಎಲ್ಲರಂತೆ ಮನುಷ್ಯನಾದ್ದರಿಂದ ತನ್ನ ಆನಂದವನ್ನು ಜನರಿಗೆ ಹಂಚಬೇಕೆಂಬ ಆಸೆ ಇರುವುದೂ ಸಹಜವೇ.

*

**ಚಮತ್ಕೃತಿಪೋಷಕಗಳು**

ಕಾವ್ಯದಲ್ಲಿ ದೃಶ್ಯ, ಶ್ರವ್ಯ – ಎಂದು ಲಾಕ್ಷಣಿಕರು ಎರಡು ವರ್ಗಗಳನ್ನು

ಮಾಡುತ್ತಾರೆ. ದೃಶ್ಯದಲ್ಲಿ ಹತ್ತು ರೂಪಕಗಳೂ ಹದಿನೆಂಟು ಉಪರೂಪಕಗಳೂ ಸೇರುತ್ತವೆ. ಶ್ರವ್ಯದಲ್ಲಿ ಪದ್ಯ, ಗದ್ಯ, ಉಭಯಮಿಶ್ರವಾದ ಚಂಪೂ ಎಂಬ ಭೇದಗಳಿವೆ. ಇವುಗಳಲ್ಲಿ ಮಹಾಕಾವ್ಯ, ಕಾವ್ಯ, ಖಂಡಕಾವ್ಯ, ಪ್ರಜ್ಯಾ, ಕಥಾ, ಆಖ್ಯಾಯಿಕಾ – ಮುಂತಾದ ಒಳವಿಭಾಗಗಳು ಬೇರೆ. ಈ ವಿಭಾಗವೆಲ್ಲವೂ ವ್ಯವಹಾರಕ್ಕಾಗಿ ಕಲ್ಪಿತವಾದದ್ದು. ಆಕೃತಿಭೇದದಿಂದ ನಾಮಭೇದ. ಬೇರೆ ಬೇರೆ ಆಕೃತಿಯಲ್ಲಿ ಮಾಡಿದ ಸಕ್ಕರೆಯ ಅಚ್ಚುಗಳಿದ್ದಂತೆ. ಹೆಸರು ಬೇರೆ; ರುಚಿ ಒಂದೇ.

ಕಾವ್ಯದ ಸಾರ ರಸವಾದರೆ ರಸದ ಸಾರ ಚಮತ್ಕಾರ. ಚಮತ್ಕಾರವೆಂದರೆ ಲೋಕೋತ್ತರವಾದ ಆನಂದವೆಂದು ಹಿಂದೆ ನೋಡಿದೆವು. ರಸದಿಂದಾಗುವ ಚಮತ್ಕೃತಿಗೆ ಗುಣ, ರೀತಿ, ಅಲಂಕಾರ, ಔಚಿತ್ಯಗಳು ಪೋಷಕಗಳು. ಇವೆಲ್ಲವೂ ಕಾವ್ಯಾಂಗಗಳು; ಕಾವ್ಯಘಟಕಗಳು. ಆದ್ದರಿಂದ ಚಮತ್ಕೃತಿಪೋಷಕಗಳನ್ನು ಅಂತರಂಗಗಳೆನ್ನಬಹುದು. ಕಾವ್ಯಘಟಕಗಳಾಗದೆ ಕಾವ್ಯದ ಚಮತ್ಕೃತಿಗೆ ಪೋಷಕಗಳಾದವನ್ನು ಬಹಿರಂಗಗಳೆನ್ನಬಹುದು. ದೃಶ್ಯಕಾವ್ಯದಲ್ಲಿ ಅಭಿನಯ, ಗೀತ, ವಾದ್ಯ, ನೃತ್ಯಗಳು ಈ ಗುಂಪಿಗೆ ಸೇರುತ್ತವೆ. ಇವುಗಳ ವಿವರಣೆ ನಾಟ್ಯಶಾಸ್ತ್ರದಲ್ಲುಂಟು. ಉಭಯಸಾಧಾರಣವಾದ ಒಂದು ಅಂಶವನ್ನು ಸಂಕ್ಷೇಪವಾಗಿ ಇಲ್ಲಿ ಪ್ರಸ್ತಾವಿಸಬಹುದು.

ಅಭಿನಯದಲ್ಲಿ ಆಂಗಿಕ, ವಾಚಿಕ, ಆಹಾರ್ಯ, ಸಾತ್ತ್ವಿಕ ಎಂದು ನಾಲ್ಕು ಪ್ರಕಾರಗಳುಂಟು. ಇವುಗಳಲ್ಲಿ ವಾಚಿಕವು ದೃಶ್ಯ, ಶ್ರವ್ಯ – ಉಭಯ ಸಾಧಾರಣ. ಶ್ರವ್ಯವೆಂದರೆ ಕೇಳಲು ಅರ್ಹ. ಶ್ರಾವ್ಯವೆಂದರೆ ಅವಶ್ಯ ಕೇಳಬೇಕಾದ್ದು. ಶ್ರವ್ಯವು ಶ್ರಾವ್ಯವಾಗಬೇಕಾದರೆ ವಾಚಿಕಾಭಿನಯವಿರಬೇಕು. ದೃಶ್ಯ, ಶ್ರವ್ಯಗಳೆರಡೂ ವಾಚ್ಯವಾಗಬಹುದಷ್ಟೆ. ವಾಚ್ಯವಾದಾಗ ಉಭಯವೂ ಶ್ರವ್ಯವೇ ಆಗಿರುತ್ತದೆ.

'ಗಮಕ' ಎಂಬ ಹೆಸರಿನಿಂದ ಕಾವ್ಯವಾಚನಪದ್ಧತಿಯೊಂದು ಪ್ರಚುರವಾಗಿದೆ. ಭರತಮುನಿಯ ನಾಟ್ಯಶಾಸ್ತ್ರವನ್ನು ಪರಿಶೀಲಿಸಿದರೆ, ಗಮಕಕಲೆಯನ್ನು ವಾಚಿಕಾಭಿನಯವೆನ್ನಬಹುದು. 'ಅಭಿನಯತೀತ್ಯಭಿನಯಃ– ಅಭಿಮುಖವಾಗಿ ಒಯ್ಯತಕ್ಕದ್ದು ಅಭಿನಯ.' ಕಾವ್ಯಾರ್ಥ ಆಸ್ವಾದಯೋಗ್ಯವಾಗುವಂತೆ ಅಭಿಮುಖವಾಗಿ ಒಯ್ದು ಸಹೃದಯನನ್ನು ಯಾವುದು ಮುಟ್ಟಿಸುತ್ತದೆಯೊ ಅದು ಅಭಿನಯ. ವಾಚಕನು ರಸಭಾವಗಳಿಗೆ ಅನುಗುಣವಾಗಿ ಕಾವ್ಯವನ್ನು ಓದಿದಾಗ ಕಾವ್ಯಸೌಂದರ್ಯ ಹೃದಯಸ್ಪರ್ಶಿಯಾಗುವುದು ಅನುಭವಸಿದ್ಧ. ಕಾವ್ಯವಾಚಕನಿಗೆ ಮನನೀಯವಾದ ಕೆಲವು ವಿಷಯಗಳು ಪಾಣಿನೀಯ ಶಿಕ್ಷೆಯಲ್ಲಿ ದೊರೆಯುತ್ತವೆ :

ವ್ಯಾಘ್ರೀ ಯಥಾ ಹರೇತ್‌ಪುತ್ರಾನ್ ದಂತಾಭ್ಯಾಂನ ಚ ಪೀಡಯೇತ್
ಭೀತಾ ಪತನಭೇದಾಭ್ಯಾಂ ತದ್ವದ್ವರ್ಣಾನ್ ಪ್ರಯೋಜಯೇತ್
ಮಾಧುರ್ಯಮಕ್ಷರವ್ಯಕ್ತಿಃ ಪದಚ್ಛೇದಸ್ತು ಸುಸ್ವರಃ
ಧೈರ್ಯಂ ಲಯಸಮರ್ಥಂ ಚ ಷಡೇತೇ ಪಾಠಕಾಗುಣಾಃ

ತಾತ್ಪರ್ಯ: ಹೆಣ್ಣುಹುಲಿ ತನ್ನ ಮರಿಗಳನ್ನು ಹಲ್ಲುಗಳಿಂದ ಕಚ್ಚಿಹಿಡಿದು ಒಯ್ಯುತ್ತದೆ. ಮರಿಗಳು ಕೆಳಗೆ ಬೀಳಲೂಬಾರದು, ಹಲ್ಲುಗಳಿಂದ ಅವುಗಳಿಗೆ ಗಾಯವೂ ಆಗಬಾರದು – ಆ ರೀತಿಯಲ್ಲಿ ಮರಿಗಳನ್ನು ಕಚ್ಚಿಹಿಡಿದಿರುತ್ತದೆ. ಹಾಗೆ ವಾಚಕನು ಅಕ್ಷರಗಳನ್ನು ಸ್ಫುಟಮಧುರವಾಗಿ ಉಚ್ಚರಿಸಬೇಕು. ಕರ್ಕಶವಾಗಿ ಪೀಡಿಸಬಾರದು.

ಗೀತೀ ಶೀಘ್ರೀ ಶಿರಃಕಂಪೀ ತಥಾ ಲಿಖಿತಪಾಠಕಃ
ಅನರ್ಥಜ್ಞೋಽಲ್ಪಕಂಠಶ್ಚ ಷಡೇತೇ ಪಾಠಕಾಧಮಾಃ

ತಾತ್ಪರ್ಯ : ಓದುವಾಗ ಅನಾವಶ್ಯಕವಾಗಿ ರಾಗವನ್ನೆಳೆಯುವವನು, ಬೇಗ ಬೇಗನೆ ಓದುವವನು ತಲೆಯಾಡಿಸಕತ್ಕವನು, (ತಪ್ಪಿದ್ದರೂ ತಿದ್ದಿಕೊಳ್ಳದೆ) ಬರೆದದ್ದನ್ನು ಹಾಗೆಯೇ ಓದುವವನು, ಅರ್ಥವನ್ನರಿಯದವನು, ಅಲ್ಪಕಂಠ – ಈ ಆರುಮಂದಿ ಪಾಠಕಾಧಮರು! ಮಾಧುರ್ಯ, ಅಕ್ಷರಸ್ಫುಟತೆ, ಪದವಿಭಾಗ, ಸುಸ್ವರ, ಧೈರ್ಯ, ಲಯಬದ್ಧ ವಾಗಿಹೇಳುವುದು–ಇವು ಪಾಠಕನಲ್ಲಿರಬೇಕಾದ ಗುಣಗಳು*.

1. ಸ್ವರಗಳು : ಷಡ್ಜಾದಿ ಸಪ್ತಸ್ವರಗಳನ್ನು ರಸೋಚಿತವಾಗಿ ಬಳಸಬೇಕು. ಹಾಸ್ಯಶೃಂಗಾರಗಳಲ್ಲಿ ಮಧ್ಯಮ ಪಂಚಮಗಳೂ ವೀರರೌದ್ರಾದ್ಭುತಗಳಲ್ಲಿ ಷಡ್ಜ ಋಷಭಗಳೂ ಕರುಣದಲ್ಲಿ ಗಾಂಧಾರ ನಿಷಾದಗಳೂ ಬೀಭತ್ಸ ಭಯಾನಕಗಳಲ್ಲಿ ಧೈವತವೂ ಶ್ರೇಷ್ಠ.

2. ಸ್ಥಾನಗಳು : ಉರಸ್ಸು, ಶಿರಸ್ಸು, ಕಂಠ – ಇವು ಮೂರು ಸ್ವರಸ್ಥಾನಗಳು. ಬಹುದೂರದಲ್ಲಿ ಇರುವವನೊಡನೆ ವ್ಯವಹರಿಸುವಾಗ ಶಿರಃಸ್ಥಾನದಲ್ಲಿಯೂ ಸ್ವಲ್ಪದೂರದಲ್ಲಿರುವಾಗ ಕಂಠಸ್ಥಾನದಲ್ಲಿಯೂ ಸಮೀಪದಲ್ಲಿರುವಾಗ ಉರಃಸ್ಥಾನದಲ್ಲಿಯೂ ಸ್ವರಗಳು ಉತ್ಪನ್ನವಾಗಬೇಕು.

3. ಕಾಕು : ಶೋಕ, ಭೀತಿ – ಮುಂತಾದ ಚಿತ್ತವೃತ್ತಿಗಳು ಇರುವಾಗ ಅಕ್ಷರಗಳ ಉಚ್ಚಾರಣೆಯಲ್ಲಿ ಸಂಭವಿಸುವ ಧ್ವನಿವಿಕಾರಕ್ಕೆ ಕಾಕುವೆಂದು ಹೆಸರು. ರಸಪೋಷಣೆಗೆ ಕಾಕುಧ್ವನಿ ಅತ್ಯಂತ ಉಪಯುಕ್ತ.

* ನಾಟ್ಯಶಾಸ್ತ್ರದ 17ನೆಯ ಅಧ್ಯಾಯದಲ್ಲಿ ಭರತನು ಹೇಳಿದ ಕೆಲವು 'ಪಾಠ್ಯಗುಣ'ಗಳನ್ನು ಇಲ್ಲಿ ಸಂಗ್ರಹಿಸಲಾಗಿದೆ.

4. ವರ್ಣಗಳು : ಉದಾತ್ತ, ಅನುದಾತ್ತ, ಸ್ವರಿತ – ಎಂಬ ಸ್ವರಭೇದಗಳು ವೇದದಲ್ಲಿ ಉಂಟಷ್ಟೆ. ಕಾವ್ಯದಲ್ಲಿ ಗದ್ಯಪದ್ಯಗಳನ್ನು ಪಠಿಸುವಾಗಲೂ ಇವು ಉಪಯುಕ್ತವಾಗುತ್ತವೆ. ಇವುಗಳ ಜೊತೆಗೆ ಕಂಪಿತ ಎಂಬ ಸ್ವರಭೇದವೂ ಕಾವ್ಯವಾಚನದಲ್ಲಿ ಆವಶ್ಯಕ. ಹಾಸ್ಯಶೃಂಗಾರಗಳಲ್ಲಿ ಸ್ವರಿತೋದಾತ್ತಗಳೂ ವೀರ ರೌದ್ರಾದ್ಭುತಗಳಲ್ಲಿ ಉದಾತ್ತಕಂಪಿತಗಳೂ ಕರುಣವಾತ್ಸಲ್ಯ ಭಯಾನಕಗಳಲ್ಲಿ ಅನುದಾತ್ತ ಸ್ವರಿತ ಕಂಪಿತಗಳೂ ರಸಪೋಷಕಗಳಾಗುತ್ತವೆ.

5. ಅಲಂಕಾರಗಳು : ಇವು ಅಕ್ಷರೋಚ್ಚಾರಣೆಯಲ್ಲಿ ಸಂಭವಿಸುವ ಧ್ವನಿಭೇದಗಳು, ಉಪಮಾದ್ಯಲಂಕಾರಗಳಲ್ಲ. ಉಚ್ಚ, ದೀಪ್ತ, ಮಂದ್ರ, ನೀಚ, ದ್ರುತ, ವಿಲಂಬಿತ – ಎಂಬ ಆರು ಅಲಂಕಾರಗಳುಂಟು. ಶಿರಃಸ್ಥಾನಗತವಾದ ತಾರಸ್ವರವು ಉಚ್ಚವೆನಿಸುತ್ತದೆ. ಇದನ್ನು ದೂರಸ್ಥ ಸಂಭಾಷಣೆ, ಬೆದರಿಸುವುದು – ಮುಂತಾದ ಸಂದರ್ಭಗಳಲ್ಲಿ ಬಳಸಬೇಕು. ದೀಪ್ತವು ತಾರತರವಾದದ್ದು. ಇದನ್ನು ಕ್ರೋಧ, ದರ್ಪ, ಕಠೋರ ವಚನಾದಿಗಳಲ್ಲಿ ಬಳಸಬೇಕು. ಮಂದ್ರವು ಉರಃಸ್ಥಾನಗತವಾದದ್ದು. ನಿರ್ವೇದ, ಚಿಂತೆ, ದೈನ್ಯಾದಿಗಳಲ್ಲಿ ಹಿತಕರವಾದದ್ದು. ಮಂದ್ರಕ್ಕಿಂತ ಲಘುತರವಾದದ್ದು ನೀಚಸ್ವರ. ಇದು ಆಯಾಸ, ರೋಗ, ಭಯಾದಿಗಳಲ್ಲಿ ಉಪಯುಕ್ತ. ಕಂಠಗತವಾದ ಶೀಘ್ರೋಚ್ಚಾರಣೆಗೆ ದ್ರುತವೆಂದು ಹೆಸರು. ಇದು ತ್ವರೆ, ಸಂಭ್ರಮ, ಭಯಾದಿಗಳಲ್ಲಿ ಭಾವಪೋಷಕವಾಗುತ್ತದೆ. ಕಂಠಗತವಾದ ವಿಲಂಬಿತೋಚ್ಚಾರಣೆಗೆ ವಿಲಂಬಿತವೆಂದು ಹೆಸರು. ಇದು ಶೃಂಗಾರ, ವಿತರ್ಕ, ವಿಚಾರಾದಿಗಳಲ್ಲಿ ಉಪಯುಕ್ತ.

6. ಅಂಗಗಳು : ವಿಚ್ಛೇದ, ಅರ್ಪಣ, ವಿಸರ್ಗ, ಅನುಬಂಧ, ದೀಪನ, ಪ್ರಶಮನ – ಎಂಬ ಆರು ಅಂಗಗಳು ಗೇಯಕ್ಕೆ ಉಪಯುಕ್ತವಾದವು. ಇವೆಲ್ಲವೂ ವಿಶೇಷವಾಗಿ ವಾಗ್ಗೇಯಕಾರರಿಗೆ ಬೇಕಾದವು. ಸಂಗೀತಶಾಸ್ತ್ರಕ್ಕೆ ಸಂಬಂಧಿಸಿದವು.*

ಛಂದಸ್ಸು : ಛಂದಸ್ಸಿನ ವಿಚಾರವಾಗಿ ಎರಡು ಮಾತುಗಳನ್ನು ಹೇಳಬಹುದು. ಚಿತ್ತವೃತ್ತಿಗಳ ಮನೋಹರವಾದ ಅಭಿವ್ಯಕ್ತಿಯೇ ಕಾವ್ಯದ ಜೀವಾಳ. ಕವಿಯು ಭಾವನಾವಿಷ್ಟನಾದಾಗಲೇ ಅಂತಹ ಅಭಿವ್ಯಕ್ತಿ ಸಾಧ್ಯ. ಕವಿಯ ಹೃದಯವು ಭಾವಾರ್ದ್ರವಾದಾಗ ಹೊಮ್ಮುವ ನುಡಿ ಹಾಡಿನ ರೂಪದಲ್ಲಿ ಹರಿಯುವುದು ನಿಸರ್ಗಧರ್ಮ. ಕ್ರೌಂಚಪಕ್ಷಿಯ ವಧೆಯಿಂದಾದ ವಾಲ್ಮೀಕಿಮುನಿಗಳ ಶೋಕವು ಶ್ಲೋಕರೂಪದಲ್ಲಿ ವ್ಯಕ್ತವಾಯಿತು. 'ಶೋಕಃ ಶ್ಲೋಕತ್ವಮಾಗತಃ'

* ವಿಸ್ತರ ಭಯದಿಂದ ಇಲ್ಲಿ ವಿವರಿಸಲು ಶಕ್ಯವಿಲ್ಲ.

ಆದ್ದರಿಂದಲೇ ಸಾಹಿತ್ಯಪ್ರಪಂಚದಲ್ಲಿ ಪದ್ಯಕಾವ್ಯಗಳು ಅಧಿಕ. ಗದ್ಯ ಚಮತ್ಕೃತಿಗಿಂತ ಪದ್ಯಚಮತ್ಕೃತಿ ವಿಶಿಷ್ಟವಾದದ್ದು.

ಸನ್ನಿವೇಶಕ್ಕನುಗುಣವಾಗಿ ಅನುರೂಪವಾದ ಛಂದಸ್ಸನ್ನಾರಿಸಿಕೊಳ್ಳುವುದು ಕವಿಯ ಜಾಣ್ಮೆ. ಎಲ್ಲ ಛಂದಸ್ಸುಗಳೂ ಎಲ್ಲ ಸನ್ನಿವೇಶಗಳಿಗೂ ಹೊಂದುವುದಿಲ್ಲ. ಸ್ರಗ್ಧರೆಯು ಶೃಂಗಾರ ಕರುಣೆಗಳಿಗೆ ಹಿತವಲ್ಲ. ಮಂದಾಕ್ರಾಂತವು ರೌದ್ರಬೀಭತ್ಸಗಳಿಗೆ ಸರಿಯಾಗದು. ಕನ್ನಡದ ಸಾಂಗತ್ಯವು ವೀರರೌದ್ರಗಳಿಗೆ ಅನನುಗುಣ. ಕೆಲವು ಬಗೆಯ ವೃತ್ತಗಳನ್ನು ಎಲ್ಲ ಸಂದರ್ಭಗಳಲ್ಲಿಯೂ ಬಳಸಬಹುದು. ಉದಾಹರಣೆಗೆ, ಸಂಸ್ಕೃತದ ಅನುಷ್ಟುಪ್, ಕನ್ನಡದ ಭಾಮಿನೀಷಟ್ಪದಿ. ಕಾವ್ಯಮಾರ್ಗದಲ್ಲಿ ಎಲ್ಲಿಯೂ ಬಳಸಲು ಅನರ್ಹವಾದ ವೃತ್ತಗಳೂ ಉಂಟು.

ಸಂತ್ಯನ್ಯಾನ್ಯಪಿ ವೃತ್ತಾನಿ ಯಾನ್ಯುಕ್ತಾನೀಹ ಪಂಡಿತೈಃ
ನ ಚ ತಾನಿ ಮಯೋಕ್ತಾನಿ ನ ಶೋಭಾಂ ಜನಯಂತಿ ಹಿ

ನಾಟ್ಯಶಾಸ್ತ್ರ, XV – 141

"ಇಲ್ಲಿ (ಛಂದಶ್ಶಾಸ್ತ್ರದಲ್ಲಿ) ವಿದ್ವಾಂಸರು ಹೇಳಿದ ಇತರ ವೃತ್ತಗಳೂ ಉಂಟು. ಅವುಗಳ ಲಕ್ಷಣವನ್ನು ನಾನು ಹೇಳಲಿಲ್ಲ. ಏಕೆಂದರೆ, ಅವು ಶೋಭೆಯನ್ನುಂಟು ಮಾಡುವುದಿಲ್ಲ."

ಶ್ರೀಮದ್ರಾಮಾಯಣದ ಬಾಲಕಾಂಡದ ನಾಲ್ಕನೆಯ ಸರ್ಗದಲ್ಲಿ ಲವಕುಶರು ರಾಮಾಯಣವನ್ನು ಮಧುರವಾಗಿ ಹಾಡಿದರೆಂದು ವರ್ಣನೆ ಇದೆ. ರಾಮಾಯಣವು 'ಪಾಠ್ಯೇ ಗೇಯೇ ಚ ಮಧುರಂ.' ಗಮಕವು ಪಾಠ್ಯವೊ ಗಾನವೊ ಎಂಬುದು ವಿಚಾರಣೀಯ.

*

## ಕನ್ನಡದಲ್ಲಿ ಕಾವ್ಯಮೀಮಾಂಸೆ

ಕನ್ನಡದಲ್ಲಿ ನಡೆದ ಕಾವ್ಯಮೀಮಾಂಸೆ ಸಂಸ್ಕೃತ ಲಾಕ್ಷಣಿಕರು ತೋರಿಸಿದ ದಾರಿಯಲ್ಲಿಯೇ ಸಾಗಿದೆ. ವಿಷಯ ನಿರೂಪಣೆಯಲ್ಲಾಗಲಿ ವಿಚಾರಕ್ರಮದಲ್ಲಾಗಲಿ ಎತ್ತಿ ಹೇಳಬೇಕಾದ ನವೀನತೆ ಏನೂ ಕಾಣದು. ಕನ್ನಡದಲ್ಲಿ ಉಪಲಬ್ಧವಿರುವ ಲಕ್ಷಣ ಗ್ರಂಥಗಳಲ್ಲಿ ಕವಿರಾಜಮಾರ್ಗ ಪ್ರಾಚೀನಕೃತಿ. ಇದರ ಕಾಲ ಕ್ರಿ. ಶ. ೯ ನೆಯ ಶತಮಾನ. ರಾಷ್ಟ್ರಕೂಟ ಚಕ್ರವರ್ತಿಯಾದ ನೃಪತುಂಗನು ಇದರ ಕರ್ತೃವೆಂದು ಕೆಲವರೂ ಅವನ ಆಸ್ಥಾನದಲ್ಲಿದ್ದ ಶ್ರೀವಿಜಯನೆಂಬ ಕವಿ ಅದರ ಕರ್ತೃ ಎಂದು ಕೆಲವರೂ ಭಿನ್ನಾಭಿಪ್ರಾಯ ಉಂಟು.

1. ನೃಪತುಂಗ–ಶ್ರೀವಿಜಯ : ಕವಿರಾಜಮಾರ್ಗದಲ್ಲಿ ದೋಷಾದೋಷಾನು ವರ್ಣನನಿರ್ಣಯ, ಶಬ್ದಾಲಂಕಾರ ವರ್ಣನನಿರ್ಣಯ, ಅರ್ಥಾಲಂಕಾರಪ್ರಕರಣ – ಎಂಬ ಮೂರು ಪರಿಚ್ಛೇದಗಳಿವೆ. ಗ್ರಂಥಕಾರನು ಭಾಮಹನ ಕಾವ್ಯಾಲಂಕಾರ ದಿಂದಲೂ ದಂಡಿಯ ಕಾವ್ಯಾದರ್ಶದಿಂದಲೂ ವಿಷಯುಗಳನ್ನು ಸಂಗ್ರಹಿಸಿದ್ದಾನೆ. ಎಷ್ಟೋ ಕಡೆಯಲ್ಲಿ ಕಾವ್ಯಾದರ್ಶದ ಲಕ್ಷ್ಯಲಕ್ಷಣಗಳನ್ನೇ ಭಾಷಾಂತರಿಸಿದ್ದಾನೆ. ದಂಡಿಯಂತೆಯೇ ಕಾವ್ಯಶೋಭಾಕರಗಳಾದ ಧರ್ಮಗಳನ್ನು ಅಲಂಕಾರಗಳೆಂದು ಮಾರ್ಗಕಾರನು ಹೇಳುತ್ತಾನೆ. ದಂಡಿ ವರ್ಣಿಸಿದ ಶ್ಲೇಷಾದಿ ದಶಗುಣಗಳನ್ನೂ ವರ್ಣಿಸಿ, ವೈದರ್ಭ ಗೌಡಮಾರ್ಗಗಳನ್ನು ದಕ್ಷಿಣೋತ್ತರ ಮಾರ್ಗಗಳೆಂದು ಕರೆದಿ ದ್ದಾನೆ. ಗದ್ಯ ಪದ್ಯ ಸಂಮಿಶ್ರಿತ – ಎಂದು ಮೂರು ಬಗೆಯ ಕಾವ್ಯಪ್ರಕಾರಗಳನ್ನು ಒಪ್ಪಿದರೂ ಸಂಮಿಶ್ರಿತ ಕಾವ್ಯವನ್ನು 'ಚಂಪೂ' ಎಂದು ಕರೆದಿಲ್ಲವೆಂಬುದೊಂದು ವಿಶೇಷ. ಅಲಂಕಾರ ನಿರೂಪಣೆಯಲ್ಲಿ ಕಾವ್ಯಾದರ್ಶಕ್ಕೂ ಕವಿರಾಜಮಾರ್ಗಕ್ಕೂ ಹೆಚ್ಚಿನ ವ್ಯತ್ಯಾಸವಿಲ್ಲ. ದಂಡಿಯಂತೆ ರಸಗಳನ್ನು ರಸವದಲಂಕಾರಗಳಲ್ಲಿ ಸೇರಿ ಸಿದ್ದಾನೆ. ದಂಡಿಯು ಎಂಟು ರಸಗಳನ್ನು ಹೇಳಿದರೆ ಮಾರ್ಗಕಾರನು 'ಶಾಂತ'ವನ್ನೂ ಸೇರಿಸಿ ಒಂಬತ್ತು ರಸಗಳನ್ನು ಹೇಳುತ್ತಾನೆಂಬುದು ಗಮನೀಯ. ಚತ್ತಾಣ, ಬೆದಂಡೆ ಎಂಬ ಕಾವ್ಯಭೇದಗಳು ಕನ್ನಡದಲ್ಲಿ ಆಗ ಪ್ರಚುರವಾಗಿದ್ದವೆಂದು ಕವಿ ರಾಜಮಾರ್ಗದಿಂದ ಗೊತ್ತಾಗುತ್ತದೆ.

2, ನಾಗವರ್ಮ : ಕ್ರಿ. ಶ. 12 ನೆಯ ಶತಮಾನದಲ್ಲಿ ನಾಗವರ್ಮನ 'ಕಾವ್ಯಾವಲೋಕನ' ರಚಿತವಾಯಿತು. ಕನ್ನಡದ ಪ್ರಾಚೀನ ಕಾವ್ಯಲಕ್ಷಣ ಗ್ರಂಥಗ ಳಲ್ಲಿ ವಿಷಯ ಸಮಗ್ರತೆ, ವಿಷಯ ಪರಿಶುದ್ಧಿ – ಈ ಎರಡು ದೃಷ್ಟಿಗಳಿಂದಲೂ ಕಾವ್ಯಾವಲೋಕನವೇ ಸರ್ವೋತ್ತಮವಾದುದೆಂಬುದರಲ್ಲಿ ಸಂದೇಹವಿಲ್ಲ. ಭಾಮಹ, ದಂಡಿ, ರುದ್ರಟ, ವಾಮನ, ಉದ್ಭಟ, ಅಮರಚಂದ್ರ, ರಾಜಶೇಖರ – ಇಷ್ಟು ಮಂದಿ ಆಲಂಕಾರಿಕರ ಗ್ರಂಥಗಳನ್ನು ನಾಗವರ್ಮನು ನೋಡಿದ್ದನೆಂದೂ ಅವುಗ ಳಿಂದ ತನಗೆ ಗ್ರಾಹ್ಯವಾದ ಅಂಶಗಳನ್ನು ಕಾವ್ಯಾವಲೋಕನದಲ್ಲಿ ಅಳವಡಿಸಿದ್ದಾ ನೆಂದೂ ನಿರ್ವಿವಾದವಾಗಿ ಹೇಳಬಹುದು.

3. ಉದಯಾದಿತ್ಯ : ಇವನು ಚೋಳ ರಾಜವಂಶದವನು. ಇವನದು 12 ನೆಯ ಶತಮಾನವಿರಬಹುದು. ಇವನ ಗ್ರಂಥಕ್ಕೆ 'ಉದಯಾದಿತ್ಯಾಲಂಕಾರ' ಎಂದು ಹೆಸರು. ಇದರಲ್ಲಿ ಗುಣ, ರೀತಿ, ನವರಸಗಳು, ಅರ್ಥಾಲಂಕಾರಶಬ್ದಾಲಂ ಕಾರಗಳು, ಮಹಾಕಾವ್ಯದ ಹದಿನೆಂಟು ವರ್ಣನೀಯಾಂಗಗಳು ಪೂರ್ವಪ್ರಸಿದ್ಧ ವಿಷಯುಗಳ ನಿರೂಪಣೆ ಇವೆ. ಚತ್ತಾಣ, ಬೆದಂಡೆ, ಚಂಪೂ – ಎಂಬ ಕಾವ್ಯಭೇದ ಗಳನ್ನು ಹೆಸರಿಸಿದ್ದಾನೆ. ನೂತನ ವಿಚಾರ ಸರಣಿ ಯಾವುದೂ ಇಲ್ಲ.

4. ಕವಿಕಾಮ : ಇವನ ಕಾಲ ಕ್ರಿ. ಶ. ಸು. 1200. 'ಶೃಂಗಾರರತ್ನಾಕರ' ಇವನ ಗ್ರಂಥ. ಹೆಸರೇ ಸೂಚಿಸುವಂತೆ ಶೃಂಗಾರವನ್ನು ಪ್ರಧಾನವಾಗಿ ನಿರೂಪಿಸಿದ್ದಾನೆ. ಕನ್ನಡದಲ್ಲಿ ರಸವಿಷಯವನ್ನು ವಿಸ್ತಾರವಾಗಿ ಮೊದಲು ಪ್ರತಿಪಾದಿಸಿದ ಕೀರ್ತಿ ಇವನಿಗೆ ಸಲ್ಲಬೇಕು. ರಸನಿಷ್ಪತ್ತಿಯ ವಿಚಾರವಾಗಿ ಕವಿಕಾಮನು ಹೇಳುವ ಪ್ರಕಾರ ಕುತೂಹಲಕಾರಿಯಾಗಿದೆ. "ಮನಸ್ಸು ಮೊದಲು ವಸ್ತುವನ್ನು ಸ್ಮರಿಸುವುದು, ಬುದ್ಧಿ ಅದನ್ನು ವಿಚಾರಿಸುವುದು, ಅಹಂಕಾರವು ಅದರ ಸ್ವರೂಪವನ್ನು ತಿಳಿಯುವುದು, ಚಿತ್ತವು ನಿಶ್ಚಯಿಸುವುದು, ಚಿತ್ತದಿಂದ ಭಾವ ಕಾಣುವುದು, 'ಭಾವದಿಂ ಪುಟ್ಟುಗುವೊದವಿ ರಸಂಗಳ್, ರಸವ್ಯಕ್ತಿಯಂ ಮಾಳ್ಪುದು ವಕ್ತ್ರಂ.'"

ಕವಿಕಾಮನು ಸ್ಥಾಯಿ, ಸಂಚಾರಿಭಾವಗಳನ್ನು ಹೇಳಿದರೂ ವಿಭಾವಾನುಭಾವಗಳ ಹೆಸರನ್ನು ಹೇಳದಿರುವುದು ಕೌತುಕಾಸ್ಪದ. ಎಲ್ಲ ರಸಗಳಲ್ಲಿಯೂ ವಾಗ್ವೃತ್ತಿ, (ರೂಪ) ನೇಪಥ್ಯ, ಕ್ರಿಯಾ – ಎಂಬ ಮೂರು ಬಗೆಗಳನ್ನು ಹೇಳುತ್ತಾನೆ. ಇವುಗಳಲ್ಲಿ ಒಂದೊಂದು ಅಂಶದ ನಿರೂಪಣೆಯೇ ಪ್ರಧಾನವಾಗಿದ್ದರೆ, ಆ ರಸವು ವಾಗ್ವೃತ್ತಿ ಮುಂತಾದ ಹೆಸರುಗಳನ್ನು ಪಡೆಯುತ್ತದೆ.ಚಿತ್ತವೃತ್ತಿರೂಪವಾದ ಭಾವದಿಂದ ವಾಗ್ವೃತ್ತಿ (ವಾಗ್ವ್ಯಾಪಾರ, ಮಾತನಾಡುವುದು) ಮತ್ತು ಕ್ರಿಯೆ ಉತ್ಪನ್ನವಾಗುವುದರಿಂದ ಇವೆರಡೂ ಅನುಭಾವಗಳೇ. (ರೂಪ) ನೇಪಥ್ಯವು ಉದ್ದೀಪನ ವಿಭಾವವೇ. ಹಿಂದಿನವರು ಹೇಳದ ಎರಡು ನಾಮಾಂತರಗಳನ್ನು ಕವಿಕಾಮನು ಕಲ್ಪಿಸಿದ್ದಾನೆ. ಅಲ್ಲದೆ ಶೃಂಗಾರದಲ್ಲಿ ಸಂಕೀರ್ಣ, ವ್ಯಸ್ತ ಎಂಬ ಎರಡು ಭೇದಗಳನ್ನು ಈತನು ಹೇಳುತ್ತಾನೆ. ವಾಗ್ವೃತ್ತಿ, ನೇಪಥ್ಯ, ಕ್ರಿಯೆಗಳ ಮಿಶ್ರಣ ಸಂಕೀರ್ಣ ಶೃಂಗಾರ. ರಸಾಂತರಗಳ ಸಂಮಿಶ್ರಣ ವ್ಯಸ್ತಶೃಂಗಾರ. ಇನ್ನು ಯಾವ ಗ್ರಂಥದಲ್ಲಿಯೂ ಈ ಬಗೆಯ ವಿಂಗಡಣೆ ಇಲ್ಲ.

5. ಸಾಳ್ವ : ಈತನ ಕಾಲ ಕ್ರಿ. ಶ. 16 ನೆಯ ಶತಮಾನ. ಇವನು ರಸರತ್ನಾಕರ ಎಂಬ ಗ್ರಂಥವನ್ನು ಬರೆದಿದ್ದಾನೆ. ಸ್ಥಾಯಿಭಾವ, ವಿಭಾವಾದಿಗಳನ್ನೂ ಅವುಗಳ ಸಾಧಾರಣೀಕರಣ ವಿಧಾನವನ್ನೂ ನಿರೂಪಿಸಿದ್ದಾನೆ. ಕವಿಕಾಮನ ಶೃಂಗಾರ ರತ್ನಾಕರ, ಮಮ್ಮಟನ ಕಾವ್ಯಪ್ರಕಾಶಗಳನ್ನು ಈತನು ಚೆನ್ನಾಗಿ ಬಲ್ಲನು. ರಸಧ್ವನಿಯ ನಿರೂಪಣೆಯನ್ನು ವಿಶದವಾಗಿ ಕನ್ನಡದಲ್ಲಿ ಮಾಡಿದ ಕೀರ್ತಿ ಈತನಿಗೆ ಸಲ್ಲುವುದು. ರುದ್ರಟ, ವಿದ್ಯಾನಾಥ, ಹೇಮಚಂದ್ರ – ಮೊದಲಾದ ಸಂಸ್ಕೃತ ಲಾಕ್ಷಣಿಕರನ್ನೂ ನಾಗವರ್ಮ, ಕವಿಕಾಮ ಎಂಬ ಕನ್ನಡ ಲಾಕ್ಷಣಿಕರನ್ನೂ ಈತನು ಹೆಸರಿಸುತ್ತಾನೆ. 'ರಸಮಿಲ್ಲದ ಕಾವ್ಯಂ ನೀರಸಂ' ಎಂದು ಹೇಳುವ ಸಾಳ್ವನಿಗೆ 'ವಾಕ್ಯಂ ರಸಾತ್ಮಕಂ ಕಾವ್ಯಂ' ಎಂಬ ವಿಶ್ವನಾಥನ ಕಾವ್ಯ ಲಕ್ಷಣವೇ ಸಂಮತವೆಂದು ತೋರುತ್ತದೆ.

ಇಲ್ಲೊಂದು ವೈಚಿತ್ರ್ಯ ಉಂಟು. ಸಾಳ್ವನು ವಿಭಾವಗಳನ್ನೂ ಅನುಭಾವಗಳನ್ನೂ ಚಿತ್ತವೃತ್ತಿಗಳೆಂದೇ ತಿಳಿಯುತ್ತಾನೆ: "ಆ ಚಿತ್ತವೃತ್ತಿಗಳ್ ಕಾವ್ಯನಾಟ್ಯಶಾಸ್ತ್ರ ಪ್ರಸಿದ್ಧಂಗಳಪ್ಪ ಆಲಂಬನೋದ್ದೀಪನ ಸ್ವಭಾವಂಗಳಾದ ಲಲನೋದ್ಯಾನಾದಿಕಂಗಳಿಂ ವಿಶಿಷ್ಟತ್ವದಿಂ ಸ್ಥಾಯಿಭಾವಂಗಳನುದ್ಬೋಧಿಪುದಱಿಂ ವಿಭಾವಮೆನಿಕ್ಕುಂ. ಮತ್ತಮಾ ಸ್ಥಾಯಿವ್ಯಭಿಚಾರಿಲಕ್ಷಣಭೂತ ಚಿತ್ತವೃತ್ತಿ ವಿಶೇಷಂಗಳಂ ಕಟಾಕ್ಷಭುಜವಿಕ್ಷೇಪಾದ್ಯನುಭಾವಂಗಳಿಂ ಸಾಮಾಜಿಕನನುಭವಿಸುವುದಱಿಂದನುಭಾವಂಗಳೆನಿಕ್ಕುಂ" (ರಸರತ್ನಾಕರ).

ಯಾವುವನ್ನು ವಿಭಾವಗಳೆಂದೂ ಅನುಭಾವಗಳೆಂದೂ ಪ್ರಾಚೀನ ಲಾಕ್ಷಣಿಕರು ಒಪ್ಪಿದ್ದರೊ ಅವುಗಳನ್ನು ಅನುಭವಕ್ಕೆ ತಂದುಕೊಡುವ ಚಿತ್ತವೃತ್ತಿಗಳೇ ವಿಭಾವಾನುಭಾವಗಳೆಂದು ಸಾಳ್ವನು ಹೇಳುತ್ತಾನೆ. ಈ ವಿಚಿತ್ರ ಕಲ್ಪನೆ ಸಾಳ್ವನ ಸ್ವತಂತ್ರವಾದ ಊಹೆಯೊ ಯಾರಾದರೂ ಹಿಂದಿನವರ ಅನುಸರಣವೊ ತಿಳಿಯುವಂತಿಲ್ಲ. ನಟರಲ್ಲಿಯೂ ಸಾಮಾಜಿಕರಲ್ಲಿಯೂ ರಸೋತ್ಪತ್ತಿಯನ್ನು ಸಾಳ್ವನು ಅಂಗೀಕರಿಸುತ್ತಾನೆ.

'ಶಾರದಾವಿಲಾಸ' ಎಂಬ ಗ್ರಂಥವನ್ನೂ ಸಾಳ್ವನೇ ಬರೆದನೆಂದು ತಿಳಿದುಬರುತ್ತದೆ. ಇದರ ಎರಡನೆಯ ಪ್ರಕರಣವಾದ 'ಧ್ವನಿವ್ಯಂಗ್ಯಪ್ರಕರಣ' ಎಂಬುದು ಮಾತ್ರ ದೊರೆತಿದೆ. ಉಳಿದ ಭಾಗಗಳು ದೊರೆಯುವವರೆಗೂ ಸಾಳ್ವನ ವಿಚಾರ ಸರಣಿಯನ್ನು ಪೂರ್ಣವಾಗಿ ಅರಿವುದು ಶಕ್ಯವಲ್ಲ. ರಸರತ್ನಾಕರದಲ್ಲಿ ರಸಸ್ವರೂಪವನ್ನು ವಿಸ್ತಾರವಾಗಿ ಹೇಳಿರುವುದರಿಂದ ಈ ಗ್ರಂಥದಲ್ಲಿ ವ್ಯಂಗ್ಯಸಾಮಾನ್ಯವನ್ನು ವಿಸ್ತರಿಸುವುದು ಸಾಳ್ವನ ಉದ್ದೇಶವಾಗಿರಬಹುದು. ಈ ಧ್ವನಿವ್ಯಂಗ್ಯಪ್ರಕರಣದಲ್ಲಿ ಸಾಂಪ್ರದಾಯಿಕ ರೀತಿಯಂತೆ ಕಾವ್ಯದಲ್ಲಿ ಉತ್ತಮ ಮಧ್ಯಮ ಅಧಮ ಭೇದಗಳು, ಶಬ್ದಶಕ್ತಿಭೇದಗಳು, ವ್ಯಂಗ್ಯದಲ್ಲಿ ಶಬ್ದಮೂಲ ಅರ್ಥಮೂಲ ಅರ್ಥಾಂತರ ಸಂಕ್ರಮಿತವಾಚ್ಯ ಮುಂತಾದ ಪ್ರಭೇದಗಳು – ಇವನ್ನು ಗ್ರಂಥಕಾರನು ನಿರೂಪಿಸಿದ್ದಾನೆ.

6. ಮಾಧವ: ಪ್ರಾಯಶಃ ಸಾಳ್ವನ ಸಮಕಾಲಿಕನಾದ ಈತನು ಮಾಧವಾಲಂಕಾರ ಎಂಬ ಗ್ರಂಥವನ್ನು ಬರೆದಿದ್ದಾನೆ. ಇದು ದಂಡಿಯ ಕಾವ್ಯಾದರ್ಶದ ಕನ್ನಡ ಅನುವಾದ.

7 ತಿಮ್ಮಯ್ಯ: (ಕ್ರಿ. ಶ. ಸು.1600) ಈತನು 'ಅಲಂಕಾರ ರಸಸಂಗ್ರಹ' ಎಂಬ ಗ್ರಂಥವನ್ನು ರಚಿಸಿದ್ದಾನೆ. ವಿಶೇಷವಾಗಿ ಕಂದವೃತ್ತಗಳನ್ನೇ ಬಳಸುವ ಈತನು ಹಿಂದಿನ ಸಂಸ್ಕೃತ ಕನ್ನಡ ಲಾಕ್ಷಣಿಕರ ಮತವನ್ನು ಸಂಕಲಿಸಿದ್ದಾನೆ.

8. ತಿರುಮಲಾರ್ಯ : (17 – 18 ನೆಯ ಶತಕ). ಮೈಸೂರು ಚಿಕ್ಕದೇವ ರಾಯನ ಆಶ್ರಯದಲ್ಲಿದ್ದ ಈ ವಿದ್ವಾಂಸನು 'ಅಪ್ರತಿಮ ವೀರಚರಿತ' ವನ್ನು ಬರೆದಿದ್ದಾನೆ. ಕಾವ್ಯಲಕ್ಷಣ, ಗುಣರೀತಿಗಳು, ಶಯ್ಯಾಪಾಕಗಳು – ಇವೆಲ್ಲವನ್ನೂ ಮಮ್ಮಟಾದಿಗಳ ಮತದಂತೆ ಸಂಕ್ಷೇಪವಾಗಿ ನಿರೂಪಿಸಿ ಅರ್ಥಾಲಂಕಾರಗಳನ್ನು ವಿಸ್ತಾರವಾಗಿ ಪ್ರತಿಪಾದಿಸಿದ್ದಾನೆ. ಅಪ್ಪಯ್ಯದೀಕ್ಷಿತರ 'ಕುವಲಯಾನಂದ'ದ ಪ್ರಭಾವ ಇದರಲ್ಲಿ ಸ್ಪಷ್ಟವಾಗಿ ಗೋಚರಿಸುತ್ತದೆ.

9. ಜಾಯಗೌಂಡ : ಈತನು ಕ್ರಿ. ಶ. 1660 ರಿಂದ 1716 ರವರೆಗೆ ತೊರಗಲೆ ಸೀಮೆಗೆ ಪ್ರಭುವಾಗಿದ್ದ ಲಿಂಗಗೌಂಡನ ಮಗ. ತನ್ನನ್ನು 'ಜಾಯೇಂದ್ರ' ಎಂದು ಕರೆದುಕೊಂಡಿದ್ದಾನೆ. ಅಪ್ಪಯ್ಯದೀಕ್ಷಿತರ ಕುವಲಯಾನಂದವನ್ನು 'ಕನ್ನಡ ಕುವಲಯಾನಂದ' ಎಂಬ ಹೆಸರಿನಿಂದ ಅನುವಾದಿಸಿದ್ದಾನೆ. ಕುವಲಯಾನಂದದಲ್ಲಿ ಹೇಳಿದ ರಸವದಾದಿ 15 ಅಲಂಕಾರಗಳನ್ನು ಅನುವಾದಿಸಿಲ್ಲ. ಉದಾಹರಣೆಗಳಲ್ಲಿ ಕೆಲವನ್ನು ಷಟ್ಪದೀವೃತ್ತದಲ್ಲಿ ಅನುವಾದಿಸಿದ್ದಾನೆ. ಕೆಲವನ್ನು ಪ್ರಾಚೀನಕಾವ್ಯಗಳಿಂದ ಆರಿಸಿಕೊಂಡಿದ್ದಾನೆ. ಇವನೇ ಅನುವಾದಿಸಿದ ಪದ್ಯಗಳಲ್ಲಿ ಛಂದೋದೋಷಗಳೂ ಗ್ರಾಮ್ಯಶಬ್ದಗಳೂ ಅಧಿಕ.

ಜಾಯೇಂದ್ರನು ರಸಮಂಜರಿ ಎಂಬ ಇನ್ನೊಂದು ಗ್ರಂಥವನ್ನು ಬರೆದಿದ್ದಾನೆ. ಇದಕ್ಕೆ 'ಶೃಂಗಾರತಿಲಕ' ಎಂಬ ಹೆಸರೂ ಉಂಟು. ಶೃಂಗಾರದ ಹಲವಾರು ಭೇದಗಳು ಇದರಲ್ಲಿ ಮುಖ್ಯವಾಗಿ ನಿರೂಪಿತವಾಗಿದೆ. ಮಿಕ್ಕ ರಸಗಳನ್ನು ಒಂದೊಂದು ಪದ್ಯದಲ್ಲಿ ಮುಗಿಸಿದ್ದಾನೆ.

10. ಲಿಂಗರಾಜ : ಇವನು ಕ್ರಿ. ಶ. 19ನೆಯ ಶತಮಾನದಲ್ಲಿದ್ದ ಮುಮ್ಮಡಿ ಕೃಷ್ಣರಾಜ ಒಡೆಯರ ಅಳಿಯ. ಇವನು ವಿವಿಧ ಸಾಹಿತ್ಯಕೃತಿಗಳಲ್ಲಿ 'ನರಪತಿಚರಿತ' ಎಂಬುದು ಅಲಂಕಾರಗ್ರಂಥ. ಅನುಪ್ರಾಸಾದಿಶಬ್ದಾಲಂಕಾರಗಳನ್ನೂ ಕುವಲಯಾನಂದದ ಸರಣಿಯನ್ನನುಸರಿಸಿ ಅರ್ಥಾಲಂಕಾರಗಳನ್ನೂ ನಿರೂಪಿಸಿದ್ದಾನೆ. ಈತನ ವೈದುಷ್ಯವೂ ಕವಿತಾಶಕ್ತಿಯೂ ಶ್ಲಾಘನೀಯವಾದವು.

ಈಚೆಗೆ ಇಂಗ್ಲಿಷ್ ವಿದ್ಯಾಭ್ಯಾಸವು ಹರಡಿದ ಮೇಲೆ ರಚಿತವಾದ ಅಲಂಕಾರ ಗ್ರಂಥಗಳಲ್ಲಿ ಈ ಮೂರನ್ನು ನಿರ್ದೇಶಿಸಬಹುದು : 1. ಚನ್ನಪಟ್ಟಣದ ರಾಮಸ್ವಾಮಿಶಾಸ್ತ್ರಿಗಳ 'ಕರ್ಣಾಟಕ ಛಂದೋಲಂಕಾರ ಸಾಹಿತ್ಯಲಕ್ಷಣ ಸಂಗ್ರಹ.' 2. ಸಿದ್ಧಾಂತಿ ಶಿವಶಂಕರಶಾಸ್ತ್ರಿಗಳ 'ಕರ್ಣಾಟಕ ಚಂದ್ರಾಲೋಕ.' 3. ಅಕ್ಕಲೆ ಲಕ್ಷ್ಮೀನರಸಿಂಹಶಾಸ್ತ್ರಿಗಳ 'ಕರ್ಣಾಟಕ ಚಂದ್ರಾಲೋಕ.'

ಕಾವ್ಯಮೀಮಾಂಸಾವಿಷಯದಲ್ಲಿ ಸಂಸ್ಕೃತ ಗ್ರಂಥಗಳಿಗೆ ಹೋಲಿಸಿದಾಗ ಕನ್ನಡ ಗ್ರಂಥಗಳ ಸಾಧನೆ ಅಲ್ಪ. ಕವಿರಾಜಮಾರ್ಗದಿಂದ ಹಿಡಿದು ಮೇಲ್ಕಂಡ ಯಾವ ಗ್ರಂಥದಲ್ಲಾಗಲಿ ನೂತನ ವಿಚಾರಸರಣಿ ಯಾವುದೂ ಕಾಣದು. ಪ್ರಾಚೀನ ಮತಗಳ ವಿಮರ್ಶವೂ ಇಲ್ಲ. ಸಂಸ್ಕೃತಲಾಕ್ಷಣಿಕರಲ್ಲಿ ಯಾರ ಮತವು ತಮಗೆ ಸಂಮತವೋ ಅದನ್ನು ಕನ್ನಡದ ಆಲಂಕಾರಿಕರು ಅನುವಾದಿಸಿದ್ದಾರೆ. ಸಂಸ್ಕೃತವನ್ನರಿಯದವರಿಗಾಗಿ ಈ ವಿದ್ವಾಂಸರು ಇಷ್ಟು ಕೆಲಸವನ್ನು ಮಾಡಿದುದಕ್ಕೆ ಕನ್ನಡಿಗರು ಕೃತಜ್ಞರಾಗಿರಬೇಕು.

ಇಪ್ಪತ್ತನೆಯ ಶತಮಾನದಲ್ಲಿ ಪಾಶ್ಚಾತ್ಯರ ಕಾವ್ಯಮೀಮಾಂಸಾ ಪದ್ಧತಿಯ ಅರಿವಾದಾಗ ನಮ್ಮ ವಿದ್ವಾಂಸರಲ್ಲಿ ಒಂದು ನೂತನ ಚೈತನ್ಯವು ತಲೆದೋರಿತು. ಭಾರತೀಯ ಕಾವ್ಯಮೀಮಾಂಸಾಗ್ರಂಥಗಳನ್ನು ಸಮಗ್ರರೀತಿಯಿಂದ ತುಲನಾತ್ಮಕವಾಗಿ ವಿಮರ್ಶಿಸುವ ಉತ್ತಮಗ್ರಂಥಗಳು ಈಚೆಗೆ ಪ್ರಕಟವಾಗುತ್ತಿರುವುದು ಸಂತೋಷದ ಸಂಗತಿ.*

*

**ಉಪಸಂಹಾರ :**

ಭಾರತೀಯ ಕಾವ್ಯಮೀಮಾಂಸೆಗೆ ಭರತನ ನಾಟ್ಯಶಾಸ್ತ್ರವೇ ಮೂಲಗ್ರಂಥವಷ್ಟೆ.* ಭಾಮಹನಿಂದ ಹಿಡಿದು ಪಂಡಿತರಾಜ ಜಗನ್ನಾಥನವರೆಗೂ ಈ ಕಾವ್ಯಮೀಮಾಂಸೆ ವಿವಿಧರೀತಿಯಲ್ಲಿ ಬೆಳೆಯಿತು. ಸಾಹಿತ್ಯಸಾಗರದ ಮಂಥನದಿಂದ ತೆಗೆದ ಅಮೂಲ್ಯ ರತ್ನ ರಸ. ದೀರ್ಘಕಾಲದ ಈ ಶೋಧನೆಯಲ್ಲಿ ಕಾವ್ಯಮೀಮಾಂಸಕರೆಲ್ಲರೂ ಒಂದಲ್ಲ ಒಂದು ಬಗೆಯಲ್ಲಿ ಸೇವೆಯನ್ನು ಸಲ್ಲಿಸಿದ್ದಾರೆ. ರಸಭಿನ್ನವಾದ ಗುಣಾಲಂಕಾರಾದಿಗಳು ಕಾವ್ಯದಲ್ಲಿ ಮುಖ್ಯವೆಂದು ಹೇಳಿದ ಪ್ರತಿವಾದಿಗಳು ಸಹ ಪೂರ್ವಪಕ್ಷವಿಧಾನದಿಂದ ಸಿದ್ಧಾಂತಸ್ಥಾಪನೆಗೆ ನೆರವಾಗಿದ್ದಾರೆ. ಕೊನೆಯಲ್ಲಿ ಹೊರಬಂದ ರಸಸಿದ್ಧಾಂತವು ಮೊದಲು ಭರತನು ಹೇಳಿದುದೇ! ಧ್ವನಿಸಿದ್ಧಾಂತ ಸಹ

---

* ಆ ಸಂಪ್ರದಾಯವನ್ನು ಸಂಗ್ರಹಿಸಿ ಹೊಸ ದೃಷ್ಟಿಯಿಂದ ವಿವೇಚನೆ ಮಾಡಿರುವುದು ತೀ. ನಂ. ಶ್ರೀಕಂಠಯ್ಯನವರ ಭಾರತೀಯ ಕಾವ್ಯಮೀಮಾಂಸೆ. ಈ ಪ್ರಪಂಚ ಪರಿಚಯವನ್ನು ಅವರು ತುಂಬಾ ವಿಚಕ್ಷಣೆಯಿಂದ ಮಾಡಿದ್ದಾರೆ. ಅಷ್ಟು ಅಡಕವಾಗಿ ಸಾಕಲ್ಯದಿಂದ ವಿಷಯವನ್ನು ಸಂಗ್ರಹಿಸಿರುವ - ವಿವರಿಸುವ ಪುಸ್ತಕ ಇಂಗ್ಲಿಷಲ್ಲಿಯೂ ಇನ್ನೂ ಬಂದಿಲ್ಲವೆನ್ನಬಹುದು.

* ಆ ಗ್ರಂಥದಲ್ಲಿ ಹೆಸರಿಸುವ ಎಷ್ಟೋ ಮಂದಿ ನಾಮಮಾತ್ರವಾಗಿದ್ದಾರೆ. ಅಲ್ಲಿ ಬರುವ ಆನುವಂಶಿಕ ಶ್ಲೋಕಗಳು ತುಂಬಾ ಅರ್ಥವತ್ತಾಗಿವೆ. ಎಷ್ಟು ಮುಂಚಿನಿಂದ ಈ ಬಗೆಗೆ ಚಿಂತನ ನಡೆದಿತ್ತೆಂಬುದಕ್ಕೆ ಅವು ಸಾಕ್ಷಿ — ಸಂ.

ಆನಂದವರ್ಧನನಿಗಿಂತ ಪೂರ್ವದಲ್ಲಿಯೇ ಇದ್ದಿತು. ಆನಂದವರ್ಧನನು ಆ ಸಿದ್ಧಾಂತದ ಜೀರ್ಣೋದ್ಧಾರ ಮಾಡಿದನೆಂಬುದು ಯುಕ್ತ.

ಇಷ್ಟಾದರೂ ಭಾರತೀಯ ಕಾವ್ಯಮೀಮಾಂಸೆ ಕಡೆಯ ಮಾತನ್ನು ಹೇಳಿದೆಯೆ? – ಎಂಬುದು ವಿಮರ್ಶನೀಯ. ರಸಾಭಿವ್ಯಕ್ತಿಯನ್ನು ವಿವರಿಸುವಾಗ ಸ್ಥಾಯಿಭಾವವು 'ಸಾಧಾರಣೀಕೃತ' ವಾಗುತ್ತದೆಯೆಂದು ಕಾವ್ಯಮೀಮಾಂಸಕರು ಹೇಳಿದ್ದಾರಲ್ಲವೆ ? ಹನುಮಂತನ ಸಮುದ್ರಲಂಘನದ ಸಂದರ್ಭದಲ್ಲಿ ಅವನ ಉತ್ಸಾಹ ಶೌರ್ಯಧೈರ್ಯಾದಿಗಳನ್ನು ಕವಿ ವರ್ಣಿಸುತ್ತಾನೆ. ಆಗ ಉತ್ಸಾಹಾದಿಗಳು ಸಾಧಾರಣೀಕೃತವಾಗುತ್ತವೆ ಎಂದರೆ ಅರ್ಥವೇನು ? ನಾನೇ ಹನುಮಂತನೆಂಬ ತಾದಾತ್ಮ್ಯಭಾವನೆ ಸಹೃದಯನಿಗೆ ಆಗುತ್ತದೆ ಎಂದೆ ? ಉತ್ಸಾಹಾದಿಗಳು ಹನುಮತ್ಸಂಬಂಧವನ್ನು ಕಡಿದುಕೊಂಡು ತಟಸ್ಥವಾಗುತ್ತವೆ ಎಂದೆ ? ತಟಸ್ಥವಾದ ಭಾವಗಳು 'ನಮ್ಮವು' ಎಂಬ ಸ್ವೀಯತಾಭಾವನೆ ಬರುತ್ತದೆ ಎಂದೆ ? ಲಾಕ್ಷಣಿಕರು ಬಹು ಶ್ರಮದಿಂದ ಇವುಗಳನ್ನು ನಿರೂಪಿಸಿದ್ದರೂ ಶಂಕೆಯು ನಿರ್ಮೂಲವಾಗಿ ನಮ್ಮನ್ನು ಬಿಡುವುದಿಲ್ಲ. ಉತ್ಸಾಹಾದಿಭಾವಗಳು ಹನುಮನ್ನಿಷ್ಠವಾಗಿಯೇ ತೋರಿ ಆನಂದವನ್ನೀಯುತ್ತವೆಯೆಂಬುದು ಬಹುಜನರ ಅನುಭವ. ನಕ್ಷತ್ರಕನು ಹರಿಶ್ಚಂದ್ರನನ್ನು ಕಾಡಿಸುವಾಗ 'ನಾನೇ ನಕ್ಷತ್ರಕ'ಎಂಬ ಭಾವನೆಯಾಗಲಿ, ಅವನ ಶಠತ್ವವು ನನ್ನದೆಂಬ ಅನುಭವವಾಗಲಿ ಸಹೃದಯನಿಗೆ ಬರುತ್ತದೆಯೆ ? ನಕ್ಷತ್ರಕನ ಮೇಲೆ ಆ ಸಮಯದಲ್ಲಿ ಕ್ರೋಧವೇ ಉಂಟಾದರೆ ಆಶ್ಚರ್ಯವಿಲ್ಲ. ಕರುಣರಸವು ಸುಖಾತ್ಮಕವೆ ? ದುಃಖಾತ್ಮಕವೆ ? ಉಭಯಾತ್ಮಕವೆ? ಎಂಬುದೂ ನಿರ್ಣೀತವಾಗಲಿಲ್ಲ. ಈ ವಿಷಯದಲ್ಲಿ ಆಧುನಿಕ ಮನಃಶಾಸ್ತ್ರವು ಬೆಳಕು ಚೆಲ್ಲೀತೆ ?

ಎಲ್ಲ ರಸಗಳ ಅನುಭವದಿಂದಾಗುವ ಆನಂದ ಏಕರೂಪವಾದದ್ದೆ ? ಅಥವಾ ಅದರಲ್ಲಿ ತಾರತಮ್ಯ ಉಂಟೆ ? ತಾರತಮ್ಯ ಉಂಟೆಂದು ಮಧುಸೂದನ ಸರಸ್ವತಿಗಳು ಭಕ್ತಿರಸಾಯನದಲ್ಲಿ ಹೇಳಿದ್ದಾರೆ. ಈ ತಾರತಮ್ಯಕ್ಕೆ ರಸಭೇದವು ಕಾರಣವೆನ್ನುವುದಕ್ಕಿಂತ ರುಚಿಭೇದವು ಕಾರಣವೆನ್ನುವುದು ಯುಕ್ತವಾದೀತು. ಕೆಲವರಿಗೆ ಶೃಂಗಾರ ಪ್ರಿಯವಾದರೆ ಉಳಿದವರಿಗೆ ವೀರವು ಪ್ರಿಯವಾದೀತು. ಇದುಸಹೃದಯನ ಚಿತ್ತಸಂಸ್ಕಾರವನ್ನು ಅವಲಂಬಿಸುತ್ತದೆ. ಸಂಸ್ಕಾರದಿಂದ ರುಚಿಭೇದ ತಲೆದೋರಬಹುದು. ಆದರೆ ಬೀಭತ್ಸದಲ್ಲಿ ರಸಾಸ್ವಾದ ಉಂಟೆ ? ಆಸ್ವಾದವಿದರೂ ಜುಗುಪ್ಸೆಗೆ ಸ್ಥಾಯಿಭಾವದ ಪಟ್ಟವನ್ನು ಕಟ್ಟಬಹುದೆ ? ಅದು ಸಂಚಾರಿಭಾವದಂತೆ ಅಲ್ಲಲ್ಲಿ ಕಾಣಿಸಿಕೊಂಡು ನಶಿಸಬಹುದೇ ಹೊರತು ರತ್ಯಾದಿಭಾವಗಳಂತೆ ಸ್ಥಾಯಿಯಾಗಿ ಉಳಿಯುವ ಸಂಭವವಿದೆಯೆ ?

ಕಾವ್ಯರಚನೆಯಲ್ಲಿ ಕವಿಯ ಸ್ವಾತಂತ್ರ್ಯವೆಷ್ಟು ? ಲಾಕ್ಷಣಿಕರು ಹಾಕಿದ ಗೆರೆಗಳನ್ನು ಮೀರಿ ಕಾವ್ಯರಚನೆಯಲ್ಲಿ ತೊಡಗಬಹುದೆ ? ಸಹೃದಯರಿಗೆ ಮನಃಸಂಪ್ರೀತಿಯಾಗುವುದಾದರೆ ಲಾಕ್ಷಣಿಕರ ನಿಯಮಗಳನ್ನು ಮೀರಿದಲ್ಲಿ ಬಾಧೆಯೇನು? ಹಿಂದಿನ ಛಂದೋನಿಯಮಗಳನ್ನು ಉಲ್ಲಂಘಿಸಿ ನೂತನ ಛಂದಸ್ಸನ್ನು ನಿರ್ಮಿಸಿಕೊಂಡರೆ ಯಾವ ಹಾನಿ ? ನೀತಿಧರ್ಮಗಳಿಗೇ ಜಯವಾಗುವಂತೆ ಹಿಂದಿನ ಕವಿಗಳು ಕಾವ್ಯವಸ್ತುವನ್ನು ಗೊತ್ತುಮಾಡಿಕೊಳ್ಳುತ್ತಾರೆ. ಅನೀತಿಗೂ ಅಧರ್ಮಕ್ಕೂ ತಾತ್ಕಾಲಿಕವಾದ ಜಯವಿರುವುದು ಲೋಕಸಿದ್ಧ. ಅಂತಹ ವಸ್ತುವನ್ನವಲಂಬಿಸಿ ಕಾವ್ಯವನ್ನು ರಚಿಸಬೇಕೆ ? ಬೇಡವೆ ? ರಾವಣನ ದಿಗ್ವಿಜಯ ವೈಭವಗಳನ್ನೇ ಪ್ರಧಾನವಾಗಿ ವರ್ಣಿಸಿ ಕಾವ್ಯವನ್ನು ಸಮಾಪ್ತಿಗೊಳಿಸಿದರೆ ಹೇಗಾದೀತು ?

ರಸಗಳಲ್ಲೊಂದನ್ನು ಕಾವ್ಯದಲ್ಲಿ ಪ್ರಧಾನವಾಗಿ ಚಿತ್ರಿಸಬೇಕೆಂಬುದು ಲಾಕ್ಷಣಿಕರ ನಿಯಮ. ಯಾವ ರಸವನ್ನೂ ಪೋಷಿಸದೆ ವಿವಿಧ ಚಿತ್ತವೃತ್ತಿಗಳ ತುಮುಲವನ್ನು ವರ್ಣಿಸುವ ಆಧುನಿಕ ಕಾವ್ಯಗಳ ಸ್ಥಾನ ಯಾವುದು ? ಧೀರೋದಾತ್ತಾದಿ ನಾಯಕ ಲಕ್ಷಣಗಳಿಲ್ಲದ ಒಬ್ಬ ರೈತನ ಕುಟುಂಬಜೀವನ ಕಾವ್ಯವಸ್ತುವಾಗಬಹುದೇ ಹೇಗೆ ? ಐತಿಹಾಸಿಕ ಕಥಾವಸ್ತುವನ್ನು ವಿಪರ್ಯಾಸಗೊಳಿಸಿ ಕೃತ್ರಿಮ ಸಂನಿವೇಶಗಳನ್ನು ಕಾವ್ಯದಲ್ಲಿ ಸೇರಿಸಲು ಕವಿಗೆ ಸ್ವಾತಂತ್ರ್ಯ ಉಂಟೆ ?* ಇಲ್ಲವೆ ? ಒಂದು ಕಾವ್ಯವನ್ನು ಇನ್ನೊಂದು ಕಾವ್ಯದೊಂದಿಗೆ ಹೋಲಿಸುವಾಗ ಯಾವ ಮಾನದಂಡವನ್ನಿಟ್ಟುಕೊಳ್ಳಬಹುದು ? ಉದಾಹರಣೆಗೆ, ಯಾವ ಮಾನದಂಡದಿಂದ ಕಾಳಿದಾಸ ಮತ್ತು ಭವಭೂತಿಗಳ ಕಾವ್ಯಗಳನ್ನು ಹೋಲಿಸಬಹುದು ?

ಕವಿಯ ವೈಯುಕ್ತಿಕ ಜೀವನವು ಕಾವ್ಯದಲ್ಲಿ ಪ್ರತಿಬಿಂಬಿತವಾಗುವುದೆ? ಕವಿಯು ತನ್ನ ನಂಬಿಕೆಗಳನ್ನೇ ಕಾವ್ಯದಲ್ಲಿ ಪ್ರತಿಪಾದಿಸಬೇಕೆ ? ಅಥವಾ ಲೋಕದ ಯಾವುದೊಂದು ಪಕ್ಷದ ನಂಬಿಕೆಗಳನ್ನು ಪ್ರತಿಪಾದಿಸಬಹುದೆ ? ಲೋಕಜೀವನವನ್ನು ತಿದ್ದುವ ಭಾರ ಕವಿಗೆ ಸೇರಿದ್ದೆ ? ಅಲ್ಲವೆ ? ನಮ್ಮ ಪ್ರಾಚೀನ ಕವಿಗಳು ಕಾವ್ಯಗಳನ್ನು ಮಂಗಳಾಂತವಾಗಿ ಸಮಾಪ್ತಿಗೊಳಿಸುತ್ತಾರೆ. ಇದಕ್ಕೆ ನಿಮಿತ್ತವೇನು ? ವಿಷಾದಾಂತವಾಗಿ ಸಮಾಪ್ತಿಗೊಳಿಸಿದರೆ ಆಗುವ ಪರಿಣಾಮಗಳೇನು ? ಯಾವುದು ಯುಕ್ತ? ಇತ್ಯಾದಿ ವಿಷಯಗಳು ಜಿಜ್ಞಾಸೆಗೆ ಅರ್ಹವಾದವು.

---

* ಮೈಕಲ್ ಮಧುಸೂದನ ದತ್ತರ 'ಮೇಘನಾದ ವಧಾ' ಎಂಬ ಕೃತಿಯನ್ನೂ ಶ್ರೀ ಯವರ ಅಶ್ವತ್ಥಾಮನ್ ಅನ್ನೂ ತಳ್ಳಿಹಾಕಿಬಿಡಬಹುದೆ? — ಸಂ.

# ಕನ್ನಡ ಕವಿ ಕಾವ್ಯ ಪರಂಪರೆ

ಇಂಡಿಯ ಬುಕ್ ಹೌಸಿನವರಿಂದ ಪ್ರಕಟವಾಗುತ್ತಿರುವ "ಕನ್ನಡ ಕವಿ ಕಾವ್ಯ ಪರಂಪರೆ" ಎಂಬ ಮಾಲೆಯಲ್ಲಿ ಸುಮಾರು 30 ಗ್ರಂಥಗಳು ಪ್ರಕಟವಾಗಲಿವೆ. ಕನ್ನಡ ಸಾಹಿತ್ಯವನ್ನು ಅಭ್ಯಸಿಸುವವರಿಗೆ ಅನುಕೂಲವಾಗುವಂತೆ ಪ್ರತಿಯೊಂದು ಪುಸ್ತಕದಲ್ಲಿಯೂ ಮೂವರು ವಿದ್ವಾಂಸರ ವಿದ್ವತ್ಪೂರ್ಣವಾದ ಲೇಖನಗಳಿರುತ್ತವೆ.

ಮೊದಲ ಲೇಖನವು ಕವಿ, ಕಾಲ, ಚಾರಿತ್ರಿಕ ಸನ್ನಿವೇಶಗಳು, ಆ ಕಾಲದ ಸಾಹಿತ್ಯ ಲಕ್ಷಣಗಳು, ಜನಜೀವನ ಇತ್ಯಾದಿಗೆ ಸಂಬಂಧಿಸಿದ್ದು. ಆ ಬಗೆಗೆ ಈವರೆಗೆ ನಡೆದಿರುವ ಚರ್ಚೆಗಳನ್ನು ಸಂಕ್ಷೇಪವಾಗಿ ತಿಳಿಸಿ ಯಾವ ಗಟ್ಟಿ ತೀರ್ಮಾನಕ್ಕೆ ಈಗ ಬಂದಿದೆಯೊ ಅದಕ್ಕೆ ಇರುವ ಆಧಾರ ಪ್ರಮಾಣಗಳನ್ನು ತಿಳಿಸಲಾಗುತ್ತದೆ.

ಎರಡು ಮೂರನೆಯ ಭಾಗಗಳಲ್ಲಿ ಕವಿಯ ಕೃತಿಗಳ ಸ್ವರೂಪವನ್ನೂ ಅವು ಯಾವ ಪ್ರಕಾರದ ಕಾವ್ಯ–ಗ್ರಂಥ–? ಅವುಗಳ ವಿಶೇಷ ಲಕ್ಷಣಗಳಾವುವು? ಭಾಷೆ, ಶೈಲಿ, ಆ ಆ ಕವಿಯ ಮನೋಧರ್ಮ, ಅದಕ್ಕೆ ಆ ಬಗೆಯ ಗ್ರಂಥಗಳಲ್ಲಿ ಸ್ಥಾನಮಾನ ಯಾವುದು? ಎಂಬುದರ ನಿರ್ದೇಶನ ಮೌಲ್ಯಾಂಕನ ಮಾಡಲಾಗುತ್ತದೆ.

ಛಂದೋವಿಚಾರದಲ್ಲಿ ಸಮಾನ ಪ್ರಕಾರಗಳಿದ್ದರೆ ಅವನ್ನು ತಿಳಿಸಲಾಗುತ್ತದೆ. ಕಾಲದ ಪರಿಸ್ಥಿತಿಯ ಪರಿಣಾಮಗಳಿಂದಾಗಿ ಪ್ರತಿಫಲಿಸಿರುವ ಸಂಗತಿಗಳನ್ನೂ ಭಕ್ತಿಪಕ್ಷಪಾತಗಳನ್ನೂ ಕನ್ನಡ ನುಡಿ ತಾಳಿರುವ ರೂಪವನ್ನೂ ಶಕ್ಯವಾದ ಮಟ್ಟಿಗೆ ಕಾಣಿಸಲಾಗುತ್ತದೆ. ಪ್ರತಿಪಾದನೆ ವಸ್ತುನಿಷ್ಠವಾಗಿರುತ್ತದೆ.

ಚಾರಿತ್ರಿಕ ಅಥವಾ ವಂಶಾನುಕ್ರಮದ ಪಟ್ಟಿಕೆಗಳು, ನಕ್ಷೆಗಳು ಇದ್ದರೆ ಅನುಬಂಧವಾಗಿ ಕೊಡಲಾಗುತ್ತದೆ. ಕವಿಯ ವಿಶೇಷ ಲಕ್ಷಣ ಹೊಮ್ಮುವಂತೆ ಪದ್ಯ-ಗದ್ಯ ಖಂಡಗಳ ಒಂದು ಅನುಬಂಧವನ್ನು ಸೇರಿಸಲಾಗುತ್ತದೆ.

ಪ್ರತಿ ಸಂಪುಟದಲ್ಲಿಯೂ ಸಂಪಾದಕರ ಒಂದು ಸಮೀಕ್ಷೆ ಇರುತ್ತದೆ.

ನಾಡಿನ ಹಲವಾರು ಹೆಸರಾಂತ ವಿದ್ವಾಂಸರೂ ವಿಮರ್ಶಕರೂ ಲೇಖನಗಳನ್ನು ಬರೆಯಲು ದಯಮಾಡಿ ಒಪ್ಪಿರುತ್ತಾರೆ.